
ಅಖಿಲ ಭಾರತ ೬೫ನೆಯ ಕನ್ನಡ ಸಾಹಿತ್ಯ ಸಮ್ಮೇಳನ

ಹಾಸನ

೨೧, ೨೨, ೨೩, ೨೪ ಡಿಶಂಬರ ೧೯೯೬



ಸಮ್ಮೇಳನಾಧ್ಯಕ್ಷ

ಶ್ರೀ ಚೆನ್ನವೀರ ಕಣವಿ ಅವರ

ಆಶಯ ಭಾಷಣ

ಕನ್ನಡ ಸಾಹಿತ್ಯ ಪರಿಷತ್ತು

ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ

ಬೆಂಗಳೂರು - ೫೬೦ ೦೧೮.

ಒಂದಕ್ಕೊಂಬತ್ತ ನುಡಿದು,
ಕಣ್ಣ ಕೆಂಚನೆ ಮಾಡಿ, ಗಂಡುಗೆದರಿ,
ಮುಡುಹಿಕ್ಕಿ ಕೆಲವರ ಕಂಡಡಂಜುವೆ, ಓಸರಿಸುವೆ !
ಓಡಿದೆನೆಂಬ ಭಂಗವಾದಡಾಗಲಿ;
ನಮ್ಮ ಕೂಡಲ ಸಂಗನ ಶರಣರ
ಅನುಭಾವವಿಲ್ಲದವರ
ಹೊಲ ಮೇರೆಯ ಹೊಂದೆ,
ಹೊಲನ ಬಿಟ್ಟೋಡುವೆ !

— ಬಸವಣ್ಣ

ಮುದ್ರಣ : ಮನೋಹರ ಮುದ್ರಣಾಲಯ, ಧಾರವಾಡ

ಅಖಿಲ ಭಾರತ ೬೫ನೆಯ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷ

ಶ್ರೀ ಚೆನ್ನವೀರ ಕಣವಿ

ಅವರ ಆಶಯ ಭಾಷಣ

"ದೇವಲೀಲೆಯೊ ಕಾಣೆ, ಕರ್ಮಜಾಲವೊ ಕಾಣೆ
ಅದು ನಮ್ಮ ಬುದ್ಧಿಯಾಚೆಗಿನ ಮಾತು;
ಯಾವುದೇನೇ ಇರಲಿ, ಪ್ರೀತಿಯಂಥಾ ವಸ್ತು
ಭವದಲ್ಲಿ ಕಾಣೆ, ಮನಗಂಡ ಮಾತು"

– ಮಧುರಚೆನ್ನ

ನನ್ನ ಪ್ರೀತಿಯ ಕನ್ನಡ ಬಂಧುಗಳೇ,

ನಮ್ಮ ಹಿರಿಯ ಕವಿ ಪು. ತಿ. ನ. ಅವರು ನನಗೆ ಬರೆದ ಅಭಿನಂದನ ಪತ್ರದಲ್ಲಿಯ ಒಂದು ಮಾತು ಹೀಗಿದೆ: 'ಕನ್ನಡ ನಾಡಿನ ಎಲ್ಲ ಭಾಗಗಳಿಂದಲೂ ಮತ್ತು ಹೊರನಾಡುಗಳಿಂದಲೂ ಹೊಮ್ಮಿ ಹರಿದು ಬರುವ ಕನ್ನಡಿಗರ ನೆರವಿಯನ್ನು ನೋಡುವುದೇ ಒಂದು ಸಂತೋಷ. ಅದರಲ್ಲೂ ವೇದಿಕೆ ಮೇಲಿನ ಅಧ್ಯಕ್ಷ ಸ್ಥಾನದಿಂದ ಅವರ ದರ್ಶನ ಇನ್ನೂ ಆನಂದದಾಯಕವಾದದ್ದು'. ಅಂಥ 'ದರ್ಶನ' ದ ಆನಂದವನ್ನು ತಾವೆಲ್ಲರೂ ನನಗೆ ದಯಪಾಲಿಸಿರುವ ಇಂದಿನ ಸಂದರ್ಭದಲ್ಲಿ ೫೨ ವರ್ಷಗಳ ಹಿಂದೆ ನಾನು ಹಾಯಸ್ಕೂಲ್ ವಿದ್ಯಾರ್ಥಿಯಾಗಿದ್ದಾಗ ನೋಡಿದ ಮೊಟ್ಟ ಮೊದಲ ಸಾಹಿತ್ಯ ಸಮ್ಮೇಳನದ ನೆನಪಾಗುತ್ತದೆ.

೧೯೪೪ರಲ್ಲಿ ರಬಕವಿಯಲ್ಲಿ ನಡೆದ ಆ (೨೮ನೆಯ) ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿದವರು ಧಾರವಾಡದ ಪ್ರೊ. ಶಿ. ಶಿ. ಬಸವನಾಳರು. ಅಂದು ಜೋಳದರಾಶಿ ದೊಡ್ಡನಗೌಡರ ಕಂಚಿನ ಕಂಠದಿಂದ ಹೊಮ್ಮಿದ ಪ್ರಾರ್ಥನೆ ಸುತ್ತಲಿನ ಕಟ್ಟಡಗಳಿಂದ ಪ್ರತಿಧ್ವನಿತಗೊಂಡಿತ್ತು. ಒಬ್ಬರು ಮೆಲ್ಲನೆ ಮೇಲೆದ್ದು ಮುಗುಳು ನಗುತ್ತಲೇ ಪ್ರೀತಿ ತುಂಬಿದ ಧ್ವನಿಯಲ್ಲಿ 'ಅಣ್ಣಂದಿರೇ, ತಾಯಂದಿರೇ' ಎಂದು ಸಂಬೋಧಿಸಿ ಕನ್ನಡದ ಬಗ್ಗೆ ಅತ್ಯಂತ ಕಳಕಳಿಯಿಂದ ಮಾತನಾಡಿದ್ದನ್ನು ನಾನು ಮಂತ್ರಮುಗ್ಧನಾಗಿ ಕೇಳಿದೆ. ಅವರೇ ಮಾಸ್ತಿಯವರು ಎಂದು ತಿಳಿದಾಗ ನನಗೆ ನಿಜಕ್ಕೂ ರೋಮಾಂಚನವಾಯಿತು. ಕವಿಗೋಷ್ಠಿಯ ಉದ್ಘಾಟಕರಾಗಿ ಬಿ. ಎಂ. ಶ್ರೀ. ಅವರ ಕಾವ್ಯವಾಣಿ ಕಿವಿಗಳನ್ನು ತುಂಬಿತು. ಆಗ ಪ್ರಗತಿಶೀಲ ಸಾಹಿತ್ಯ ಕುರಿತು ಪತ್ರಿಕೆಗಳಲ್ಲಿ ನಡೆಯುತ್ತಿದ್ದ (ಮುಖ್ಯವಾಗಿ 'ಉಷಾ' ಮಾಸಪತ್ರಿಕೆ) ವಾದ–ವಿವಾದವನ್ನು ನಾನು ಗಮನಿಸಿದ್ದೆನಾದ್ದರಿಂದ ಗೋಕಾಕರ ಅಧ್ಯಕ್ಷತೆಯಲ್ಲಿ ನಡೆದ ಪ್ರಗತಿಶೀಲ ಸಾಹಿತ್ಯ ಗೋಷ್ಠಿ ಸಹಜವಾಗಿಯೇ ನನ್ನ ಕುತೂಹಲವನ್ನು ಕೆರಳಿಸಿತ್ತು. ಆ ಗೋಷ್ಠಿಯಲ್ಲಿ

ಅ. ನ. ಕೃ., ತ. ರಾ. ಸು., ಕುಳಕುಂದ ಶಿವರಾಯ (ನಿರಂಜನ), ನಾಡಿಗೇರ ಕೃಷ್ಣರಾಯ, ಅರ್ಚಕ ವೆಂಕಟೇಶ, ಮಾ. ನಾ. ಚೌಡಪ್ಪ ಇವರು ಭಾಗವಹಿಸಿ ಆವೇಶದಿಂದ ಮಾತನಾಡಿದ್ದು ನನಗಿನ್ನೂ ನೆನಪಿದೆ. ಉತ್ತಂಗಿ ಚೆನ್ನಪ್ಪನವರು, ಜಿ. ಪಿ. ರಾಜರತ್ನಂ, ಸಿಂಪಿ ಲಿಂಗಣ್ಣ, ಈಶ್ವರ ಸಣಕಲ್ ಮೊದಲಾದವರು ಬೇರೆ ಬೇರೆ ಗೋಷ್ಠಿಗಳ ಅಧ್ಯಕ್ಷರಾಗಿ, ಉದ್ಘಾಟಕರಾಗಿ ತಮ್ಮ ತಮ್ಮ ವಿಶಿಷ್ಟ ಶೈಲಿಯಲ್ಲಿ ಭಾಷಣ ಮಾಡಿದ್ದನ್ನು ನಾನು ಇಂದಿಗೂ ಮರೆತಿಲ್ಲ. ಮಲ್ಲಿಕಾರ್ಜುನ ಮನಸೂರ ಅವರ ಸಂಗೀತವಂತೂ ಸಭಿಕರನ್ನು ಮಂತ್ರಮುಗ್ಧರನ್ನಾಗಿಸಿತ್ತು.

ನಾನು ಮೇಲೆ ಹೆಸರಿಸಿದ ಈ ಎಲ್ಲ ಮಹನೀಯರು ಇಂದು ಕಣ್ಮರೆಯಾಗಿದ್ದರೂ ತಮ್ಮ ಅಮೂಲ್ಯವಾದ ಸಾಹಿತ್ಯ ಕೃತಿಗಳ ಮೂಲಕ ಜೀವಂತವಾಗಿ ನಮ್ಮಲ್ಲಿ ಉಸಿರಾಡುತ್ತಿದ್ದಾರೆ. ಸ್ಫೂರ್ತಿದಾಯಕವಾದ ಈ ಪ್ರಸಂಗವನ್ನು ಇಲ್ಲಿ ಹೇಳಬೇಕಾಗಿ ಬಂದ ಉದ್ದೇಶವಿಷ್ಟೆ. ಸಾಹಿತ್ಯ ಸಮ್ಮೇಳನ ಬಹಿರಂಗದಲ್ಲಿ, ಸಂಖ್ಯಾ ಬಾಹುಳ್ಯದಿಂದ 'ಜಾತ್ರೆ'ಯ ಸ್ವರೂಪವನ್ನು ಪಡೆದಿದ್ದರೂ ಅಂತರಂಗದಲ್ಲಿ ಸಾಹಿತ್ಯ ಯಾತ್ರೆಯಾಗಿ ಪರಿಣಮಿಸುವುದನ್ನು ಮರೆಯಬಾರದು. ಸಾಹಿತ್ಯ ಪ್ರೇಮಿಗಳ, ವಾಚನಾಸಕ್ತರ ದೊಡ್ಡ ಜನಸಮೂಹದ ಸಮ್ಮುಖದಲ್ಲಿಯೂ ಸಾರ್ವಜನಿಕ ಆವೇಶ, ಭಾವುಕ ಪ್ರತಿಕ್ರಿಯೆಗಳನ್ನು ದೂರವಿಟ್ಟು, ಮೌಲಿಕ ಚರ್ಚೆ ನಡೆಸುವುದು ಅಸಾಧ್ಯವೇನೂ ಅಲ್ಲ. ಅಸಾಹಿತ್ಯಕವಾದ ರಾಜಕೀಯ ಒತ್ತಡಗಳಿಗೆ ಮಾತ್ರ ಪರಿಷತ್ತು ಮಣಿಯದಂತಿದ್ದರೆ ಸಾಕು, ಅದರ ಗೌರವ ಹೆಚ್ಚುವುದರಲ್ಲಿ ಸಂದೇಹವಿಲ್ಲ. ನಿಜವಾದ, ಜೀವಂತವಾದ ಸಾಹಿತ್ಯದ ಕೆಲಸಗಳಿಗೂ ಇದರಿಂದ ದಾರಿ ಸುಗಮಗೊಳ್ಳಬಹುದೆಂದು ನಾನು ಆಶಿಸಿದ್ದೇನೆ.

ಉಜ್ವಲವಾದ ಇತಿಹಾಸ, ಸಾಹಿತ್ಯ, ಶಿಲ್ಪ ಕಲೆ ಹಾಗೂ ನಿಸರ್ಗ ಸೌಂದರ್ಯದ ನೆಲೆವೀಡಾದ ಹಾಸನ ಜಿಲ್ಲೆಯ ಕೇಂದ್ರ ಸ್ಥಳದಲ್ಲಿ ಸಮಾವೇಶಗೊಂಡಿರುವ ಅರವತ್ತೈದನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸ್ಥಾನದಲ್ಲಿ ನನ್ನನ್ನು ನಿಲ್ಲಿಸಿ, ನಿಮ್ಮ ಅತಿಶಯವಾದ ಪ್ರೀತಿ, ಗೌರವಗಳಿಂದ ನನ್ನನ್ನು ಮೂಕ ವಿಸ್ಮಿತನನ್ನಾಗಿ ಮಾಡಿದ್ದೀರಿ. ಈ ಗೌರವಕ್ಕೆ ಹೆಚ್ಚು ಅರ್ಹರಾದ ಹಿರಿಯರಿಗೆ, 'ಎನಗಿಂತ ಕಿರಿಯರಿಲ್ಲ' ಎಂದು ನಂಬಿರುವ ನಾನು, ಮೊಟ್ಟಮೊದಲು ನಮಸ್ಕರಿಸುತ್ತೇನೆ. ತಾವು ತೋರಿಸಿದ ಗೌರವಕ್ಕಿಂತ ಪ್ರೀತಿ ದೊಡ್ಡದು ಎಂದು ಭಾವಿಸಿ ಇದಕ್ಕೆಲ್ಲ ಮುಖ್ಯ ಕಾರಣರಾದ ಕನ್ನಡ ಸಾಹಿತ್ಯ ಪರಿಷತ್ತಿನ ಮಾನ್ಯ ಅಧ್ಯಕ್ಷರಿಗೆ, ಕಾರ್ಯಕಾರಿ ಸಮಿತಿಯ ಸದಸ್ಯರಿಗೆ ಹಾಗೂ ಸಮ್ಮೇಳನದ ಸ್ವಾಗತ ಸಮಿತಿಯ ಅಧ್ಯಕ್ಷರನ್ನೊಳಗೊಂಡು ಎಲ್ಲ ಕಾರ್ಯಕರ್ತರಿಗೆ ನನ್ನ ತುಂಬು ಹೃದಯದ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ದೇಶಕ್ಕೆ ಸ್ವಾತಂತ್ರ್ಯ ಬಂದ ನಂತರದಲ್ಲಿ ಕರ್ನಾಟಕದ ಮುಖಂಡರೊಬ್ಬರು ಪ್ರಪ್ರಥಮವಾಗಿ ರಾಷ್ಟ್ರದ ಪ್ರಧಾನ ಮಂತ್ರಿ ಹುದ್ದೆಯನ್ನು ಅಲಂಕರಿಸಿರುವ ಈ ಪರ್ವಕಾಲದಲ್ಲಿ, ಈ ಸಾಹಿತ್ಯ ಸಮ್ಮೇಳನ ಅವರಿಂದಲೇ ಉದ್ಘಾಟನೆಯಾದುದು ಕನ್ನಡಿಗರಿಗೆಲ್ಲ ಅತ್ಯಂತ ಹೆಮ್ಮೆಯನ್ನುಂಟು ಮಾಡಿದೆ. ಸರಳತೆಯನ್ನೂ ಪ್ರಬುದ್ಧತೆಯನ್ನೂ

ತಮ್ಮ ವ್ಯಕ್ತಿತ್ವದಲ್ಲಿ ಮೇಳವಿಸಿಕೊಂಡು, ದುಡಿತವೇ ದೊಡ್ಡ ಗುಣವಾಗಿರುವ ಹರದನಹಳ್ಳಿ ದೊಡ್ಡೇಗೌಡ ದೇವೇಗೌಡರು ಪ್ರಬಲವಾದ ಕರ್ತವ್ಯ ಪ್ರಜ್ಞೆ ಹಾಗೂ ಕಾರ್ಯಸಾಧನೆಗೆ ಪೂರಕವಾದ ಪರಿಶ್ರಮದಿಂದ ತಮ್ಮ ದಕ್ಷತೆಯನ್ನು ಪ್ರಕಟಪಡಿಸಿದ್ದಾರೆ. ತಮ್ಮ ಮುಂದಿರುವ ಸಮಸ್ಯೆಗಳನ್ನು, ಸವಾಲುಗಳನ್ನು ಧೈರ್ಯದಿಂದ ಎದುರಿಸಿ ರಾಷ್ಟ್ರವನ್ನು ಪ್ರಗತಿಪಥದಲ್ಲಿ ಮುನ್ನಡೆಸುವ ಶಕ್ತಿ, ಸೌಭಾಗ್ಯಗಳನ್ನು ಕನ್ನಡ ಜನಶಂಕರಿ ಅವರಿಗೆ ದಯ ಪಾಲಿಸಲೆಂದು ಸಮಸ್ತ ಕನ್ನಡಿಗರ ಪರವಾಗಿ ಹಾರೈಸುತ್ತೇನೆ.

ಸಂಸತ್ತಿನಲ್ಲಿ ಮೊಟ್ಟಮೊದಲ ಬಾರಿ ಕನ್ನಡದಲ್ಲಿ ಮಾತನಾಡಿ ಇತಿಹಾಸವನ್ನು ನಿರ್ಮಿಸಿದ, ಸಮಾಜವಾದಿ ವಿಚಾರಧಾರೆಯ ವ್ಯಕ್ತಿತ್ವದ, ಸನ್ಮಾನ್ಯ ಶ್ರೀ ಜಯದೇವಪ್ಪ ಹಾಲಪ್ಪ ಪಟೇಲ ಅವರು ಸಾಹಿತ್ಯ ಮತ್ತು ಸಂಸ್ಕೃತಿ ಸಂವರ್ಧನೆಯಲ್ಲಿ ವಿಶೇಷ ಕಾಳಜಿಯುಳ್ಳವರು. ಅವರು ಕರ್ನಾಟಕದ ಮುಖ್ಯಮಂತ್ರಿಗಳಾಗಿರುವ ಈ ಸಂದರ್ಭದಲ್ಲಿ, ಅಭಿವೃದ್ಧಿಯ ಮಾರ್ಗದಲ್ಲಿ ಪ್ರಾದೇಶಿಕ ಅಸಮತೋಲನದಿಂದಾಗಿ ನಾಡಿನ ವಿವಿಧ ಭಾಗದ ಕನ್ನಡಿಗರಲ್ಲಿ ಉಂಟಾಗಿರುವ ಅಸಮಾಧಾನವನ್ನು ಹೋಗಲಾಡಿಸಿ, ಸಮಗ್ರ ಕರ್ನಾಟಕದ ಸರ್ವತೋಮುಖ ಪ್ರಗತಿಗೆ ಕಾರಣರಾಗುವರೆಂಬ ಭರವಸೆಯಿಂದ ಅವರಿಗೆ ಶುಭ ಕೋರುತ್ತೇನೆ.

ಕನ್ನಡ ಸಾಹಿತ್ಯ ಪರಿಷತ್ತು ನಮ್ಮ ನಾಡಿನ ಬಹು ದೊಡ್ಡ ಪ್ರಾತಿನಿಧಿಕ ಸಂಸ್ಥೆ. ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದ ತರುವಾಯ ಸಮಸ್ತ ಕರ್ನಾಟಕದ ವ್ಯಾಪ್ತಿಯುಳ್ಳ ಸಂಸ್ಥೆಯೆಂದರೆ ಇದೊಂದೇ. ಇದರ ಕಾರ್ಯರಂಗ ಹಾಗೂ ಹೊಣೆಗಾರಿಕೆ ಹರಡಿಕೊಂಡು ಬಂದಂತೆ, ತಮ್ಮನ್ನು 'ತಾಯ್ನುಡಿಯ ತಮ್ಮಡಿ' ಎಂದು ಕರೆದುಕೊಂಡ ನಾಡಿನ ಹಿರಿಯರು ಕನ್ನಡ ನಾಡು, ನುಡಿ, ಸಂಸ್ಕೃತಿಗಳ ಬೆಳವಣಿಗೆಗಾಗಿ ಹಿರಿದಾದ ಸೇವೆಯನ್ನು ಸಲ್ಲಿಸಿ, ನುಡಿಯ ಮಕ್ಕಳನ್ನು ಒಂದಾಗಿಸಿ, ಸೌಹಾರ್ದದಿಂದ ಬೆಳೆಸಿ, ಕನ್ನಡಿಗರೆಲ್ಲರ ಸಾಂಸ್ಕೃತಿಕ ಆಶೋತ್ತರಗಳನ್ನು ರೂಪಿಸುವಲ್ಲಿ ತಮ್ಮ ಆತ್ಮಶಕ್ತಿಯನ್ನು ಈ ಸಂಸ್ಥೆಗೆ ಧಾರೆಯೆರೆದು ಇದರ ಕ್ರಿಯಾ ಶಕ್ತಿಯನ್ನು ಹೆಚ್ಚಿಸುತ್ತ ಬಂದಿದ್ದಾರೆ. ಆ ಎಲ್ಲ ಹಿರಿಯ ಚೇತನಗಳನ್ನು ಸ್ಮರಿಸಿಕೊಂಡು, ಹೊಸ ಕಾಲದ ಅಗತ್ಯಗಳನ್ನು ಅರಿತುಕೊಂಡು ಎಲ್ಲರೂ ಒಂದಾಗಿ ಮುಂದುವರಿಯೋಣ.

ತಮ್ಮ ಕಲೆ, ಪ್ರತಿಭೆ ಹಾಗೂ ಗುಣ ಸಂಪನ್ನತೆಯಿಂದ ಕನ್ನಡಿಗರ ಹೃದಯದಲ್ಲಿ ಶಾಶ್ವತ ಸ್ಥಾನ ಪಡೆದಿರುವ ನಮ್ಮ ಮೇರು ನಟ ಪದ್ಮಭೂಷಣ ಕರ್ನಾಟಕ ರತ್ನ, ಡಾ. ರಾಜಕುಮಾರ ಅವರಿಗೆ ದಾದಾ ಸಾಹೇಬ ಫಾಲ್ಕೆ ಪ್ರಶಸ್ತಿ ಸಂದಿರುವುದು ಅತ್ಯಂತ ಅಭಿಮಾನದ ಸಂಗತಿಯಾಗಿದೆ. ಸಿನಿಮಾ ಮಾಧ್ಯಮದ ಒಟ್ಟು ವಿಶಿಷ್ಟ ಕೊಡುಗೆಗಾಗಿ ಈ ಪ್ರಶಸ್ತಿ ಸಂದಿದ್ದರೂ ಡಾ. ರಾಜಕುಮಾರ ಅದನ್ನೆಲ್ಲ ಮೀರಿ ಆಗಾಧವಾಗಿ ಬೆಳೆದವರು. ಕನ್ನಡತನಕ್ಕೂ ತಮಗೂ ಇರುವ ಕಳ್ಳುಬಳ್ಳಿಯನ್ನು ಗೋಕಾಕ ಚಳವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸುವುದರ ಮೂಲಕ ವ್ಯಕ್ತಪಡಿಸಿದ ಈ ಕನ್ನಡದ ಕಣ್ಮಣಿಗೆ ದೊರೆತ ಅಪ್ರತಿಮ ಗೌರವಕ್ಕಾಗಿ ಸಮಸ್ತ ಕನ್ನಡಿಗರ ಪರವಾಗಿ ಹಾರ್ದಿಕ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಕನ್ನಡ ನಾಡು ಮುಧೋಳ ಸಾಹಿತ್ಯ ಸಮ್ಮೇಳನದಿಂದೀಚೆಗೆ ಹಲವಾರು ಅಮೂಲ್ಯವಾದ ಜೀವರತ್ನಗಳನ್ನು ಕಳೆದುಕೊಂಡು ನಿಜಕ್ಕೂ ಬಡವಾಗಿದೆ. ಕಲೆಯಲ್ಲಿ ಉತ್ತುಂಗ ಸಾಧನೆಯನ್ನು ಮಾಡಿ, ರಾಷ್ಟ್ರೀಯ ಪ್ರಶಸ್ತಿಗಳನ್ನು ಗಳಿಸಿ, ಅಪಾರವಾದ ಕಲಾ ಸಂಪತ್ತನ್ನು ಮುಂದಿನ ತಲೆಮಾರಿಗೆ ಬಿಟ್ಟುಕೊಟ್ಟ ಪದ್ಮಭೂಷಣ ಕಟ್ಟಂಗೇರಿ ಕೃಷ್ಣ ಹೆಬ್ಬಾರರು; ಸೃಜನಶೀಲ ಪ್ರತಿಭೆ ಮತ್ತು ಪಾಂಡಿತ್ಯಗಳು ಅಪೂರ್ವ ರೀತಿಯಲ್ಲಿ ಮೇಳವಿಸಿದ ಧೀಮಂತ ಲೇಖಕ ಸೇಡಿಯಾಪು ಕೃಷ್ಣ ಭಟ್ಟರು; ಆಧುನಿಕ ಕನ್ನಡ ಕಥನ ಕಾವ್ಯಮಾರ್ಗ ಕಂಡ ಸಜ್ಜನ ಕವಿ ಸು. ರಂ. ಎಕ್ಕುಂಡಿಯವರು; ಕನ್ನಡದಲ್ಲಿ ಲಿಮರಿಕ್‌ಗಳನ್ನು ಹದಗೊಳಿಸಿದ ರಸಿಕತೆಯ ಕುಶಲ ಕವಿ ಹಾಗೂ ಭಾಷಾ ಶಾಸ್ತ್ರಜ್ಞ ಬಿಳಿಗಿರಿಯವರು, ಪ್ರಶಸ್ತಿಗಳನ್ನು ತಿರಸ್ಕರಿಸಿ, ನಿಜವಾದ ಸಮಾಜ ಸೇವಕರಾಗಿದ್ದ, ಕಾವಿ ಬಟ್ಟೆಯ ಸೋಗಿಲ್ಲದ 'ತಿರುಕ' ಕಾವ್ಯ ನಾಮದ ಮಲ್ಲಾಡಿಹಳ್ಳಿ ರಾಘವೇಂದ್ರ ಸ್ವಾಮಿಗಳು, ನರ್ಮ ವಿನೋದದ ಪ್ರಬಂಧಕಾರ, ಎನ್. ಎಸ್. ಗದಗಕರ, ಹಿರಿಯ ಸ್ವಾತಂತ್ರ್ಯ ಹೋರಾಟಗಾರ, ಮಾಜಿ ಸಚಿವ ಹಾಗೂ ಗ್ರಂಥಕರ್ತ ಕೆ. ಎಫ್. ಪಾಟೀಲರು, ಕರ್ನಾಟಕ ವಿಶ್ವವಿದ್ಯಾಲಯದ ಮಾಜಿ ಕುಲಪತಿ, ಶಿಕ್ಷಣ ತಜ್ಞ ಹಾಗೂ ಲೇಖಕ ಸದಾಶಿವ ಒಡೆಯರ, ಪಂಡಿತವರೇಣ್ಯ ವೆಂಕಟರಾಯ ಸುರತ್ಕಲ್ ಅವರು, ಅಕಾಲ ಮರಣಕ್ಕೀಡಾದ ನಟ ಹಾಗೂ ಲೇಖಕ ಗುತ್ತಿಗೇರಿ ಮಾನಪ್ಪ ನಾಯಕ ಅವರು (ಮಾನು), ರಂಗೋಲಿ ಕಲೆಯಲ್ಲಿ ಅನೇಕ ವಿನ್ಯಾಸಗಳನ್ನು ನಿರ್ಮಿಸಿದ ಕಲಾವಿದ ಬಾಯಿರಿ ಅವರು, 'ಇಂಗ್ಲೀಷ-ಕನ್ನಡ ವೈದ್ಯ ಪದ ಕೋಶಗಳ ಹುಟ್ಟು ರಚನೆ' ಯಂಥ ಗ್ರಂಥಗಳನ್ನು ಏಂಕಾಗಿಯಾಗಿ ರಚಿಸಿದ್ದಲ್ಲದೆ ಕನ್ನಡದಲ್ಲಿ ವೈದ್ಯಕೀಯ ಬರವಣಿಗೆಗೆ ಮಾದರಿ ಒದಗಿಸಿದ ಡಾ. ಡಿ. ಎಸ್. ಶಿವಪ್ಪ ಅವರು, 'ಕನ್ನಡದ ಕೂಲಿ' ಎಂಬ ನಮ್ರತೆಯ ಕನ್ನಡದ ಕಟ್ಟಾಳು ಶ್ರೀ ರಾಮ ಜಾಧವ, ಕನ್ನಡದಲ್ಲಿ ಅರ್ಥಶಾಸ್ತ್ರ ಸಾಹಿತ್ಯವನ್ನು ಬೆಳೆಸಿದ ಹಾಗೂ 'ಭಾರತದ ಸ್ವಾತಂತ್ರ್ಯ ಚಳವಳಿ' ಮೊದಲಾದ ಗ್ರಂಥಗಳ ಕರ್ತೃಗಳಾದ ಪ್ರೊ. ಎ. ಪಿ. ಶ್ರೀನಿವಾಸ ಮೂರ್ತಿ ಅವರು, ಆಧುನಿಕರಲ್ಲಿ ಅತ್ಯಧಿಕ ವಚನಗಳನ್ನೂ, ಮಹಾಕಾವ್ಯಗಳನ್ನೂ ರಚಿಸಿದ ಡಾ. ಜ. ಚ. ನಿ.ಯವರು, ಹುಬ್ಬಳ್ಳಿಯ ಹಿರಿಯ ಕವಿ ಕಾವ್ಯಕಿನ್ನರಿ ಗಂಗಪ್ಪ ವಾಲಿ, ಹೆಸರಿಸಲಾಗದೆ ಉಳಿದಿರ ಬಹುದಾದ ಇನ್ನೂ ಹಲವು ಹಿರಿ ಕಿರಿಯ ಪ್ರತಿಭಾವಂತರು, ಭಾವಗೋಚರವಾಗಿ ಚಿರಸ್ಮರಣೀಯರಾಗಿದ್ದಾರೆ. ಈ ಎಲ್ಲ ಚೇತನಗಳನ್ನು ಸ್ಮರಿಸಿಕೊಂಡು ಮುಂದೆ ಸಾಗುತ್ತೇನೆ.

೨

ಆಡು ಮುಟ್ಟದ ಗಿಡವಿಲ್ಲವೆನ್ನುವಂತೆ ಈವರೆಗಿನ ಸಮ್ಮೇಳನಾಧ್ಯಕ್ಷರುಗಳು ಪ್ರತಿಪಾದಿಸದೆ ಇರುವ ವಿಷಯಗಳೇ ಇಲ್ಲವೆಂದು ಹೇಳಬಹುದು. ತಮ್ಮ ಪಾಂಡಿತ್ಯ, ಅನುಭವ, ಸ್ಫೂರ್ತಿ, ದಕ್ಷತೆಗಳಿಂದ ನಾಡು-ನುಡಿ-ಸಂಸ್ಕೃತಿಗೆ ಸಂಬಂಧಪಟ್ಟಂತೆ ಅವರು ಅನೇಕ ಸಲಹೆಗಳನ್ನು ನೀಡಿ ಮಾರ್ಗದರ್ಶನ ಮಾಡಿರುವುದಲ್ಲದೆ ಕಾಲ ಕಾಲಕ್ಕೆ ಕನ್ನಡಿಗರಲ್ಲಿ ತಮ್ಮ ಕರ್ತವ್ಯದ ಅರಿವನ್ನು ಮೂಡಿಸುತ್ತ ಬಂದಿದ್ದಾರೆ. ಇಂಥ ಸಂದರ್ಭದಲ್ಲಿ ಹೊಸದೇನನ್ನೋ ಹೇಳುತ್ತಿದ್ದೇನೆಂಬ ಭ್ರಮೆ ನನಗೆ ಎಳ್ಳಷ್ಟೂ ಇಲ್ಲ.

ನಮ್ಮ ಜನರಲ್ಲಿ ಸಾಹಿತ್ಯದ ಬಗ್ಗೆ ಸದಭಿರುಚಿಯನ್ನೂ ಸಂಸ್ಕೃತಿ ಸಂವರ್ಧನೆಯಲ್ಲಿ ಆಸಕ್ತಿಯನ್ನೂ ಸಮಾಜದಲ್ಲಿ ಸಾಮರಸ್ಯವನ್ನೂ ನಾಡು-ನುಡಿಗಳಲ್ಲಿ ಅಭಿಮಾನವನ್ನೂ ಅಭಿವೃದ್ಧಿಗೊಳಿಸುವ ದಿಸೆಯಲ್ಲಿ ನಾಲ್ಕು ಮಾತುಗಳನ್ನು ಆಡಬೇಕಾದುದು ನನ್ನ ಕರ್ತವ್ಯವೆಂದು ಭಾವಿಸಿದ್ದೇನೆ.

ನಾವು ಕೂಡಿರುವ ಈ ಜಿಲ್ಲೆಯ ಸಾಂಸ್ಕೃತಿಕ ಪರಿಸರದಲ್ಲಿಯೇ ನಮಗೆ ಇಂದಿಗೂ ಪ್ರಸ್ತುತವಾಗಬಲ್ಲ ಒಂದೆರಡು ಸಂಗತಿಗಳನ್ನು ಮೊದಲು ಪ್ರಸ್ತಾಪಿಸ ಬಹುದಾಗಿದೆ :

ಕಾಲದಿಂದ ಕಾಲಕ್ಕೆ ರಾಜಕೀಯ ಜೀವನದಲ್ಲಿ ಸ್ಥಿತ್ಯಂತರಗಳುಂಟಾಗುತ್ತಿದ್ದರೂ ಜನಜೀವನ ಅದರ ಪೆಟ್ಟುಗಳನ್ನು ಸಹಿಸಿಕೊಂಡು, ಸಾಂಸ್ಕೃತಿಕ ಪರಂಪರೆಯೊಂದನ್ನು ಸತತವಾಗಿ ಕಾಯ್ದುಕೊಂಡು ಬರಲು ಶಕ್ತವಾಗಿರುವುದನ್ನು ಕನ್ನಡ ನಾಡಿನ ಶಾಸನಗಳಿಂದ ತಿಳಿಯಬಹುದಾಗಿದೆ.

ಇದುವರೆಗೆ ದೊರೆತಿರುವ ಕನ್ನಡ ಶಾಸನಗಳಲ್ಲಿ ಅತ್ಯಂತ ಪ್ರಾಚೀನವಾದ ಕನ್ನಡದ ದಾಖಲೆ ಹೊಂದಿರುವ ಶಾಸನ (ಸುಮಾರು ಕ್ರಿ.ಶ. ೪೫೦) ಈ ಜಿಲ್ಲೆಯ ಬೇಲೂರು ತಾಲೂಕಿನ ಹಲ್ಮಿಡಿ ಎಂಬ ಊರಿನಲ್ಲಿ ಸಿಕ್ಕಿದ್ದು. ಶೈಲಿಯಲ್ಲಿ ಸ್ವಲ್ಪ ಮಟ್ಟಿನ ಸಾಹಿತ್ಯಿಕ ಸಂಸ್ಕಾರದಿಂದ, ಹಳಗನ್ನಡ ಪ್ರಾರಂಭಿಕ ಸಾಹಿತ್ಯಕ್ಕೆ ಒಂದು ಉದಾಹರಣೆಯಾಗಿಯೂ, ಮೊಟ್ಟಮೊದಲ ಗದ್ಯದ ಮಾದರಿಯಾಗಿಯೂ ಬನವಾಸಿಯ ಆದಿ ಕದಂಬರ ಈ ಶಿಲಾಲಿಪಿ ವಿಶೇಷ ಮಹತ್ವವನ್ನು ಪಡೆದುಕೊಂಡಿದೆ. ಕನ್ನಡ ಭಾಷೆ ಪಂಡಿತರ ಗಮನ ಸೆಳೆದದ್ದನ್ನೂ, ಕನ್ನಡಕ್ಕೆ ರಾಜಮನ್ನಣೆ ದೊರೆಯ ತೊಡಗಿದ್ದನ್ನೂ ಇದರಿಂದ ಗುರುತಿಸಬಹುದು. ತೀರ ಇತ್ತೀಚಿನ ಶೋಧನೆಯಿಂದ ಕಂಡು ಬಂದಂತೆ (ಡಾ. ಎಚ್. ಆರ್. ರಘುನಾಥ ಭಟ್) ಇದರ ಶೀರ್ಷ ಶಿಲ್ಪ (Head-piece) ದಲ್ಲಿರುವ ಸುದರ್ಶನ ಚಕ್ರದ ಭಾಗವಾಗಿ 'ಜ್ಯೋತಿ' ಯ ಸಂಕೇತವನ್ನು ಕಂಡರಿಸಿರುವುದು ಶಾಸನ ಪಾಠದಷ್ಟೇ ಮಹತ್ವಪೂರ್ಣವೂ ಅರ್ಥಗರ್ಭಿತವೂ ಆಗಿದೆ.

ಶಿಲ್ಪ ಮತ್ತು ವಾಸ್ತುಶಿಲ್ಪಗಳಿಂದಲೂ 'ಗೊಮ್ಮಟ' ವಿಗ್ರಹದ ಶಿಲ್ಪ ಪರಿಣತಿಯ ಪರಾಕಾಷ್ಠೆಯಿಂದಲೂ ಪ್ರಸಿದ್ಧವಾಗಿರುವ ಶ್ರವಣಬೆಳಗೊಳ ಅತ್ಯಂತ ಪ್ರಾಚೀನ ಸಾಂಸ್ಕೃತಿಕ ಕೇಂದ್ರವಾಗಿ, ಕಳೆದ ಎರಡೂವರೆ ಸಾವಿರ ವರುಷಗಳ ನಿರಂತರ ಇತಿಹಾಸವಿರುವ ಹಾಗೂ ತನ್ನ ಪರಂಪರೆಯನ್ನು ಇಂದಿಗೂ ಜೀವಂತವಾಗಿ ಉಳಿಸಿಕೊಂಡು ಬಂದಿರುವ ಸಾಂಸ್ಕೃತಿಕ ಕೇಂದ್ರವಾಗಿ ತನ್ನ ವೈಶಿಷ್ಟ್ಯವನ್ನು ಮೆರೆದಿದೆ. ಕನ್ನಡ ಭಾಷೆ ಮತ್ತು ಸಾಹಿತ್ಯಿಕ ಪರಂಪರೆಗಳ ಜೊತೆಗೆ ಅದಕ್ಕಿದ್ದ ಸಂಬಂಧ ಅತ್ಯಂತ ಗಮನಾರ್ಹವಾದದ್ದು. ಇನ್ನೂ ಒಂದು ವಿಶೇಷವೆಂದರೆ ಇಲ್ಲಿಯ ಶಾಸನಗಳಲ್ಲಿ ಎದ್ದು ಕಾಣುವ ಸಾಹಿತ್ಯ ಗುಣ. ಸಾಹಿತ್ಯ ಹೊಸ ರೂಪಗಳನ್ನು ಪಡೆಯುತ್ತ ಹೋದರೂ ಒಂದೆರಡು ಅಪವಾದಗಳನ್ನು ಬಿಟ್ಟರೆ ಶಾಸನಗಳು ಮಾತ್ರ ಚಂಪೂ ಶೈಲಿಯೊಂದನ್ನೇ ಅವಲಂಬಿಸಿದ್ದು ಕುತೂಹಲಕರವಾಗಿದೆ. ಹಾಗೆಯೇ ಬೇಲೂರು ಶಾಸನದ ಕಂದ ಪದ್ಯಗಳಲ್ಲಿ ಮೂಡಿ ಬಂದಿರುವ ಸುಟಿಯಾದ ವ್ಯಕ್ತಿಚಿತ್ರಗಳು ಚೊಕ್ಕವಾದ ಸಾಹಿತ್ಯ

ರೂಪಕ್ಕೆ ಮಾದರಿಯಾಗಿವೆ. ಗಣ್ಯರ ವ್ಯಕ್ತಿಚಿತ್ರಗಳೊಂದಿಗೆ ಪರೋಪಕಾರಿಯಾದ ಜನ ಸಾಮಾನ್ಯನೊಬ್ಬನ ಶಬ್ದಚಿತ್ರವೂ ಅಲ್ಲಿ ಮೂಡಿರುವುದು ಗಮನಾರ್ಹ.

ಹಸುಗೂಸುಗಳ್ಗೆ ಹಾಲಂ
ಹಸಿದರ್ಗನ್ನಮುಮನಕ್ಕರಿಂದಂ ನಿಚ್ಚಂ
ಹಸಗಾಲದೊಳಂ ಸಲಿಸುವ
ಬೆಸನದಿನಾರಾದಿಗೌಂಡನಂ ಪೋಲ್ವನ್ನರ್

ಭಾರತೀಯ ವಾಸ್ತುಶಿಲ್ಪದಲ್ಲಿಯೇ ಅಗ್ರಸ್ಥಾನವನ್ನು ಪಡೆಯಲರ್ಹವಾದ ಹಳೆಬೀಡಿನ ಹೊಯ್ಸಳೇಶ್ವರ ದೇವಾಲಯ ಮತ್ತು ವಾಸ್ತುಶಿಲ್ಪ ಹಾಗೂ ಶಿಲ್ಪಗಳ ಸಮನ್ವಯದಿಂದ ಒಂದು ಉತ್ಕೃಷ್ಟ ಕಲಾಕೃತಿಯಾಗಿ ಪರಿಣಮಿಸಿದ ಬೇಲೂರಿನ ಚೆನ್ನಕೇಶವ ದೇವಾಲಯ ಇವುಗಳಲ್ಲಿ ಕಂಡುಬರುವ ಸಂಕರವಿಲ್ಲದ ಶುದ್ಧ ಕರ್ನಾಟಕ ಕಲೆ ಭಾವಸಂಪತ್ತಿನ ಅಭಿವ್ಯಕ್ತಿಯಲ್ಲಿ ನಯಗೆಲಸಗಳ ನಿಪುಣತೆಯಲ್ಲಿ ವಿಶ್ವದ ಯಾವುದೇ ಶಿಲ್ಪಗಳನ್ನು ಮೀರಿಸಿದೆ. ಈ ಸಂದರ್ಭದಲ್ಲಿ ನಾವು ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ ಸಾಹಿತ್ಯ, ಕಲೆ, ಧರ್ಮ ಮತ್ತು ಬದುಕಿನಲ್ಲಿ ಸಮನ್ವಯವನ್ನು ಸಾಧಿಸಿದ ಕರ್ನಾಟಕ ಸಂಸ್ಕೃತಿಯ ಸ್ವರೂಪವನ್ನು. ಅನೇಕ ಧರ್ಮಗಳಿಗೆ ಆಶ್ರಯಸ್ಥಾನವಾಗಿದ್ದ ಕರ್ನಾಟಕ ನಿಜವಾದ ಅರ್ಥದಲ್ಲಿ ಧರ್ಮ ಸಮನ್ವಯ ಭೂಮಿಯಾಗಿತ್ತು. ಎಲ್ಲ ಧರ್ಮಗಳನ್ನು ಸಮಾನ ದೃಷ್ಟಿಯಿಂದ ಕಾಣುವ ಸಮನ್ವಯ ಸಂಸ್ಕೃತಿ ಕರ್ನಾಟಕದ ಸಹಜ ಗುಣವಾಗಿತ್ತಲ್ಲದೆ ಕನ್ನಡ ರಾಜರ ಉದಾತ್ತ ಆದರ್ಶವೂ ಆಗಿತ್ತು. ಬೇಲೂರಿನ ಶಾಸನದಲ್ಲಿರುವ ಒಂದು ಪದ್ಯ ಧಾರ್ಮಿಕ ಕ್ಷೇತ್ರದಲ್ಲಿರಬೇಕಾದ ವಿಶಾಲ ದೃಷ್ಟಿಗೆ ಚಿರಂತನವಾದ ಆದರ್ಶವನ್ನು ಒದಗಿಸಿದೆ :

ಯಂ ಶೈವಾಸ್ಸಮುಪಾಸತೇ ಶಿವ ಇತಿ ಬ್ರಹ್ಮೇತಿ ವೇದಾಂತಿನೋ ।
ಬೌದ್ಧಾ ಬುದ್ಧ ಇತಿ ಪ್ರಮಾಣ ಪಟವಃ ಕರ್ತೇತಿ ನೈಯ್ಯಾಯಿಕಾಃ ।।
ಅರ್ಹನ್ನಿತ್ಯಥ ಜೈನಶಾಸನರತಾಃ ಕರ್ಮೇತಿ ಮೀಮಾಂಸಕಾಃ ।।
ಸೋಯಂ ವೋ ವಿಧಧಾತು ವಾಂಛಿತ ಫಲಂ ಶ್ರೀ ಕೇಶವೇಶಸ್ಸದಾ ।।

ಶಿವ, ವಿಷ್ಣು, ಜಿನ, ಬುದ್ಧ ಈ ಮೊದಲಾದ ಅನಂತ ನಾಮರೂಪಗಳನ್ನುಳ್ಳ ಆ ವಿಶ್ವಚೈತನ್ಯ ಶಕ್ತಿ ಒಂದೇ ಎಂಬುದನ್ನು ಹೀಗೆ ಹೇಳಿದುದು ಮಾತ್ರವಲ್ಲದೆ ಅದನ್ನು ನಿತ್ಯಜೀವನದಲ್ಲಿ ಅಳವಡಿಸಿಕೊಂಡು ಮುನ್ನಡೆದ ಧಾರ್ಮಿಕ ಜೀವನದ ಚಿತ್ರವನ್ನು ಈ ಶಾಸನ ಮೂಡಿಸುತ್ತದೆ.

ಇನ್ನೂ ಒಂದು ಪ್ರಸಂಗವನ್ನು ಈ ಸಂದರ್ಭದಲ್ಲಿ ಅವಶ್ಯವಾಗಿ ನೆನೆಯಬೇಕು. ಕ್ರಿ.ಶ. ೧೩೬೮ರ ಶ್ರವಣಬೆಳ್ಗೊಳದ ಶಾಸನದಲ್ಲಿ ಅದು ಉಲ್ಲೇಖಿತವಾಗಿದೆ.

ಒಮ್ಮೆ ಶ್ರೀವೈಷ್ಣವರಿಗೂ ಜೈನರಿಗೂ ವ್ಯಾಜ್ಯವಾಗಿ ಜೈನರಿಗೆ ಹಾನಿ ತೊಂದರೆಗಳೊದಗಿರಲು, ಜೈನರು ವೀರ ಬುಕ್ಕರಾಯನಲ್ಲಿಗೆ ದೂರನ್ನೊಯ್ಯಲು ಆತನು, 'ಎರಡು ಧರ್ಮಗಳೂ ಒಂದು; ಭೇದವೆಣಿಸಲಾಗದು' ಎಂಬುದಾಗಿ ಹೇಳಿ,

ಎರಡೂ ಪಂಗಡದ ಧುರೀಣರನ್ನು ಕೈ ಕೈ ಹಿಡಿಸಿ ಸ್ನೇಹವನ್ನುಂಟು ಮಾಡಿದನು. ಜೈನ ಬಸದಿಗಳ ರಕ್ಷಣೆಗಾಗಿ ವೈಷ್ಣವರು, ವೈಷ್ಣವ ದೇವಾಲಯಗಳ ರಕ್ಷಣೆಗಾಗಿ ಜೈನರು ಹಣವನ್ನು ಕೊಡಬೇಕೆಂಬ ನಿಯಮ ಮಾಡಿದನಂತೆ. ಕೋಮು ಗಲಭೆಗಳಿಂದ ಆಗಾಗ ಜನಜೀವನ ಅಸ್ತವ್ಯಸ್ತಗೊಂಡು ಕುದಿಯುತ್ತಿರುವ ನಮ್ಮ ದೇಶದ ಇಂದಿನ ಸಂದರ್ಭದಲ್ಲಿ ಈ ಘಟನೆಗಳನ್ನಿಟ್ಟು ನೋಡಬೇಕು. ಕನ್ನಡ ನಾಡಿನ ಸಾಂಸ್ಕೃತಿಕ ಪರಂಪರೆಯಲ್ಲಿ ಹೀಗೆ ಆದರ್ಶವಾದದ್ದನ್ನು ನಮ್ಮ ಲೇಖಕರು ಮತ್ತೆ ಮತ್ತೆ ಪರಿಭಾವಿಸಿ ತಮ್ಮ ಕೃತಿಗಳ ಮೂಲಕ ಅಂಥ ತಿಳಿವಳಿಕೆಯನ್ನು ಹರಡುವುದಕ್ಕೆ ಕಾರಣರಾಗಬೇಕು. ನಮ್ಮ ಸಂಸ್ಕೃತಿಯಲ್ಲಿ ಶ್ರೇಷ್ಠವಾದದ್ದೆಲ್ಲ ನಮಗೆ ಸ್ಫೂರ್ತಿಯಾಗಿ ನಿಲ್ಲಬೇಕು.

೩

ಸಾವಿರ ವರ್ಷಗಳಷ್ಟು ಸಮೃದ್ಧಿಯುಳ್ಳ ಕನ್ನಡ ಸಾಹಿತ್ಯ ಚರಿತ್ರೆಯನ್ನು ಅವಲೋಕಿಸಿದರೆ ಜೀವನದಂತೆ ಸಾಹಿತ್ಯವೂ ಚಲನಶೀಲವಾಗಿ ಬದಲಾವಣೆಗೊಳ್ಳುತ್ತ ಬಂದರೆ ಮಾತ್ರ ತನ್ನ ಜೀವಂತಿಕೆಯನ್ನು ಅದು ಕಾಪಾಡಿಕೊಳ್ಳಬಲ್ಲದೆಂಬುದು ಸ್ಪಷ್ಟವಾಗುತ್ತದೆ. ಭಾಷೆ, ಛಂದಸ್ಸು, ರಾಜಕೀಯ, ಸಾಮಾಜಿಕ ಪರಿಸ್ಥಿತಿಗಳು, ಅಂದಂದಿನ ಕಾವ್ಯಕ್ಕೆ ಪ್ರಮುಖ ಪ್ರೇರಣೆಗಳಾಗಿದ್ದ ಮತ ಧರ್ಮಗಳು– ಇವೇ ಮೊದಲಾದವು ನಿದಾನವಾಗಿಯಾದರೂ ಬದಲಾವಣೆ ಪಡೆಯುತ್ತ ಬಂದಿವೆ. ತಮ್ಮ ಕಾಲದ ಪ್ರಮುಖ ಮೌಲ್ಯಗಳನ್ನು ಪ್ರತಿಪಾದಿಸುವುದರೊಂದಿಗೆ ಯುಗಶಕ್ತಿಯನ್ನು ತಮ್ಮ ಕಾವ್ಯದಲ್ಲಿ ಹಿಡಿದಿಟ್ಟ ಪಂಪ, ರನ್ನರಂಥ ಮಹಾಕವಿಗಳಿದ್ದಾಗಲೂ ಪಂಡಿತರ ಹಾಗೂ ವಿವಿಧ ಕಳಾಮಂಡಿತರ ಆಸಕ್ತಿ, ಅಭಿಪ್ರಾಯಗಳು ಅಂದಿನ ಕಾವ್ಯರೂಪ ಹಾಗೂ ಧೋರಣೆಗಳನ್ನು ನಿಯಂತ್ರಿಸಿರುವುದು ಕಂಡು ಬರುತ್ತದೆ. ಪ್ರೌಢವಾದ ಚಂಪೂ ಕಾವ್ಯಗಳ ಭಾಷೆ ಜನಸಾಮಾನ್ಯಕ್ಕೆ ನಿಲುಕುವಂತಿರಲಿಲ್ಲ. ಇಂಥ ಸಂದರ್ಭದಲ್ಲಿ ಧಾರ್ಮಿಕ ಹಾಗೂ ಸಾಮಾಜಿಕ ಜೀವನದಲ್ಲಿ ಉಂಟಾದ ಮೂಲಭೂತ ವ್ಯತ್ಯಾಸಗಳಿಂದಾಗಿ, ಹಾಗೆಯೇ ಸ್ವತಂತ್ರವಾದ ಮನೋಧರ್ಮ ಹಾಗೂ ದೃಷ್ಟಿಯಿಂದ ಹನ್ನೆರಡನೆಯ ಶತಮಾನದಲ್ಲಿ ವಚನಕಾರರಿಂದ ಸಾಹಿತ್ಯ ರೂಪದಲ್ಲಿ ಕ್ರಾಂತಿಕಾರಕ ಬದಲಾವಣೆಯಾಗಿ ಸಾಹಿತ್ಯದ ಭಾಷೆ, ಸುಲಭವಾಗಿ, ಸರಳವಾಗಿ ಸಾಮಾನ್ಯ ಜನಕ್ಕೆ ತಲುಪುವಂತಾಯಿತು.

ಹೀಗೆ ಹಿಂದಿನ ಕಾವ್ಯ ಬೇರೆ ಬೇರೆ ಹಂತಗಳಲ್ಲಿ ಒಂದು ಹೊಸ ತಿರುವನ್ನು ಪಡೆಯುತ್ತ ಬಂದಾಗ ಈ ಬದಲಾವಣೆ ಕವಿಗಳ ದೃಷ್ಟಿ, ಧ್ಯೇಯ, ಧೋರಣೆಗಳಲ್ಲಿ ಮಾತ್ರವಲ್ಲದೆ ಕಾವ್ಯದ ಭಾಷಾರೂಪ ಹಾಗೂ ಛಂದೋ ರೂಪಗಳಲ್ಲಿಯೂ ಕಾಣಿಸಿಕೊಂಡಿತು. ೧. ಚಂಪೂ ೨. ವಚನ, ರಗಳೆ, ಷಟ್ಪದಿ ೩. ಕೀರ್ತನ, ಸಾಂಗತ್ಯ ೪. ಭಾವಗೀತೆಗಳು ಎಂದು ನಾಲ್ಕು ವರ್ಗಗಳಲ್ಲಿ ಈ ತಿರುವುಗಳನ್ನು ಗುರುತಿಸಿ, ಅವುಗಳನ್ನು ನಾಲ್ಕು ಕ್ರಾಂತಿ ಘಟ್ಟಗಳೆಂದು ವಿಮರ್ಶಕರು ಸಮರ್ಪಕವಾಗಿಯೇ ಗುರುತಿಸಿದ್ದಾರೆ. ಕನ್ನಡ ಸಾಹಿತ್ಯದಲ್ಲಿಯೇ ವಿಶಿಷ್ಟವಾದ ಆಡು ಮಾತಿನ ಲಯದಲ್ಲಿ ರೂಪುಗೊಂಡ 'ವಚನ' ಸಮಾಜದ ವಿವಿಧ ಸ್ತರಗಳಿಂದ ಬಂದ ಶ್ರೀಸಾಮಾನ್ಯನ

ಸಾಹಿತ್ಯಾಭಿವ್ಯಕ್ತಿಯಾಗಿ ಭಾವ, ಭಾಷೆ, ಧೋರಣೆಗಳಲ್ಲಿ ಸಂಪೂರ್ಣ ಭಿನ್ನವಾಗಿರುವುದನ್ನು ಕಾಣುತ್ತೇವೆ. ವಚನ ಸಾಹಿತ್ಯದ ಈ ಪರಂಪರೆ ಹೊಸಗನ್ನಡ ಸಾಹಿತ್ಯದ ಮುಖ್ಯ ಪ್ರೇರಣೆಗಳಲ್ಲಿ ಒಂದಾಗಿದ್ದಲ್ಲದೆ ಮುಂದಿನ ಎಲ್ಲ ಘಟ್ಟಗಳ ಕಾವ್ಯ–ಸಾಹಿತ್ಯ ನಿರ್ಮಾಣದಲ್ಲಿ ತನ್ನ ದಟ್ಟವಾದ ಪ್ರಭಾವವನ್ನು ಬೀರಿದೆ.

'ಹತ್ತು ಸಾವಿರ ಗೀತವ ಹಾಡಿ, ಅರ್ಥವಿಟ್ಟಲ್ಲಿ ಫಲವೇನು ?
ಮುಟ್ಟುವ ತೆರನನರಿಯದನ್ನಕ್ಕ'

ಬಸವಣ್ಣನವರ ಈ ಮಾತು ಕಾವ್ಯದ ಸಂವಹನ ಗುಣಕ್ಕೆ ಕೊಟ್ಟಿರುವ ಮಹತ್ವದಿಂದಾಗಿ ಇಂದಿಗೂ ಪ್ರಸ್ತುತವಾಗಿದೆ.

ಹರಿಹರ, ರಾಘವಾಂಕ, ಕುಮಾರವ್ಯಾಸ, ಚಾಮರಸ, ಲಕ್ಷ್ಮೀಶ, ರತ್ನಾಕರವರ್ಣಿ ಇವರು ಒಬ್ಬೊಬ್ಬರೂ ಒಂದು ದೇಸಿ ಪರಂಪರೆಯ ಶಿಖರಗಳಾಗಿ ಕಾವ್ಯದ ಹೊನಲನ್ನು ಜನತೆಯ ಸಮೀಪಕ್ಕೆ ಒಯ್ದರು. ಸಂಸ್ಕೃತಿಯ ದೃಷ್ಟಿಯಿಂದ ಗಮನಿಸತಕ್ಕ ಮಾತೆಂದರೆ, ಅವುಗಳಲ್ಲಿ ಅನೇಕ ಕಾವ್ಯಗಳು ಜನಜೀವನದಲ್ಲಿ ಹಾಸುಹೊಕ್ಕಾಗಿ ಸೇರಿರುವುದು. ಕಾವ್ಯಗಳನ್ನು ಓದುವುದು, ಸಾರ್ವತ್ರಿಕವಾಗಿ ಕುಳಿತು ಕೇಳುವುದು – ಈ ಪದ್ಧತಿ ಬೆಳೆದು ಬಂದಿತು. ಹೀಗೆ ಕಾವ್ಯವಾಚನ ಅಥವಾ 'ಗಮಕ' ಎಂಬ ವಿಶಿಷ್ಟ ಕಲೆಯೇ ರೂಪುಗೊಂಡದ್ದು ಗಮನಾರ್ಹವಾಗಿದೆ.

ಇದೇ ರೀತಿ ಭಾಗವತ ಸಂಪ್ರದಾಯದ ಉಚ್ಛ್ರಾಯ ಕಾಲದಲ್ಲಿ ಹುಟ್ಟಿಕೊಂಡ ಕೀರ್ತನೆ ದಾಸವಾಙ್ಮಯವನ್ನು ಸಮೃದ್ಧಗೊಳಿಸಿ ಪುರಂದರ–ಕನಕದಾಸರಲ್ಲಿ ತನ್ನ ಉನ್ನತಿಯನ್ನು ಪಡೆಯಿತು. ಸಾಹಿತ್ಯಕ್ಕಿಂತ ಸಂಗೀತಕ್ಕೆ ಇದರ ಕೊಡುಗೆ ವಿಶೇಷವಾದದ್ದು. ಅತ್ಯಂತ ಜನಪ್ರಿಯ ಕಾವ್ಯರೂಪಗಳಾದ ತ್ರಿಪದಿ, ಸಾಂಗತ್ಯಗಳು ಸರ್ವಜ್ಞ ಹಾಗೂ ರತ್ನಾಕರವರ್ಣಿ ಇವರ ಕಾವ್ಯದಲ್ಲಿ ತಮ್ಮ ಸಿದ್ಧಿಯನ್ನು ಕಂಡುಕೊಂಡವು. ಹೊಸಗನ್ನಡದ ಆಧುನಿಕ ಛಂದಸ್ಸಿಗೂ ಈ ದೇಸೀ ಕಾವ್ಯಪರಂಪರೆ ತನ್ನ ಸತ್ತ್ವವನ್ನು ಧಾರೆಯೆರೆದು ಇಂದಿಗೂ ತನ್ನ ಜೀವಧ್ವನಿಯನ್ನು ಉಳಿಸಿಕೊಂಡಿದೆ.

ಗದ್ಯ ಮತ್ತು ಭಾವಗೀತೆ ಹೊಸಗನ್ನಡ ಯುಗದ ಮುಖ್ಯ ರೂಪಗಳಾಗಿ, ಹೊಸ ಸಾಹಿತ್ಯ ಪ್ರಕಾರಗಳಲ್ಲಿ ಕಾಣಿಸಿಕೊಂಡು, ವಿಷಯದ ಆಯ್ಕೆಯಲ್ಲಿ, ವ್ಯಕ್ತಿತ್ವ ನಿರೂಪಣೆಯಲ್ಲಿ ಹೆಚ್ಚು ಸ್ವತಂತ್ರವಾಗಿ ಮತ್ತು ಸಾಮಾಜಿಕವಾಗಿ ಬೆಳೆಯುತ್ತಲಿದ್ದ ನವೀನ ಜೀವನಶಕ್ತಿಯ ಕೇಂದ್ರವಾಗುತ್ತ ಬಂದಿವೆ. ಆಧುನಿಕ ಸಾಹಿತ್ಯ ಪ್ರಾಚೀನ ಸತ್ತ್ವವನ್ನು ಮೈಗೂಡಿಸಿಕೊಂಡು ಸಾವಿರಾರು ವರ್ಷಗಳ ಸಂಸ್ಕಾರದಿಂದ ಸಂಪನ್ನವಾಗಿದ್ದ ಭಾಷೆಯನ್ನು ಹೊಸ ಬಗೆಯ ಅಭಿವ್ಯಕ್ತಿಗೆ ಸಮರ್ಥವಾಗಿ ಬಳಸಿಕೊಂಡಿತು. ಇಂದಿಗೂ ಕನ್ನಡ ಸಾಹಿತ್ಯದ ದಿಗ್ಗಜಗಳೆನಿಸಿಕೊಂಡವರು ನವೋದಯ ಕಾಲದ ಹಿರಿಯರು ಹಾಗೂ ಆ ಕಾಲದ ಸ್ಫೂರ್ತಿಯಿಂದ ಸ್ವತಂತ್ರರಾಗಿ ಬೆಳೆದ ಎರಡನೆಯ ತಲೆಮಾರಿನ ಲೇಖಕರು. ಅವರ ಮಹತ್ವದ ಕೃತಿಗಳನ್ನು ಪರಿಶೀಲಿಸಿದಾಗ ಸಾಹಿತ್ಯ ನಿರ್ಮಿತಿಯ ಕಾವು ಹಾಗೂ ಹೊಸತನದ ಪ್ರಜ್ಞೆ ಆಗ ಎಷ್ಟು ಗಾಢವೂ ತೀವ್ರವೂ ಆಗಿತ್ತೆಂಬುದನ್ನು ಈಗ ಕಲ್ಪಿಸಿಕೊಳ್ಳಬಹುದು.

ಹೊಸಗನ್ನಡ ಸಾಹಿತ್ಯ ಪಡೆದ ಬಹು ದೊಡ್ಡ ಪ್ರತಿಭಾನ್ವಿತರಲ್ಲಿ ಒಬ್ಬರಾದ ಬೇಂದ್ರೆಯವರು ದೇಸಿ ಪರಂಪರೆಯನ್ನು ಮೈಗೂಡಿಸಿಕೊಂಡು ಆಧುನಿಕ ಕಾವ್ಯ ರಚನೆಯಲ್ಲಿ ಹುಮ್ಮಸ್ಸಿನಿಂದ ತೊಡಗಿ ಅದನ್ನು ಎಲ್ಲ ದೃಷ್ಟಿಯಿಂದಲೂ ಶ್ರೀಮಂತಗೊಳಿಸಿದವರು. ನವೀನವಾದ ಶ್ರೇಷ್ಠ ತರಗತಿಯ ಕಾವ್ಯಾಭಿವ್ಯಕ್ತಿ, ಚೈತನ್ಯ ಪೂರ್ಣವಾದ ಕಲ್ಪನಾಶಕ್ತಿ ಹಾಗೂ ತಾತ್ವಿಕ ಮನೋಧರ್ಮದ ಸಂಕೀರ್ಣತೆಯಿಂದ ಉನ್ನತ ಮಟ್ಟದ ಕಾವ್ಯ ನೀಡಿದ ಬೇಂದ್ರೆ ನಿಸರ್ಗವನ್ನೂ, ಜನವನ್ನೂ ಸಮನಾಗಿಯೇ ಪ್ರೀತಿಸಿದವರು. ಈ ವರಕವಿಯ ಶತಮಾನೋತ್ಸವವನ್ನು ನಾಡು ತುಂಬ ಉತ್ಸಾಹ ಹಾಗೂ ಪ್ರೀತಿ, ಗೌರವಗಳಿಂದ ಕಳೆದ ವರ್ಷದ ಉದ್ದಕ್ಕೂ ಆಚರಿಸಿತು. ನಾಡಿನ ಒಳಗೂ ಹೊರಗೂ ನಾನೂರಕ್ಕೂ ಹೆಚ್ಚು ಸಂಘ ಸಂಸ್ಥೆಗಳು ಇದರಲ್ಲಿ ಪಾಲ್ಗೊಂಡಿದ್ದು ಕವಿಯ ಶ್ರೇಷ್ಠತೆಗೂ ಜನಪ್ರಿಯತೆಗೂ ಸಾಕ್ಷಿಯಾಗಿದೆ.

ಶತಮಾನೋತ್ಸವದ ಸಂದರ್ಭದಲ್ಲಿ ಕೇವಲ ಗುಣಗಾನವಾಗದಂತೆ, ಅವರ ಕಾವ್ಯದ ಸಂಮೋಹನ ಶಕ್ತಿಯಿಂದ ದೂರ ನಿಂತು, ಅದನ್ನು ತೂಗಿ ಬೆಲೆ ಕಟ್ಟುವ ಕಾರ್ಯ ಕೆಲಮಟ್ಟಿಗಾದರೂ ಅಲ್ಲಲ್ಲಿ ನಡೆದದ್ದು ಸಂತೋಷದ ಸಂಗತಿ. 'ಭುವನದ ಭಾಗ್ಯ', 'ಬಾರೋ ಸಾಧನಕೇರಿಗೆ' ಯಂಥ ಕೃತಿಗಳಿಗೆ ಸಂವಾದಿಯಾಗಿ 'ಹಾಡೆ ಹಾದಿಯ ತೋರಿತು' (ಎಚ್. ಎಸ್. ರಾಘವೇಂದ್ರರಾವ್) ಮಾದರಿಯ ಹೊಸ ಬಗೆಯ ಚಿಂತನೆ ಹಾಗೂ ವಿಶ್ಲೇಷಣೆಗೆ ಒತ್ತು ಕೊಟ್ಟ ಕೃತಿಗಳನ್ನು ಹೊಸ ಪೀಳಿಗೆಯವರಿಂದಲೂ ನಿರೀಕ್ಷಿಸಬಹುದಾಗಿದೆ.

ಧಾರವಾಡದಲ್ಲಿಯ ಬೇಂದ್ರೆ ಸ್ಮಾರಕ ಶತಮಾನೋತ್ಸವ ಭವನದ ನಿರ್ಮಾಣ ಕಾರ್ಯ ಬೇಗ ಮುಗಿಯುವಂತೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ತೀವ್ರ ಲಕ್ಷ್ಯ ವಹಿಸಬೇಕಾಗಿದೆ. ಸಾಧನಕೇರಿಯಲ್ಲಿಯ ಕೆರೆಯ ಸುತ್ತುಮುತ್ತಲಿನ ಜಾಗವನ್ನು ಸುಂದರ ಉದ್ಯಾನವನ್ನಾಗಿ ಮಾರ್ಪಡಿಸಿ, 'ನಂದನದ ತುಣುಕೊಂದು ಬಿದ್ದಿದೆ, ನೋಟ ಸೇರದು ಯಾರಿಗೆ ?' ಎಂದು ಕೇಳಿದ ಕವಿಯ ಮಾತು ಇಂದಿಗೂ ಸಾರ್ಥಕವಾಗುವಂತೆ ನೋಡಿಕೊಳ್ಳಬೇಕು. ಬೇಂದ್ರೆ ಸ್ಮಾರಕ ಪ್ರತಿಷ್ಠಾನ ಎಲ್ಲಕ್ಕೂ ಮುಖ್ಯವಾಗಿ ಕೈಗೊಳ್ಳಬೇಕಾದ ಅಗತ್ಯದ ಕೆಲಸವೆಂದರೆ ಬೇಂದ್ರೆ ಸಮಗ್ರ ಕಾವ್ಯ ಸಂಪುಟಗಳನ್ನು ಬೇಗ ಪ್ರಕಟಿಸಿ, ಆದಷ್ಟು ಸುಲಭ ಬೆಲೆಗೆ ಓದುಗರಿಗೆ ಒದಗಿಸುವುದು.

ಕನ್ನಡ ಸಾಹಿತ್ಯದ ವಿವಿಧ ಕ್ಷೇತ್ರಗಳಿಗೆ ಮಹತ್ವದ ಕೊಡುಗೆ ಸಲ್ಲಿಸಿರುವ ಮೂವರು ಮಹನೀಯರ ಶತಮಾನೋತ್ಸವವನ್ನು ಆಚರಿಸುವ ಅವಕಾಶ ಈ ವರ್ಷ ಕನ್ನಡಿಗರಿಗೆ ಒದಗಿದೆ. ಕನ್ನಡ ಮತ್ತು ಮರಾಠಿ ಸಂಸ್ಕೃತಿಗಳ ಹಿಂದಿನ ಅವಿಭಕ್ತ ತತ್ತ್ವವನ್ನು ಕಂಡು ಹಿಡಿದ ಹಾಗೂ ಪ್ರಜ್ಞಾಪ್ರಕಾಶ ಪಾತಳಿಯ ನೆಲೆಯಲ್ಲಿ ಕಂನಾಡ ಸಂಸ್ಕೃತಿ, ಭಾರತೀಯ ಸಂಸ್ಕೃತಿ ಮತ್ತು ಮಾನವ ಸಂಸ್ಕೃತಿಗಳ ಬೆಳವಣಿಗೆಯನ್ನು ವಿವರಿಸಿದ ಶಂಬಾ ಅವರು ಪ್ರಖರವಾದ ಸಂಶೋಧನ ಪ್ರಯತ್ನದಿಂದ ಕನ್ನಡ ಚಿಂತನ ಲೋಕಕ್ಕೆ ಹೊಸ ಬೆಳಕು ನೀಡಿದವರು. ಎರಡನೆಯದಾಗಿ, 'ವಿಶ್ವ ಕರ್ನಾಟಕ'ದ ಮೂಲಕ ಪ್ರಭುತ್ವದ ವಿರುದ್ಧ ತತ್ವಬದ್ಧವಾದ ಪ್ರತಿರೋಧವೊಡ್ಡಿದ, ಇತಿಹಾಸ

ಸಂಶೋಧನೆಗಳಲ್ಲಿ ವಿಶೇಷ ಆಸಕ್ತಿ ವಹಿಸಿ ಗಣನೀಯ ಕಾರ್ಯಗೈದ ತಿ. ತಾ. ಶರ್ಮರು ಕರ್ನಾಟಕದ ಸಾಂಸ್ಕೃತಿಕ ಹಾಗೂ ಸಾರ್ವಜನಿಕ ಜೀವನದಲ್ಲಿ ಮಹತ್ವದ ಪಾತ್ರ ವಹಿಸಿದವರು. ಮೂರನೆಯದಾಗಿ ಬರೆದಷ್ಟು ಕಾದಂಬರಿಗಳನ್ನು ಒಂದೊಂದು ಮಾದರಿಯಾಗಿ ನಿಲ್ಲಿಸಿದ, ಸಾಹಿತ್ಯದ ಸತ್ವಕ್ಕೆ ಎರವಾಗದಂತೆ ಬೌದ್ಧಿಕತೆಯನ್ನು ಬಳಸಿ ಪೌರಾಣಿಕ ಕಾದಂಬರಿಗಳ ಮೂಲಕ ತಮ್ಮ ಕಲ್ಪನಾ ಸೃಷ್ಟಿಯ ಮಹತಿಯನ್ನು ಸಾಧಿಸಿದ ದೇವುಡು ಅವರು.

ಈ ಎಲ್ಲ ಸಾಹಿತ್ಯ ಶ್ರೇಷ್ಠರ ಜನ್ಮ ಶತಮಾನೋತ್ಸವವನ್ನು ಸಾರ್ಥಕಗೊಳಿಸುವಂತೆ ಆಚರಿಸುವಲ್ಲಿ ಕನ್ನಡ ಸಾಹಿತ್ಯ ಪರಿಷತ್ತನ್ನು ಮೊದಲುಗೊಂಡು ಇತರ ಸಂಘ ಸಂಸ್ಥೆಗಳು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಪ್ರಮುಖ ಪಾತ್ರ ವಹಿಸಿ ಈ ಲೇಖಕರ ಅಪ್ರಕಟಿತ ಕೃತಿಗಳ ಹಾಗೂ ಸಮಗ್ರ ಗ್ರಂಥಗಳ ಪ್ರಕಟಣೆಯ ಮೂಲಕ ಅದನ್ನು ಸಾರ್ಥಕಗೊಳಿಸಬೇಕು.

ಈ ಸಂದರ್ಭದಲ್ಲಿ ಎರಡು ವರ್ಷಗಳ ಹಿಂದೆ ಕುಪ್ಪಳ್ಳಿಯಲ್ಲಿ ನಡೆದ 'ಕುವೆಂಪು : ಸಾಂಸ್ಕೃತಿಕ ನೆನಪು' ಕಾರ್ಯಕ್ರಮದ ವೈಶಿಷ್ಟ್ಯ ನೆನಪಿಗೆ ಬರುತ್ತದೆ. ಸಾಹಿತ್ಯದ ಎಲ್ಲ ಪ್ರಕಾರಗಳಲ್ಲಿಯೂ ಅಪೂರ್ವ ಸಾಧನೆಗೈದು ಸಿದ್ಧಿ ಪಡೆದ ಕುವೆಂಪು 'ಭಾರತೀಯ ಸಾಹಿತ್ಯ, ಕನ್ನಡದ ಸಂದರ್ಭದಲ್ಲಿ ಪಡೆದುಕೊಂಡ ಉತ್ಕರ್ಷದ ಪ್ರತೀಕ' ಎನ್ನಬಹುದು. ಮೂಢನಂಬಿಕೆ, ಜಾತೀಯತೆ ಹಾಗೂ ಪುರೋಹಿತಶಾಹಿ ಪ್ರವೃತ್ತಿಗಳ ವಿರುದ್ಧ ಸಮರ ಸಾರಿ, ವಿಚಾರ ಕ್ರಾಂತಿಯ ಪ್ರವರ್ತಕರಾಗಿದ್ದ ಅವರ ಬದುಕು –ಬರಹಗಳ ಬಗ್ಗೆ ಮೆಲುಕು ಹಾಕುವ, ಒರೆಗೆ ಹಚ್ಚುವ ಮತ್ತು ಸಮಕಾಲೀನ ಸಂದರ್ಭದಲ್ಲಿ ಮತ್ತೆ ಚರ್ಚೆಗೆ ಗುರಿಪಡಿಸಿದ ಒಂದು ಅರ್ಥಪೂರ್ಣ ಕಾರ್ಯಕ್ರಮವಾಗಿ ಇದು ನನ್ನ ಹಾಗೂ ಕೆಲವು ಲೇಖಕ ಮಿತ್ರರ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದಿದೆ. ನಮ್ಮ ಎಲ್ಲ ಹಿರಿಯ ಮಹಾಚೇತನಗಳನ್ನು ಕುರಿತು ಇಂಥ ಕಾರ್ಯಕ್ರಮಗಳು ಅವರ ಜನ್ಮ ಸ್ಥಳಗಳಲ್ಲಿಯೇ ವ್ಯವಸ್ಥಿತವಾಗಿ ನಡೆಯುವಂತಾದರೆ ಆ ವಾತಾವರಣದಲ್ಲಿ ಅವರ ವಿಚಾರ ಧಾರೆಗೆ ಆತ್ಮೀಯವಾದ ಒಂದು ಹೊಸ ಕಳೆ ಬರುವುದೆಂದು ನನ್ನ ನಂಬಿಕೆ.

ಕವಿಯ ಕುಪ್ಪಳ್ಳಿಯ ಮನೆಯನ್ನು ಸ್ಮಾರಕವಾಗಿಸಿ, ಮಲೆನಾಡಿನ ಪರಂಪರೆಯ ಸಾಂಸ್ಕೃತಿಕ ಕೊಡುಗೆ ಎಂಬಂತೆ ಅದರ ನವೀಕರಣ ಕಾರ್ಯವನ್ನು ಕೈಗೆತ್ತಿಕೊಂಡಿರುವ ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ ಕನ್ನಡಿಗರ ಅಭಿನಂದನೆಗೆ ಪಾತ್ರವಾಗಿದೆ. ಪ್ರತಿಷ್ಠಾನದ ಯೋಜನೆಯ ಎರಡನೆಯ ಹಂತವೂ ಬೇಗ ಕಾರ್ಯರೂಪದಲ್ಲಿ ಬರಲೆಂದು ಹಾರೈಸುತ್ತೇನೆ.

೪

ಇತ್ತೀಚಿನ ಕನ್ನಡ ಸಾಹಿತ್ಯಕ್ಷೇತ್ರದಲ್ಲಿ ಯಾವುದೇ ಹೊಸ ಚಳವಳಿಗಳಾಗಲಿ ಇದ್ದವುಗಳು ಪೊರೆಗಳಚಿ ಹೊಸತಾಗುವ ಲಕ್ಷಣಗಳಾಗಲಿ ಕಂಡು ಬರದಿದ್ದರೂ ಎಲ್ಲ ತಲೆಮಾರಿನ ಲೇಖಕರೂ ತಮ್ಮ ತಮ್ಮ ಶಕ್ತಿಗನುಗುಣವಾಗಿ ಸಾಹಿತ್ಯ ನಿರ್ಮಿತಿಯಲ್ಲಿ

ತೊಡಗಿರುವುದು ಕಂಡು ಬರುತ್ತಿದೆ. 'The oldest and the youngest are at work with the strongest' ಎಂಬ ವರ್ಡ್ಸ್‌ವರ್ಥ್‌ನ ಮಾತು ನಮ್ಮ ಇಂದಿನ ಸಾಹಿತ್ಯ ಪ್ರವೃತ್ತಿಗೂ ಅನ್ವಯವಾಗುವಂತಿದೆ.

ಕಾವ್ಯಕ್ಷೇತ್ರ ಎಂದಿನಂತೆ ಹುಲುಸಾಗಿಯೇ ಕಂಗೊಳಿಸುತ್ತಿದೆ. ಕಾವ್ಯ ಪ್ರೇಮಿಗಳಾದ ಇವತ್ತಿನ ವಾಚಕರೂ ಎಂದಿಗಿಂತಲೂ ಹೆಚ್ಚಿನ ಸಂಸ್ಕಾರವನ್ನು ಪಡೆದಿದ್ದಾರೆ ಎಂದು ನನ್ನ ಅನಿಸಿಕೆ. ಯಾವುದು ನಿಜವಾದ ಕಾವ್ಯ ಎಂಬುದನ್ನು ಅವರು ತಕ್ಕ ಮಟ್ಟಿಗಾದರೂ ಗುರುತಿಸಬಲ್ಲರು.

ಕವಿಯ ಆತ್ಮ ಚೈತನ್ಯದ ಹರಳಿನಂತಿರುವ ಕಾವ್ಯ ತನ್ನ ಬೆಳಕಿನಲ್ಲಿ ನಿಜವನ್ನು ಕಾಣುವ ಹಂಬಲವುಳ್ಳದ್ದು. ಕಾಲ, ದೇಶ, ಪರಿಸರದ ಪ್ರಭಾವದಿಂದ ಯಾವ ಕಾವ್ಯವೂ ಮುಕ್ತವಾಗಿರುವುದು ಸಾಧ್ಯವಿಲ್ಲ. ಕವಿ ಮತ್ತು ಸಮಾಜ ಪರಸ್ಪರ ಪ್ರಭಾವಕ್ಕೆ ಒಳಗಾಗಿಯೂ ಅವರವರ ಚಿತ್ತ ವೃತ್ತಿಗಳನ್ನವಲಂಬಿಸಿ ಒಂದೇ ಪರಿಸರ ವಿಭಿನ್ನವೂ ವಿಶಿಷ್ಟವೂ ಆದ ಅಭಿವ್ಯಕ್ತಿಯನ್ನು ಪ್ರೇರಿಸಬಹುದಾಗಿದೆ. ಸ್ವಪ್ರಜ್ಞೆ ಹಾಗೂ ಸಮಾಜ ಪ್ರಜ್ಞೆ ಎರಡೂ ಗಾಢವಾಗಿ ಬೆಸೆದುಕೊಂಡಾಗ ಬದಲಾವಣೆಗೆ ಬೇಕಾದ ಅಭಿವ್ಯಕ್ತಿಯ ಸ್ವರೂಪ ನಿರ್ಧರಿತವಾಗುತ್ತದೆ. ಯಾವುದೇ ಮೌಲ್ಯ ಅಥವಾ ಆದರ್ಶ ನಮ್ಮ ಬದುಕಿನ ಸಂದರ್ಭಕ್ಕೆ ಅನ್ವಯಗೊಂಡಾಗ ನಮ್ಮ ಕಾಲದ ಸಾಂಸ್ಕೃತಿಕ ಘರ್ಷಣೆಯಿಂದ ಕವಿಯ ತೀವ್ರ ಸಂವೇದನೆಗೆ ಒಳಗಾದ ಅಂಥ ಕಾವ್ಯಾನುಭವಕ್ಕೆ ಹೆಚ್ಚಿನ ಮಹತ್ವವುಂಟಾಗುತ್ತದೆ. ಸಮಕಾಲೀನ ಜೀವನದ ಅನುಭವ, ಆಲೋಚನೆ, ಆದರ್ಶ, ಆಹ್ವಾನಗಳು ನಮ್ಮ ಇಂದಿನ ಕಾವ್ಯದ ಸಾಮಗ್ರಿಯಾಗಿ ಒದಗುತ್ತಿರುವ ಸಂದರ್ಭದಲ್ಲಿ ಜನರನ್ನು ಮೆಚ್ಚಿಸುವ ಬಗ್ಗೆ ಹೆಚ್ಚಿನ ಆತುರವನ್ನು ಪ್ರಕಟಪಡಿಸುವುದಕ್ಕಿಂತ ತನ್ನ ಅನುಭವದ ಅಂತಸ್ಸಾಕ್ಷಿಯನ್ನು ಮೆಚ್ಚಿಸುವುದೇ ನಿಜವಾದ ಕಾವ್ಯ ಸಾಧನೆಯೆಂಬುದನ್ನು ನಾವು ಮರೆಯಬಾರದು.

ಕೆಲವು ಕಾವ್ಯ ಪ್ರಯೋಗ ಪರಿಣತಮತಿಗಳನ್ನು ಹೊರತುಪಡಿಸಿದರೆ ಇಂದು ಕಾವ್ಯ ಕ್ಷೇತ್ರಕ್ಕೆ ಹೊಸದಾಗಿ ನುಗ್ಗುತ್ತಿರುವವರ ರಭಸವೇ ಹೆಚ್ಚಾಗಿದೆ. ಅವುಗಳಲ್ಲಿ ಓದಿಸಿಕೊಳ್ಳುವಂಥ ಅಥವಾ ಮತ್ತೆ ಓದಬೇಕೆನಿಸುವಂಥ ರಚನೆಗಳು ತೀರ ವಿರಳ. ಕನ್ನಡ ಕಾವ್ಯಪರಂಪರೆಗೆ ಅಪರಿಚಿತರಾಗಿಯೇ ಉಳಿದಿರುವವರಿಂದ ಯಾವ ಒಳ್ಳೆಯ ಬರವಣಿಗೆಯನ್ನು ಅಪೇಕ್ಷಿಸುವುದು ಸಾಧ್ಯ ? ಕಾವ್ಯಕ್ಕೇ ವಿಶಿಷ್ಟವಾದ ಒಂದು ಲಯವಿದೆ, ನಾದ ಗುಣವಿದೆ ಎಂಬುದನ್ನು ಕೂಡ ಇವರು ಅರಿಯದಿರುವುದು ಆಶ್ಚರ್ಯವನ್ನುಂಟು ಮಾಡುತ್ತದೆ.

ಕವಿತೆ ತುಂಬ ಗಂಭೀರವಾದ ಹಾಗೂ ಜವಾಬ್ದಾರಿಯಿಂದ ನಿರ್ಮಿತವಾದ ಒಂದು ಕಲೆ ಎಂಬುದನ್ನು ನಮ್ಮ ಯುವ ಕವಿಗಳು ತಿಳಿದುಕೊಳ್ಳಬೇಕು. ಕಾವ್ಯಕ್ಷೇತ್ರದಲ್ಲಿ ಈಗಾಗಲೇ ನಡೆದಿರುವ ಪ್ರಯೋಗಗಳನ್ನು ಲಕ್ಷ್ಯಗೊಟ್ಟು ಗಮನಿಸಬೇಕು. ಬರೆದದ್ದನ್ನು ಹಲವಾರು ಸಲ ಪರಿಶೀಲಿಸಿ, ಅರೆಕೊರೆಗಳನ್ನು ಸರಿಪಡಿಸಿಕೊಳ್ಳುವ ಸಂಯಮವನ್ನು ಬೆಳೆಸಿಕೊಳ್ಳಬೇಕು. ಪರಿಷತ್ತು ಹಾಗೂ ಅಕಾಡೆಮಿಗಳು ಅವರ ಆಸೆಗೆ ಅನುಗುಣವಾದ

ತರಬೇತಿ ಹಾಗೂ ಪೂರ್ವ ಸಿದ್ಧತೆಗಳನ್ನು ಒದಗಿಸುವ ಸನ್ನಿವೇಶಗಳನ್ನು ಸೃಷ್ಟಿಸಬೇಕು. ತಾಲೂಕು ಮಟ್ಟದಲ್ಲಿ ಕಾವ್ಯ ಕಮ್ಮಟಗಳನ್ನು ನಡೆಸಿದರೆ ಕೆಲ ಮಟ್ಟಿಗಾದರೂ ಅವರಿಗೆ ಪ್ರಯೋಜನವಾಗಬಹುದು.

ಚುಟುಕು ಅಥವಾ ಹನಿಗವನಗಳಿಗೆ ಈಗ ಸುಗ್ಗಿಯ ಕಾಲವಿದ್ದಂತೆ ತೋರುತ್ತದೆ. ಕನ್ನಡದಲ್ಲಿಯೂ ಇಂಥ ಮುಕ್ತಕಗಳಿಗೆ ಒಂದು ಪರಂಪರೆಯಿರುವುದನ್ನು ಅಲ್ಲಗಳೆಯುವಂತಿಲ್ಲ. ಆಧುನಿಕದಲ್ಲಿ ದಿನಕರ ದೇಸಾಯಿಯವರಿಂದ ಹಿಡಿದು ಎಚ್. ದುಂಡೀರಾಜರ ವರೆಗೆ ಅನೇಕರು ಈ ಪ್ರಕಾರವನ್ನು ದುಡಿಸಿಕೊಳ್ಳಲು ಪ್ರಯತ್ನಿಸಿದ್ದಾರೆ. ಆದರೆ ಯಶಸ್ಸು ಗಳಿಸಿದವರು ಬೆರಳೆಣಿಕೆಯಷ್ಟು ಮಾತ್ರ. ಇದರಲ್ಲೂ ಈಗ ಅನುಕರಣೆ ವಿಪರೀತವಾಗಿ, ಸತ್ತ್ವವಿಲ್ಲದ ಕೃತಕ ರಚನೆಗಳೇ ಹೆಚ್ಚಾಗಿ ಕಂಡು ಬರುತ್ತಿವೆ. ಈ ರಾಶಿಯನ್ನು ಗಾಳಿಗೆ ತೂರಿದಾಗ ಒಂದು ಬೊಗಸೆಯಷ್ಟಾದರೂ ಗಟ್ಟಿ ಕಾಳುಗಳು ಉಳಿದರೆ ಓದುಗರ ಪುಣ್ಯವೆನ್ನಬೇಕು. ವಿಮರ್ಶಕರಂತೂ ಇವುಗಳ ಕಡೆಗೆ ಕಣ್ಣು ಹೊರಳಿಸಿದಂತೆಯೇ ತೋರುವುದಿಲ್ಲ.

ಈ ಎಲ್ಲ ಪ್ರಕಾರಗಳಲ್ಲಿಯೂ ಅಪವಾದಕ್ಕೆಂಬಂತೆ ಭರವಸೆ ಹುಟ್ಟಿಸುವಂಥವರು ಹಾಗೂ ಗಂಭೀರವಾಗಿ ತಮ್ಮ ಕಾವ್ಯ ರಚನೆಯನ್ನು ಮುಂದುವರಿಸಿಕೊಂಡು ಬರುತ್ತಿರುವವರು ಇದ್ದೇ ಇದ್ದಾರೆ. ನಮ್ಮ ಕಾಲದ ಮುಖ್ಯ ಅನುಭವಗಳನ್ನು ಹೊಸದೊಂದು ದೃಷ್ಟಿಕೋನದಲ್ಲಿ, ಹೊಸ ನುಡಿಗಟ್ಟಿನಲ್ಲಿ, ಪರಂಪರೆಯ ಅರಿವಿನೊಂದಿಗೆ ತಾವೇ ಕಂಡುಕೊಂಡ ವಿಶಿಷ್ಟ ಲಯಗಳಲ್ಲಿ ಅಭಿವ್ಯಕ್ತಿಗೊಳಿಸುತ್ತಿರುವ ಕವಿಗಳೂ, ಕವಯಿತ್ರಿಯರೂ ಕನ್ನಡ ಕಾವ್ಯದ ಆಯಾಮಗಳನ್ನು ವಿಸ್ತರಿಸುವ ಕಾರ್ಯದಲ್ಲಿ ತೊಡಗಿರುವುದು ನಿಜಕ್ಕೂ ಚೇತೋಹಾರಿಯಾಗಿದೆ. ವಿವಿಧ ಪಂಥಗಳಿಗೆ ಹೊರತಾಗಿಯೂ ಕವಿತೆಯ ಮಾಧ್ಯಮಕ್ಕೆ ನಿಷ್ಠೆ ಉಳಿಸಿಕೊಂಡು ಬಂದವರೇ ಒಂದು ದೃಷ್ಟಿಯಿಂದ ಇಂದು–ಹಿರಿಯರಾಗಲಿ, ಕಿರಿಯರಾಗಲಿ–ಉತ್ತಮ ಕೊಡುಗೆ ಸಲ್ಲಿಸುತ್ತಿದ್ದಾರೆ ಎನಿಸುತ್ತದೆ. ಮಾನವ ಜೀವನ ಕೇಂದ್ರವಾಗುಳ್ಳ ಕಾವ್ಯಕ್ಕೆ ಯಾವುದೂ ಹೊರತಾಗಿಲ್ಲದಿರುವುದನ್ನು ಮನಗಂಡಿರುವ ಇವತ್ತಿನ ಕನ್ನಡ ಕಾವ್ಯ ಯಾವ ಪಂಥಕ್ಕೆ ಸೇರಿದ್ದು ಎನ್ನುವ ಪ್ರಶ್ನೆಯೇ ಅಪ್ರಸ್ತುತವೆನಿಸಬಹುದು. ಹೊರಗಿನ ಸದ್ದುಗದ್ದಲಗಳ ನಡುವೆಯೂ ಒಳಗಿನ ದನಿಗೆ ಕಿವಿಗೊಟ್ಟು, ಬದುಕಿನ ಸೂಕ್ಷ್ಮಾನುಭವಗಳಿಗೆ ಸೂಕ್ತ ಅಭಿವ್ಯಕ್ತಿಯನ್ನು ನೀಡುತ್ತ ತನ್ನ ಜನಾಂಗವನ್ನು ತಲ್ಲಣಗೊಳಿಸುತ್ತಿರುವ ಭಯಾನಕ ವಿದ್ಯಮಾನಗಳನ್ನು ಅರ್ಥ ಮಾಡಿಕೊಳ್ಳುವ ರೀತಿಯಲ್ಲಿ ಹೊಸ ಹುಟ್ಟಿನ ನೋವನ್ನು ಅದು ಅನುಭವಿಸುತ್ತಿರುವಂತಿದೆ.

ಹೊಸ ಕಾವ್ಯಲೋಕವೊಂದನ್ನು ಸೃಷ್ಟಿಸಬಲ್ಲ, ವಿಭಿನ್ನ ಲಯಗಾರಿಕೆಯ, ಪೌರಾಣಿಕ ವಸ್ತುಗಳಲ್ಲಿಯೂ ಸಮಕಾಲೀನ ಅರಿವನ್ನು ತುಂಬಿಕೊಡುವ 'ಸೂರ್ಯ ಜಲ' (ಎಚ್. ಎಸ್. ಶಿವಪ್ರಕಾಶ), ಲೌಕಿಕ ಹಾಗೂ ಅಲೌಕಿಕ ಜಗತ್ತುಗಳನ್ನು ಒಟ್ಟಿಗೆ ಐಕ್ಯಗೊಳಿಸುವ, ಕನ್ನಡ ಕಾವ್ಯ ಪರಂಪರೆಗಳ ವಿನೂತನ ಅಭಿವ್ಯಕ್ತಿಯಾಗಿ ತೋರುವ ವಿಶೇಷ ಬಗೆಯ ನಿರೂಪಣಾಕೌಶಲದಿಂದ ಕೂಡಿದ ಕಥನರೂಪೀ ಕೃತಿ 'ಚಕೋರಿ'

(ಚಂದ್ರಶೇಖರ ಕಂಬಾರ) ಈಚಿನ ಮಹತ್ವದ ರಚನೆಗಳಾಗಿ ಹೊರಬಂದಿವೆ. ನಮ್ಮ ಗ್ರಾಮೀಣ ಪ್ರದೇಶಗಳಲ್ಲಿ 'ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತಮತಿಗಳಾದ'ವರು ಈಗಲೂ ಅಲ್ಲಲ್ಲಿ ಕಂಡು ಬರುತ್ತಿದ್ದು ಅಂಥ ಪ್ರತಿಭೆಗಳನ್ನು ಗುರುತಿಸಿ ಪ್ರೋತ್ಸಾಹಿಸುವುದು ಸಾಹಿತ್ಯ ಪರಿಷತ್ತು ಹಾಗೂ ಅಕಾಡೆಮಿಗಳ ತುರ್ತು ಕರ್ತವ್ಯವಾಗಿದೆ. ಸರಿಯಾಗಿ ಓದಲೂ ಬರೆಯಲೂ ಬಾರದ ಬೀಳಗಿಯ ಸಿದ್ಧಪ್ಪ ಬಿದರಿ ಎಂಬ ಅಪ್ಪಟ ಜಾನಪದ ಕವಿ ಸೊಗಸಾಗಿ ಹಾಡು ಕಟ್ಟಬಲ್ಲವನಾಗಿದ್ದು ಆ ಹಾಡುಗಳು ಈಗಾಗಲೆ ಮೂರು ಸಂಗ್ರಹಗಳಲ್ಲಿ ಪ್ರಕಟವಾಗಿರುವುದು ಇದಕ್ಕೊಂದು ಉತ್ತಮ ನಿದರ್ಶನವಾಗಿದೆ.

ಕಾವ್ಯ ಗಾಯನಕ್ಕೆ ಒಂದು ವಿನೂತನವಾದ ರುಚಿಯನ್ನೂ ಸೊಗಸನ್ನೂ ತಂದು ಕೊಟ್ಟು ಜನತೆಯಲ್ಲಿ ಕಾವ್ಯಾಭಿರುಚಿಯನ್ನು ಬೆಳೆಸುತ್ತಿರುವ ಸುಗಮ ಸಂಗೀತಗಾರರ ಒಂದು ತಂಡವೇ ಸಾಧನೆಯಲ್ಲಿ ತೊಡಗಿರುವುದು ಗಮನಾರ್ಹವಾಗಿದೆ. ಈ ಗಾಯನ ಪದ್ಧತಿ ಒಂದು ಬೆಳೆಯುವ ಕಲೆ ಎಂಬುದನ್ನು ಇವರು ಅರಿತಿರುವುದು ಅಷ್ಟೇ ಮಹತ್ವದ್ದಾಗಿದೆ. ನಮ್ಮ ಸಾಹಿತ್ಯ ಪರಂಪರೆಯಲ್ಲಿ ನಾವು ಸ್ಪಷ್ಟವಾಗಿ ಗುರುತಿಸಬಹುದಾದ ಮೂರು ಕಾವ್ಯ ಸಂಪ್ರದಾಯಗಳೆಂದರೆ, ೧. ವಿದ್ವತ್ ಸಂಪ್ರದಾಯ (ಚಂಪೂ ಕಾವ್ಯ ಇತ್ಯಾದಿ), ೨. ದೇಸೀ ಸಂಪ್ರದಾಯ (ಕನ್ನಡದಲ್ಲಿ ಹುಟ್ಟಿ ಬೆಳೆದ ದೇಸೀ ಛಂದಸ್ಸಿನ ಕಾವ್ಯಗಳು), ೩. ವಾಕ್ ಸಂಪ್ರದಾಯ (ಜನಪದೀಯವಾದದ್ದು). ಕನ್ನಡಿಗರ ಮನಸ್ಸನ್ನು ಶತಮಾನಗಳಿಂದ ಸೂರೆಗೊಂಡಿರುವ ಕಾವ್ಯ ಸಂಪ್ರದಾಯವೆಂದರೆ ದೇಸೀ ಸಂಪ್ರದಾಯ. ಇದಕ್ಕೆ 'ಹಾಡು ಗಬ್ಬ' ಎಂದು ಕರೆದಿರುವುದು ತುಂಬ ಅರ್ಥಪೂರ್ಣವಾಗಿದೆ. ಈ ಪ್ರಕಾರ ಸಾಹಿತ್ಯ ಪರಂಪರೆ ಕನ್ನಡದಲ್ಲಿ ಅತಿ ಪ್ರಾಚೀನವಾಗಿರುವಂತೆಯೇ ಅತ್ಯಾಧುನಿಕವೂ ಆಗಿದೆ.

ಸುಗಮ ಸಂಗೀತ, ಕಾವ್ಯವನ್ನು ಜನಪ್ರಿಯಗೊಳಿಸುವ, ಜನತೆಯಲ್ಲಿ ಕಾವ್ಯಾಭಿರುಚಿಯನ್ನು ಬೆಳೆಸುವ ಒಂದು ಸಾಧನ ಮಾತ್ರ. ಅದೇ ಕಾವ್ಯದ ಸರ್ವಸ್ವವಲ್ಲ ಎನ್ನುವದನ್ನು ಮರೆಯಬಾರದು. ಶ್ರೇಷ್ಠ ಕಾವ್ಯಕ್ಕೆ ಸಂಗೀತದ ಅವಶ್ಯಕತೆಯಿಲ್ಲ ಎಂಬ ವಾದವೂ ಇದೆ. ಅದರಲ್ಲಿ ಸತ್ಯಾಂಶವಿಲ್ಲದೆಯಿಲ್ಲ. ಆದರೆ ಕಾವ್ಯದ ಶ್ರೇಷ್ಠತೆಯನ್ನು ಎತ್ತಿ ಹಿಡಿಯಲು ಸಂಗೀತ ಪೂರಕವಾಗುವಂತಿದ್ದರೆ ಹಾಗೂ ಅದರಿಂದ ಸಂವಹನ ಶಕ್ತಿ ತೀವ್ರಗೊಳ್ಳುವಂತಿದ್ದರೆ ಅದು ಸ್ವಾಗತಾರ್ಹವೇ. ಸ್ವತಃ ಕವಿಯ ಪ್ರಭಾವಶಾಲಿಯಾದ ವಾಚನಕ್ಕೆ, ಅದರ ಸರ್ವಗ್ರಾಹಿ ಸಮ್ಮೋಹಕತೆಗೆ ಮೊದಲ ಸ್ಥಾನ. ಕಾವ್ಯ ಗಾಯನದ ಧ್ವನಿ ಸುರುಳಿಗಳಂತೆ ಕವಿಗಳ ಕಾವ್ಯ ವಾಚನದ ಧ್ವನಿ ಸುರುಳಿಗಳೂ ಪ್ರಚಾರದಲ್ಲಿ ಬರಬೇಕಾದುದು ಅತ್ಯಂತ ಅವಶ್ಯವಾಗಿವೆ.

ಸಮೂಹ ಮಾಧ್ಯಮಗಳ ಪ್ರಾಬಲ್ಯದಲ್ಲೂ ಓದುಗರನ್ನು ತನ್ನ ಕಡೆಗೆ ಸೆಳೆದುಕೊಳ್ಳುವಂಥ ಸತ್ವಪೂರ್ಣವಾದ, ಭಿನ್ನ ಮಾದರಿಯ, ಗಮನಾರ್ಹ ಕೃಷಿಯಿಂದ ಕೂಡಿದ ಇಂದಿನ ನಮ್ಮ ಸಣ್ಣ ಕಥಾ ಕ್ಷೇತ್ರದ ಎದುರು, ತನ್ನ ಪ್ರಕಾರಕ್ಕೆ ಹೊಸ

ಆಯಾಮವನ್ನು ನೀಡುವಷ್ಟು ಶಕ್ತವಾಗಿರದ ಕಾದಂಬರಿ ಸಾಹಿತ್ಯ ಕೆಲಮಟ್ಟಿಗೆ ಮಂಕಾಗಿರುವಂತೆ ತೋರುತ್ತಿದೆ. ರಂಗಭೂಮಿ ಕ್ರಿಯಾಶೀಲವಾಗಿದ್ದರೂ ಹೇಳಿಕೊಳ್ಳುವಂಥ ಕೃತಿ ಹೊರ ಬಂದಿಲ್ಲ. ಈಚೆಗೆ 'ಊರ್ವಶಿ' (ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟ) ಎಂಬ ಮಹತ್ವದ ಕಾವ್ಯ ನಾಟಕವೊಂದು ಪ್ರಕಟವಾಗಿದ್ದು ಗೀತರೂಪಕಕ್ಕೆ ಹೊಸ ನಿರೂಪಣಾ ಶೈಲಿಯ ಹೊಳಪನ್ನು ನೀಡಲಾಗಿದೆ. ಉಪೇಕ್ಷೆಗೆ ಒಳಗಾದ ಸಾಹಿತ್ಯ ಪ್ರಕಾರಗಳಲ್ಲಿ ಲಲಿತ ಪ್ರಬಂಧವೂ ಒಂದಾಗಿ ಬಿಟ್ಟಿದ್ದರೂ ಕೆಲವರಾದರೂ (ಉದಾ: ಪ್ರಭುಶಂಕರ, ಕೆ. ಸತ್ಯನಾರಾಯಣ ವೈದೇಹಿ, ಭುವನೇಶ್ವರಿ ಹೆಗಡೆ) ಅದನ್ನು ಆಕರ್ಷಕವಾಗಿ ಬೆಳೆಸುತ್ತಿರುವುದು ಸಂತೋಷದ ಸಂಗತಿ. ಉಳಿದಂತೆ ಹರಟೆ ಅಥವಾ ನಗೆಬರಹಗಳಿಗೆ ಪತ್ರಿಕೆಗಳು ಸಾಕಷ್ಟು ಅವಕಾಶ ಒದಗಿಸಿಕೊಡುತ್ತಿದ್ದು ಅಲ್ಲಿಯೂ ಕೆಲವು ಹೊಸ ಹೊಸ ಲೇಖಕರು ಮುಂದೆ ಬರುತ್ತಿದ್ದಾರೆ. ಆಗೊಂದು ಈಗೊಂದು ಆತ್ಮಕಥೆ ಕನ್ನಡದಲ್ಲಿ ಕಾಣಿಸಿಕೊಳ್ಳುತ್ತ ಬಂದಿದ್ದರೂ ಅದನ್ನೊಂದು ಪ್ರಕಾರವಾಗಿ ಚರ್ಚಿಸಲು ಆಸ್ಪದವೀಯಬಲ್ಲ ಕೆಲವು ಕೃತಿಗಳು ಈಚೆಗೆ ಬಂದಿರುವುದೊಂದು ವಿಶೇಷ. 'ಹೋರಾಟದ ಹಾದಿಯಲ್ಲಿ' (ಎಚ್. ನರಸಿಂಹಯ್ಯ), 'ಭಿತ್ತಿ' (ಎಸ್. ಎಲ್. ಭೈರಪ್ಪ), 'ಊರುಕೇರಿ' (ಸಿದ್ಧಲಿಂಗಯ್ಯ) ಈ ಮೂರೂ ವಿಭಿನ್ನ ಮಾದರಿಗಳಾಗಿ ನಮ್ಮ ಗಮನವನ್ನು ಸೆಳೆಯುತ್ತವೆ. ಪರಿಸರಕ್ಕೆ ಆರೋಗ್ಯಕರವಾಗಿ ಸ್ಪಂದಿಸುತ್ತ ಅನುಭವಗಳನ್ನು ದೂರದಿಂದ ಪರಿಭಾವಿಸಿ ಯಾವುದೇ ಬಗೆಯ ಸಮರ್ಥನೆಗೆ ತೊಡಗದೆ ಪರಾನುಕಂಪೆಯೊಂದಿಗೆ ತನ್ನನ್ನು ಕಂಡುಕೊಳ್ಳುವ ರೀತಿ ಈ ದಿಸೆಯಲ್ಲಿ ಹೆಚ್ಚು ಅಪೇಕ್ಷಣೀಯವೆನಿಸುತ್ತದೆ.

ಆಧುನಿಕ ಸಾಹಿತ್ಯದ ವಿವಿಧ ಘಟ್ಟಗಳಲ್ಲಿ ಕಾಣಿಸಿಕೊಂಡ ಸಾಹಿತ್ಯ ವಿಮರ್ಶೆಯಲ್ಲಿ ಕಾಲ ಕಾಲಕ್ಕೆ ಕವಿ, ಕೃತಿ ಹಾಗೂ ಸಮಾಜ ಕೇಂದ್ರ ಸ್ಥಾನ ಪಡೆಯುತ್ತ ಬಂದಿರುವುದನ್ನು ಕಾಣುತ್ತೇವೆ. ಓದುಗನಿಗೆ ಪ್ರಾಶಸ್ತ್ಯ ನೀಡಿದ ವಿಮರ್ಶೆಯ ರೀತಿಯೂ ಈ ನಡುವೆ ರೂಪುಗೊಳ್ಳುತ್ತ ಬಂದಿರುವುದುಂಟು. ಕೃತಿಯನ್ನು ಅದರ ಆಕೃತಿಯೊಳಗಡೆಗೆ ಅರ್ಥ ಮಾಡಿಕೊಳ್ಳಬೇಕೆಂಬ ನವ್ಯ ವಿಮರ್ಶೆ ಸಾಮಾಜಿಕ ಹೊಣೆಗಾರಿಕೆಯಿಂದ ದೂರ ಸರಿದ ನಿಲವಿನದಾಗಿದ್ದರೆ, ಸಾಂಸ್ಕೃತಿಕ ಬದಲಾವಣೆಗಾಗಿ ಸಾಹಿತ್ಯ ಎನ್ನುವ ನಿಲುವು ಬಂಡಾಯ ವಿಮರ್ಶೆಯದಾಗಿದೆ. ಇಂದು ಅದು ಸಂಸ್ಕೃತಿ ವಿಮರ್ಶೆಯಲ್ಲಿ ಮುಂದುವರಿದಿರುವುದು ಹೊಸ ಆಶಯಗಳಿಗೆ ಕರೆದೊಯ್ಯುವ ಸಹಜ ಬೆಳವಣಿಗೆ ಎನ್ನಬಹುದು. ಅದೇನೇ ಇದ್ದರೂ ವಿಮರ್ಶಾ ಕ್ಷೇತ್ರದಲ್ಲಿ ನಡೆಯುತ್ತಿರುವ ಚರ್ಚೆಗಳು, ವಾದ–ವಿವಾದಗಳು ಒಟ್ಟಿನಲ್ಲಿ ಕನ್ನಡ ವಿಮರ್ಶೆಯ ತತ್ವಗಳನ್ನು ಹಿಗ್ಗಿಸುತ್ತಲಿರುವುದು ಸ್ವಾಗತಾರ್ಹ. 'ಆಶಯ–ಆಕೃತಿ' (ಸಿ. ಎನ್. ರಾಮಚಂದ್ರನ್), 'ಸಾತ್ವಿಕ ಪಥ' (ಜಿ. ಎಸ್. ಆಮೂರ), 'ಸಕಾಲಿಕ' (ಜಿ. ಎಚ್. ನಾಯಕ), 'ತಿಳಿವ ತೇಜದ ಮುಂದೆ' (ಮಲ್ಲೇಪುರಂ ಜಿ. ವೆಂಕಟೇಶ), 'ಮರದೊಳಗಣ ಕಿಚ್ಚು', (ರಹಮತ್ ತರೀಕೆರೆ), 'ಬೆತ್ತಲೆ ಪೂಜೆ ಯಾಕೆ ಕೂಡದು ?' (ಯು. ಆರ್. ಅನಂತಮೂರ್ತಿ), 'ಮೊದಲ ಕಟ್ಟಿನ ಗದ್ಯ' (ಎಚ್. ಎಸ್. ಶಿವಪ್ರಕಾಶ), 'ವಿಚಯ' (ಬಿ. ಎನ್. ಸುಮಿತ್ರಾಬಾಯಿ)

ಇವೇ ಮೊದಲಾದ ಕೃತಿಗಳನ್ನು ಈ ಸಂದರ್ಭದಲ್ಲಿ ಗಮನಿಸಬಹುದು. ಆದರೆ ಕ್ಲಿಷ್ಟ ಹಾಗೂ ಪಾರಿಭಾಷಿಕ ಶಬ್ದಗಳ ಮೂಲಕ ವಿಮರ್ಶೆಯನ್ನು ಜಟಿಲಗೊಳಿಸುವ ಅಗತ್ಯವಿಲ್ಲವೆಂಬುದನ್ನು ಮರೆಯಕೂಡದು.

ಕನ್ನಡ ಸಾಹಿತ್ಯದ ಸ್ತ್ರೀವಾದಿ ಅಧ್ಯಯನ ಈಚೆಗೆ ನಡೆಯುತ್ತಿದ್ದು ಆ ಬಗೆಯ ಚಿಂತನೆಯ ನೆಲೆಗಳನ್ನು ಇನ್ನಷ್ಟು ವ್ಯಾಪಕವಾಗಿ ಗಟ್ಟಿಯಾದ ರೀತಿಯಲ್ಲಿ ನೋಡುವ ಅಗತ್ಯವಿದೆ. ಕೇವಲ ಹೆಣ್ಣುಮಗಳು ತನ್ನ ಅನುಭವವನ್ನು ಹೀಗೆ ವಿಶಿಷ್ಟವಾಗಿ ಅಭಿವ್ಯಕ್ತಿಗೊಳಿಸಬಲ್ಲಳು ಎನ್ನುವಂತಹ ಬರವಣಿಗೆಯನ್ನು ನಮ್ಮ ಸಾಹಿತ್ಯದಲ್ಲಿ, ಅಲ್ಲಲ್ಲಿ ವಿಶೇಷವಾಗಿ ಕಾವ್ಯ ಪ್ರಕಾರದಲ್ಲಿ ಗುರುತಿಸಬಹುದು. ಸ್ತ್ರೀತ್ವ ಹಾಗೂ ಸ್ತ್ರೀವಾದ ಎರಡರ ಸಮನ್ವಯ ಈ ದಿಸೆಯಲ್ಲಿ ಸರಿಯಾದ ದಾರಿಯಾಗಿ ತೋರುತ್ತದೆ. “ 'A room of my own' ಗೆ ಹಂಬಲಿಸುವುದರಿಂದ ಒಂದು ಹೆಜ್ಜೆ ಮುಂದೆ ಹೋಗಿ ಅದನ್ನು ನಾವೇ ಸೃಷ್ಟಿಸಿಕೊಳ್ಳುವತ್ತ ಸಾಗಬೇಕಾಗಿದೆ” (ಪ್ರತಿಭಾ ನಂದಕುಮಾರ್) ಎಂಬ ಅರಿವು ನಮ್ಮ ಲೇಖಕಿಯರಲ್ಲಿ ಮೂಡಿರುವುದು ಸ್ವಾಗತಾರ್ಹ.

ತನ್ನದೇ ಆದ ಭಾಷೆ ಹಾಗೂ ಪರಿಭಾಷೆಗಳನ್ನು ನಿರ್ಮಿಸಿಕೊಳ್ಳುತ್ತ ಆಧುನಿಕ ಸಾಹಿತ್ಯವಿಮರ್ಶೆ ವೈವಿಧ್ಯಮಯವಾಗಿ ಬೆಳೆಯುತ್ತಿರುವ ಇಂದಿನ ಸಂದರ್ಭದಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಹಿಂದೆ ಪ್ರಾರಂಭಿಸಿದ್ದ 'ಸಾಹಿತ್ಯ ಪಾರಿಭಾಷಿಕ ಮಾಲೆ' ಯ ಮಹತ್ವದ ಯೋಜನೆ ಅರ್ಧಕ್ಕೇ ನಿಂತು ಹೋಗಿರುವುದು ದುರದೃಷ್ಟಕರ.

ಕನ್ನಡ ಸಾಹಿತ್ಯ ಚರಿತ್ರೆ ಒಂದು ಸಾವಿರ ವರ್ಷಗಳ ಹಾದಿಯಲ್ಲಿ ನಿರಂತರವಾಗಿ ಸಾಗಿ ಬಂದಿರುವ ಸಂದರ್ಭದಲ್ಲಿ ಪ್ರಾಚೀನ ಕನ್ನಡ ಸಾಹಿತ್ಯವನ್ನು ವಿವಿಧ ಮಗ್ಗಲುಗಳಿಂದ ವಿಶ್ಲೇಷಿಸಿ ಕಾವ್ಯ ಚಿಂತನ ಮತ್ತು ಕಥನ ಪರಂಪರೆಯನ್ನು ಒಟ್ಟಿಗೆ ಮಂಡಿಸುವ, ಈ ಕಾಲದ ಅಗತ್ಯವನ್ನು ಪೂರೈಸುವ ರೀತಿಯಲ್ಲಿ ಮೂಡಿರುವ ಒಂದು ಪ್ರಯತ್ನ 'ಸಾಹಿತ್ಯ ಸಂಗಾತಿ' (ಕೀರ್ತಿನಾಥ ಕುರ್ತಕೋಟಿ) ಯಲ್ಲಿ ಕಂಡು ಬರುತ್ತದೆ. ಇದಕ್ಕೆ ಸಂವಾದಿಯಾಗಿ ಸಮಸ್ತ ಜ್ಞಾನವೂ ಒಂದು ಬಗೆಯ ಕಥನ ಎಂಬ ಶ್ರದ್ಧೆ, ಎಲ್ಲ ಜ್ಞಾನಗಳನ್ನು ಸಾಹಿತ್ಯ ಮೀಮಾಂಸೆಯ ಪರಿಕರಗಳಿಂದ ಪ್ರವೇಶಿಸಲು ಸಾಧ್ಯ ಎಂಬ ನಿಲುವಿನಿಂದ ಕೂಡಿದ 'ಸಾಹಿತ್ಯ ಕಥನ' (ಡಿ. ಆರ್. ನಾಗರಾಜ) ಈ ಶತಮಾನದ ಅಂತ್ಯದಲ್ಲಿ ರೂಪುಗೊಳ್ಳುತ್ತಿರುವ ಕನ್ನಡದ ಚಿಂತನ ಕ್ರಮದ ಹೊಸ ದಿಕ್ಕನ್ನು ಸೂಚಿಸುವಂತಿದೆ. ಇವುಗಳ ಜತೆಗೆ ಲಂಕೇಶ, ದೇವನೂರ ಮಹಾದೇವ ಹಾಗೂ ತೇಜಸ್ವಿಯವರ ಚೇತೋಹಾರಿಯಾದ ಗದ್ಯದಲ್ಲಿ ಕೇಳಿಸುವ ಕನ್ನಡದ ಜೀವಧ್ವನಿ ಕನ್ನಡ ಗದ್ಯದ ಪುನರುಜ್ಜೀವನದ ದೃಷ್ಟಿಯಿಂದ ಗಮನಾರ್ಹ ಸಾಧನೆಯಾಗಿದೆ. ದಲಿತ ಸಾಹಿತ್ಯದ ಸಾಂಸ್ಕೃತಿಕ ಹಾಗೂ ರಾಜಕೀಯ ಮುಖಗಳನ್ನು ಅರಿತು ಅರ್ಥೈಸುವ ಒಂದು ಒಳ್ಳೆಯ ಪ್ರಯತ್ನ 'ಕನ್ನಡ–ಮರಾಠಿ ದಲಿತ ಸಾಹಿತ್ಯ' (ಸರಜೂ ಕಾಟ್ಕರ್) ಸಂಪ್ರಬಂಧದಲ್ಲಿ ಎದ್ದು ಕಾಣುತ್ತದೆ. ಸಮೃದ್ಧವಾದ ೨೦ನೇ ಶತಮಾನದ ಕನ್ನಡ ಸಾಹಿತ್ಯವನ್ನು ಅರ್ಥೈಸುವ ಹಾಗೂ ಬೆಲೆಗಟ್ಟುವ ದೊಡ್ಡ ಪ್ರಯತ್ನವೊಂದು ನಡೆಯಬೇಕಾದ ಈ ಸಂದರ್ಭದಲ್ಲಿ ವೈಯಕ್ತಿಕವಾಗಿ ಹಾಗೂ

ಕೆಲಮಟ್ಟಿಗೆ ಸಾಂಸ್ಥಿಕವಾಗಿ ಅಲ್ಲಲ್ಲಿ ನಡೆದಿರುವ ಅರ್ಥಪೂರ್ಣವಾದ ಇಂಥ ವಿಮರ್ಶೆ ಹಾಗೂ ಮರು ವಿಮರ್ಶೆಗಳು, ಚಿಂತನ ಕ್ರಮಗಳು, ವಿಶಿಷ್ಟ ಗ್ರಹಿಕೆಗಳು, ಸಾಹಿತ್ಯಿಕ ಕಾಳಜಿಗಳು ಒಟ್ಟಾಗಿ ಅದಕ್ಕೆ ನೆರವಾಗಬಲ್ಲವು.

ನವೋದಯ ಕಾವ್ಯದಲ್ಲಿ ಮಕ್ಕಳ ಸಾಹಿತ್ಯಕ್ಕೂ ತಕ್ಕ ಪ್ರಾಶಸ್ತ್ಯವನ್ನು ನೀಡಿದ ಹಿರಿಯರಾದ ಪಂಜೆ, ರಾಜರತ್ನಂ, ಕುವೆಂಪು, ದಿನಕರ ದೇಸಾಯಿ, ಹೊಯಿಸಳ, ಕಾವ್ಯಾನಂದ, ಮೇವುಂಡಿ ಮಲ್ಲಾರಿ, ಬಿ. ಎ. ಸನದಿ ಮೊದಲಾದವರ ಕೊಡುಗೆಯನ್ನು ಈಗಲೂ ಮರೆಯುವಂತಿಲ್ಲ. ಅವರ ಅನೇಕ ಪದ್ಯಗಳು ಇಂದಿಗೂ ಮಕ್ಕಳ ಮನಸ್ಸನ್ನು ರಂಜಿಸುತ್ತ ಅವರ ಕಾವ್ಯಾಭಿರುಚಿಯನ್ನು ಬೆಳಿಸಲು ನೆರವಾಗುತ್ತಿವೆ. ಮಕ್ಕಳಿಗಾಗಿ ಬರೆಯುವದು ತಮ್ಮ ಅಂತಸ್ತಿಗೆ ಕುಂದು ಎಂದು ಭಾವಿಸದೆ ಅವರು ಸಮಾನ ಶ್ರದ್ಧೆಯಿಂದ ಈ ಕಾರ್ಯಕ್ಕೂ ತೊಡಗಿ ಕನ್ನಡ ಸಂಸ್ಕೃತಿಯ ವಾತಾವರಣವನ್ನು ಜೀವಂತವಾಗಿಟ್ಟರು. ಆದರೆ ಮುಂದಿನ ತಲೆಮಾರಿನ ಲೇಖಕರ ಅನಾಸಕ್ತಿಯಿಂದ ಇಂಥ ಒಂದು ಆರೋಗ್ಯಕರ ಸಂಪ್ರದಾಯ ಮುಂದುವರಿಯದೆ ನಮ್ಮ ಮಕ್ಕಳ ಕಲ್ಪನೆ, ಕನಸುಗಳ ಲೋಕ ಬಣಗುಟ್ಟತೊಡಗಿತು. ಈ ಅವಧಿಯಲ್ಲಿ ಕೆಲಮಟ್ಟಿಗಾದರೂ ಅದನ್ನು ಹರಿಗಡಿಯದಂತೆ ನೋಡಿಕೊಂಡ ಶ್ರೇಯಸ್ಸು ಪ್ರಾಥಮಿಕ ಶಾಲೆಯ ಶಿಕ್ಷಕರನೇಕರಿಗೆ ಸಲ್ಲಬೇಕು. ವಿಜಾಪುರದ ಭಾರತೀ ಸಾಹಿತ್ಯ ಭಂಡಾರ (ಸಿಸು ಸಂಗಮೇಶ) ಕಳೆದ ನಾಲ್ಕು ದಶಕಗಳಿಂದ ಮಕ್ಕಳ ಸಾಹಿತ್ಯ ಪ್ರಕಾಶನಕ್ಕೆ ಮೀಸಲಾಗಿ ನೂರಾರು ಲೇಖಕರಿಗೆ ಪ್ರೋತ್ಸಾಹ ನೀಡುತ್ತ ಬಂದಿರುವುದನ್ನು ಇಲ್ಲಿ ಸ್ಮರಿಸಬಹುದು. ಆದರೆ ಅವರಲ್ಲೂ ಎಲ್ಲೋ ಕೆಲವರನ್ನು ಬಿಟ್ಟರೆ ಉಳಿದವರ ರಚನೆಗಳಲ್ಲಿ ಬಹುಪಾಲು ಅಸಂಬದ್ಧ ಹಾಗೂ ನೀರಸವಾಗಿ ಭಾವ, ಭಾಷೆ, ಕಲ್ಪನೆ, ಲಯಗಾರಿಕೆ ಯಾವುದರಲ್ಲೂ ಹೊಸತನದ ಮಿಡಿತ ಅಷ್ಟಾಗಿ ಕಂಡುಬರಲಿಲ್ಲ. ಆದರೆ ಕಳೆದ ಒಂದೆರಡು ದಶಕಗಳಲ್ಲಿ ಶಿಶು ಕಾವ್ಯ ಮತ್ತೆ ಹೊಸ ಗರಿ ಮೂಡಿಸಿಕೊಂಡು ಹೊಸ ಹಾಡು ಹೊಮ್ಮಿಸುತ್ತಿರುವುದು ಅತ್ಯಂತ ಸ್ವಾಗತಾರ್ಹ. ಮಕ್ಕಳ ಮನಸ್ಸಿನ ಹೊಲಬುಗಳನ್ನು ಸೂಕ್ಷ್ಮವಾಗಿ ನಿರೀಕ್ಷಿಸಿ ಅವರ ಮಾನಸಿಕ ಇತಿಮಿತಿಗಳನ್ನು ತಿಳಿದುಕೊಂಡು, ಅಂತರಂಗದ ಭಾವಗುಣ, ಗೀತಗುಣಗಳನ್ನು ತೃಪ್ತಿಪಡಿಸುತ್ತಾ ಅವರ ಕುತೂಹಲವನ್ನು ತಣಿಸುವ ಬಗೆ ಬಗೆಯ 'ಹಕ್ಕಿ ಸಾಲು' ಗೋಚರಿಸಿರುವುದು ಆಶಾದಾಯಕ ಸಂಗತಿಯಾಗಿದೆ. ನಮ್ಮ ಶಿಕ್ಷಣ ಇಲಾಖೆ ಆಯ್ದ ಮಕ್ಕಳ ಕಥೆ ಹಾಗೂ ಕವಿತೆಗಳ ಸಂಗ್ರಹಗಳನ್ನು, ಹಾಡುಗಳ ಧ್ವನಿ ಮುದ್ರಿಕೆಗಳನ್ನು ಸಿದ್ಧಪಡಿಸಿ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿಗೆ ತೀರ ಸುಲಭ ಬೆಲೆಯಲ್ಲಿ ಒದಗಿಸುವ ವ್ಯವಸ್ಥೆಯನ್ನು ಏಕೆ ಕೈಕೊಳ್ಳಬಾರದು ?

ಇದೇ ಸಂದರ್ಭದಲ್ಲಿ ಅತ್ಯಂತ ವಿವಂಚನೆಗೀಡುಮಾಡಿರುವ ನಮ್ಮ ಮಕ್ಕಳ ಶಿಕ್ಷಣ ಕ್ರಮದ ಬಗ್ಗೆ ಎರಡು ಮಾತು ಹೇಳದೆ ನಾನು ಮುಂದುವರಿಯಲಾರೆ. ಜಡತೆ ಹಾಗೂ ಉದಾಸೀನತೆಯ ಪ್ರತೀಕದಂತಿರುವ ನಮ್ಮ ಆಡಳಿತಗಾರರು, ಶೈಕ್ಷಣಿಕ 'ವ್ಯಾಪಾರಿಗಳು' ಹಾಗೂ ಹಣದ ಬಗೆಗಿನ ಅವರ ಗೀಳಿನಿಂದ ಉಂಟಾದ ಮಕ್ಕಳ

ಬಗೆಗಿನ ಯಾಂತ್ರಿಕ ಸಂಬಂಧ ಮುಂತಾದ ದೋಷಗಳನ್ನು ಶೀಘ್ರವಾಗಿ ನಿವಾರಿಸುವ ಕಾಲ ಈಗ ಒದಗಿದೆ. ಅಮಾನವೀಯವಾದ ನಮ್ಮ ಶಿಕ್ಷಣ ಪದ್ಧತಿಯನ್ನು ಸುಧಾರಿಸಲು ಕಳೆದ ನಾಲ್ಕೈದು ದಶಕಗಳಿಂದ ನೇಮಕಗೊಂಡ ಅಸಂಖ್ಯ ಆಯೋಗಗಳು, ಸಮಿತಿಗಳು ವರದಿಗಳನ್ನೂ ಶಿಫಾರಸ್ಸುಗಳ ಹೊರೆಯನ್ನೂ ಉತ್ಪಾದಿಸುವ ಹೊರತು ಏನನ್ನೂ ಸಾಧಿಸದೆ ಹೋಗಿರುವುದು ಅತ್ಯಂತ ದುರ್ದೈವದ ಸಂಗತಿಯಾಗಿದೆ. ಕಾಲ ಕಾಲಕ್ಕೆ ಅಧಿಕಾರಕ್ಕೆ ಬಂದ ಸರಕಾರಗಳು ಶಿಕ್ಷಣದ ಬಗ್ಗೆ ಬಾಯಿ ಮಾತಿನ ಸೇವೆಯನ್ನು ಸಲ್ಲಿಸುತ್ತ ಯಾವ್ಯಾವುದೋ ಆಡಂಬರದ ಹಾಗೂ ನಿರರ್ಥಕ ಯೋಜನೆಗಳಿಗೆ ಕೋಟಿಗಟ್ಟಲೆ ಹಣ ವೆಚ್ಚ ಮಾಡುತ್ತ ಬಂದಿವೆ. ಆದರೆ ಶಿಕ್ಷಣದ ವಿಷಯಕ್ಕೆ ಬಂದಾಗ ಮಾತ್ರ ಸಂಪನ್ಮೂಲಗಳ ಕೊರತೆ ಅವರಿಗೆ ಎದುರಾಗುತ್ತದೆ.

ರಾಜಕೀಯ ಧುರೀಣರನೇಕರು ತಮ್ಮ ಕಿಕ್ ಬ್ಯಾಕ್ಸ್ ಮತ್ತು ಹಗರಣಗಳಲ್ಲಿ ಒಬ್ಬರನ್ನೊಬ್ಬರು ಮೀರಿಸುತ್ತಾರಲ್ಲದೆ ರಾಷ್ಟ್ರದ ಮಕ್ಕಳ ಭವಿಷ್ಯದ ಬಗ್ಗೆ ವಿಚಾರಿಸಲು ಅವರಿಗೆ ಪುರಸೊತ್ತಿಲ್ಲದಾಗಿದೆ. ಇದೂ ಅಲ್ಲದೆ ಹೆಚ್ಚುತ್ತಲೇ ಇರುವ ಟಿ. ವಿ. ಚಾನೆಲ್ಲುಗಳ ಹಾಗೂ ವಾಣಿಜ್ಯ ಪ್ರೇರಿತ ಚಲನಚಿತ್ರಗಳ ಮೂಲಕ ಎಳೆಯ ಮನಸ್ಸುಗಳನ್ನು ವ್ಯವಸ್ಥಿತವಾಗಿ ಕಲುಷಿತಗೊಳಿಸುತ್ತ, ಮಕ್ಕಳ ಕಾತರಗಳನ್ನು, ವಿಲೋಭನೆಗಳನ್ನು ಹೆಚ್ಚಿಸುತ್ತಿವೆ. ಇಷ್ಟೇ ಅಲ್ಲದೆ ಮಕ್ಕಳನ್ನೇ ಗುರಿಯಾಗಿಟ್ಟುಕೊಂಡ ಜಾಹೀರಾತುಗಳು ಎಳೆಯ ಮನಸ್ಸುಗಳನ್ನು ಗ್ರಾಹಕ ಕೇಂದ್ರಿತ ವ್ಯವಸ್ಥೆಯೆಡೆಗೆ ಸೆಳೆದುಕೊಳ್ಳುತ್ತಿರುವುದು ಮಕ್ಕಳ ಭವಿಷ್ಯದ ಬಗ್ಗೆ ಹೆಚ್ಚಿನ ಕಳವಳಕ್ಕೆ ಕಾರಣವಾಗುತ್ತಿವೆ. ಇಂಥ ಪರಿಸ್ಥಿತಿಯಲ್ಲಿ ಎಳೆಯ ಮಕ್ಕಳನ್ನು ಉಪಯುಕ್ತವೆನಿಸದ ಯಾವುದೋ ಶೈಕ್ಷಣಿಕ ಚೌಕಟ್ಟುಗಳ ಬಿಗಿ ಕವಚದಲ್ಲಿ ಒತ್ತಾಯದಿಂದ ದೂಡಲಾಗುತ್ತಿರುವದಂತೂ ಶೋಚನೀಯವಾಗಿದೆ. ಇವೆಲ್ಲದರ ಒತ್ತಡದಲ್ಲಿ ಶಿಕ್ಷಣದ ಯೋಜಕರು, ಆಡಳಿತಗಾರರು ಮತ್ತು ಪಾಲಕರು ನಮ್ಮ ಮಕ್ಕಳ ಭವಿಷ್ಯದ ಬಗ್ಗೆ ಹೊಸದಾಗಿ ಯೋಚನೆ ಮಾಡಬೇಕಾಗಿದೆ. ಪ್ರಾಥಮಿಕ ಶಾಲಾ ಮಟ್ಟದಲ್ಲಿಯೂ ಕೆಲವೊಂದು ತೀವ್ರ ಬದಲಾವಣೆಗಳಾಗುವುದು ಅತ್ಯಂತ ಅವಶ್ಯವಿದೆ.

೧. ಪ್ರಾಥಮಿಕ ಶಿಕ್ಷಣ ಮುಗಿಯುವವರೆಗೆ ಪ್ರತಿಯೊಂದು ವಿಷಯವನ್ನು ಅವರ ಮಾತೃ ಭಾಷೆಯ ಮೂಲಕವೇ ಕಲಿಸಬೇಕು. ಹೆಚ್ಚಿನ ಭಾಷೆಗಳನ್ನು ಪ್ರಾಥಮಿಕ ಮಟ್ಟದ ನಂತರವೇ ಬೋಧಿಸಬೇಕು.

೨. ಪುಸ್ತಕಗಳ ಹಾಗೂ ಭಾರವಾದ ಪಠ್ಯಕ್ರಮಗಳ ಹೊರೆಯನ್ನು ಕೂಡಲೆ ತಗ್ಗಿಸಬೇಕು. ಹತ್ತು ವರ್ಷ ವಯಸ್ಸಿನವರೆಗೂ ವಿರಾಮವಾದ ಹರ್ಷದಾಯಕ ವಾತಾವರಣದಲ್ಲಿ ಶಿಕ್ಷಣ ನೀಡುವಂತಾಗಬೇಕು. ಆಟಗಳಿಗೆ, ನಿಸರ್ಗದ ಒಡನಾಟಕ್ಕೆ, ಸಾಹಸ ಮನೋಭಾವದಿಂದ ಕಲಿಯುವುದಕ್ಕೆ ಅವರಿಗೆ ಹೆಚ್ಚಿನ ವೇಳೆ ದೊರೆಯಬೇಕು.

೩. ಮಿತಿ ಮೀರಿದ ಪರೀಕ್ಷೆಗಳಿಗೆ, ಸಂದರ್ಶನಗಳಿಗೆ ಮಕ್ಕಳನ್ನು ಈಡು ಮಾಡಕೂಡದು.

೪. ಶಿಕ್ಷಕರು, ವರ್ಗಗಳು ನಡೆಯುತ್ತಿರುವ ಅವಧಿಯಲ್ಲಿಯೇ ತಮಗೆ ಒಪ್ಪಿಸಿದ ಪಾಠ ಪ್ರವಚನಗಳನ್ನು ಮುಗಿಸುವಂತೆ ಕಡ್ಡಾಯಗೊಳಿಸಬೇಕಲ್ಲದೆ ಖಾಸಗಿಯಾಗಿ ಅವರು ಮನೆ ಪಾಠ ಹೇಳುವುದನ್ನು ನಿರ್ಬಂಧಿಸಬೇಕು.

೫. ಅಗತ್ಯವಿದ್ದಷ್ಟು ಕನಿಷ್ಠ ಪ್ರಮಾಣದ ಮನೆಯ ಅಭ್ಯಾಸವನ್ನು ಮಾತ್ರ ಮಕ್ಕಳಿಗೆ ಕೊಡಬೇಕು.

೬. ದೊಡ್ಡವರು ಹಾಕಿಕೊಟ್ಟ ಮಟ್ಟದಲ್ಲಿ ಮಕ್ಕಳು ಕಲಿಯಬೇಕೆಂದೂ, ನಡೆದು ಕೊಳ್ಳಬೇಕೆಂದೂ ಪಾಲಕರಾಗಲಿ, ಶಿಕ್ಷಕರಾಗಲಿ ನಿರೀಕ್ಷಿಸಬಾರದು. ಅವರು ತಮ್ಮ ರೀತಿಯಲ್ಲಿ ತಪ್ಪುಗಳನ್ನು ಎಸಗಿದರೂ ಸಹಜವಾಗಿ ರಚನಾತ್ಮಕವಾಗಿ ಅವರು ಮಾಡಿ ತೋರಿಸುವ ದಿಕ್ಕಿನಲ್ಲಿಯೇ ಅವರು ಬೆಳೆಯುವಂತೆ ನೆರವಾಗುವುದು ಮಾತ್ರ ತಮ್ಮ ಕೆಲಸವೆಂದು ದೊಡ್ಡವರು ತಿಳಿಯಬೇಕು.

೭. ಪುಸ್ತಕ, ಗಣಕ ಯಂತ್ರ, ಪದವಿ, ಹಣ ಇವುಗಳಿಗಿಂತ ಜೀವನ ಹೆಚ್ಚು ಮಹತ್ವದ್ದು. ಶಿಕ್ಷಣವೆನ್ನುವುದು ಕೊಳ್ಳುವ ಹಾಗೂ ಮಾರುವ ಮಾರಾಟದ ವಸ್ತುವಾಗಿರುವುದು ಕೂಡಲೇ ನಿಲ್ಲಬೇಕು. ವೈಯಕ್ತಿಕ ಹಾಗೂ ಸಾಮೂಹಿಕ ಸಂದರ್ಭಗಳಲ್ಲಿ ಮಾನವನ ಬದುಕನ್ನು ಮತ್ತು ಕೌಶಲ್ಯವನ್ನು ಸರಿಯಾಗಿ ಬಳಸಿ ಸುಧಾರಿಸುವ ಸಾಧನವಾಗಿ ಅದನ್ನು ಭಾವಿಸಬೇಕು.

೫

ಭಾರತದ ವೈವಿಧ್ಯಮಯ ಪ್ರಾದೇಶಿಕ ಭಾಷಾ ಸಾಹಿತ್ಯವನ್ನು ಪರಸ್ಪರ ಪರಿಚಯಿಸಲು ಸ್ವೋಪಜ್ಞ ಅನುವಾದದ ಅಗತ್ಯವಿದೆ. ಈಚೆಗೆ ದೇಶದ ವಿವಿಧ ಭಾಷಾ ಪ್ರದೇಶಗಳಲ್ಲಿ ನಡೆಯುತ್ತಿರುವ ಮಹತ್ವದ ಸಾಹಿತ್ಯಿಕ ಚಟುವಟಿಕೆಗಳಿಗೆ ಒತ್ತಾಸೆಯಾಗಿ ನಿಂತಿರುವ ಕೇಂದ್ರ ಸಾಹಿತ್ಯ ಅಕಾಡೆಮಿ ಈ ವಿಷಯದಲ್ಲಿ ಹೆಚ್ಚು ಮುತುವರ್ಜಿ ವಹಿಸಿ ಬೆಂಗಳೂರಿನಲ್ಲಿ ಭಾಷಾಂತರ ಕೇಂದ್ರವೊಂದನ್ನು ಸ್ಥಾಪಿಸಿರುವುದು ತುಂಬಾ ಸ್ವಾಗತಾರ್ಹ. ಒಂದು ಭಾಷೆಯ ಗಣ್ಯ ಲೇಖಕರು ಮತ್ತೊಂದು ಪ್ರದೇಶದಲ್ಲಿ ಅಪರಿಚಿತರಾಗಿ ಇರುವ ವಿಪರೀತ ಸ್ಥಿತಿ ಆದಷ್ಟು ಬೇಗ ದೂರವಾಗಬೇಕಾಗಿದೆ. ಕಥಾ ಸಾಹಿತ್ಯದ ಅನುವಾದ ಕೆಲಮಟ್ಟಿಗೆ ಸುಲಭದ್ದೆನಿಸೀತು. ಆದರೆ ಕಾವ್ಯದ ಅನುವಾದ ಕಷ್ಟದ ಕೆಲಸ. ಆದರೂ ಸಾಧ್ಯವಿದ್ದಷ್ಟು ಕವಿಯ ಅಭಿವ್ಯಕ್ತಿಯ ಮೂಲ ಸತ್ವ, ಹೊಳಹು ಹಾಗೂ ಬಣ್ಣ ವೈವಿಧ್ಯಗಳೊಡನೆ ಹಿಡಿದು ಬೇರೊಂದು ಭಾಷೆಗೆ ತರುವ ಕೆಲಸ ನಡೆಯಬೇಕಾಗಿದೆ. ಭಾರತೀಯ ಭಾಷೆಗಳ ಕಾವ್ಯಾನುವಾದದಲ್ಲಿ ಶಾ. ಬಾಲೂರಾವ್, ಎಚ್. ಎಸ್. ಶಿವಪ್ರಕಾಶರಂಥವರು ಒಳ್ಳೆಯ ಮಾದರಿ ಹಾಕಿಕೊಟ್ಟಿದ್ದಾರೆ ಈ ದಿಸೆಯಲ್ಲಿ ಬೇರೆ ಬೇರೆ ಸಾಹಿತ್ಯ ಸಂಸ್ಥೆಗಳು, ವಿಶ್ವವಿದ್ಯಾಲಯಗಳು ಕೆಲಸವನ್ನು ಹಂಚಿಕೊಂಡು ಅಣಿಯಾಗಬೇಕು. 'ಹಳಗನ್ನಡ ಮತ್ತು ಮರಾಠಿ' ಕುರಿತ ಉನ್ನತ ಮಟ್ಟದ ಗ್ರಂಥವನ್ನು ರಚಿಸಿದ ರಂ. ಶಾ. ಲೋಕಾಪುರ ಈಚೆಗೆ ಮರಾಠಿಯಲ್ಲಿ 'ಜ್ಞಾನೇಶ್ವರೀ ಕಾಲೀನ ಮರಾಠೀ ಭಾಷೇವರ ಕನ್ನಡ ಚಾ ಪ್ರಭಾವ' ('ಜ್ಞಾನೇಶ್ವರಿ' ಕಾಲದ ಮರಾಠಿ ಭಾಷೆಯ ಮೇಲೆ ಕನ್ನಡದ ಪ್ರಭಾವ) ಎಂಬ ಉದ್ಗ್ರಂಥವನ್ನು ಪ್ರಕಟಿಸಿದ್ದು ರಾಜ್ಯದ ಯಾವುದಾದರೊಂದು ಸಾಹಿತ್ಯ ಸಂಸ್ಥೆ ಅದರ ಕನ್ನಡ ಅನುವಾದ ಪ್ರಕಟಣೆಯನ್ನು ಕೂಡಲೆ ಕೈಗೆತ್ತಿಕೊಳ್ಳುವುದು ತೀರಾ ಪ್ರಸ್ತುತವಾಗಿದೆ.

೧೨ನೇ ಶತಮಾನದ ಕಲ್ಯಾಣ ಚಾಲುಕ್ಯ ಚಕ್ರವರ್ತಿ ಸರ್ವಜ್ಞ ಸೋಮೇಶ್ವರನಿಂದ ಸಂಸ್ಕೃತದಲ್ಲಿ ರಚಿತವಾದ 'ಮಾನಸೋಲ್ಲಾಸ' ಪ್ರಾಚೀನ ಕರ್ನಾಟಕದ

ಒಂದು ಸುಪ್ರಸಿದ್ಧ ವಿಶ್ವಕೋಶ. ಕನ್ನಡಿಗರಿಗೆ ಹೆಚ್ಚು ಕಡಿಮೆ ಅಪರಿಚಿತವಾಗಿಯೇ ಉಳಿದಿದ್ದ ಈ ಅಪೂರ್ವ ಕೃತಿಯನ್ನು ಕರ್ನಾಟಕ ವಿಶ್ವವಿದ್ಯಾಲಯದ ಪ್ರಸಾರಾಂಗ ಕನ್ನಡಕ್ಕೆ ಪ್ರಮಾಣಭೂತವಾಗಿ ಅನುವಾದಿಸಿ ಪ್ರಕಟಿಸಿ (ಸಂ. ಡಾ. ಎಂ. ಎಂ. ಕಲಬುರ್ಗಿ) ಪ್ರಶಂಸನೀಯ ಕಾರ್ಯವೆಸಗಿದೆ. 'ವೈದ್ಯ ವಿಶ್ವಕೋಶ' ದಂಥ ಸ್ವತಂತ್ರ ಬರವಣಿಗೆಯನ್ನು ವೈಜ್ಞಾನಿಕವಾಗಿ ಅತ್ಯಂತ ಯಶಸ್ವಿಯಾಗಿ ನೀಡಬಲ್ಲ ಸಾಮರ್ಥ್ಯ ಕನ್ನಡಕ್ಕೆ ಒದಗಿರುವುದನ್ನು ಹಂಪಿ ಕನ್ನಡ ವಿಶ್ವವಿದ್ಯಾಲಯ ತೋರಿಸಿ ಕೊಟ್ಟಿದೆ.

ಕನ್ನಡ–ಕನ್ನಡ ನಿಘಂಟಿನ ಎಂಟನೆಯ ಸಂಪುಟದೊಂದಿಗೆ ಬಹು ದೊಡ್ಡ ಯೋಜನೆಯೊಂದನ್ನು ಪೂರ್ಣಗೊಳಿಸಿರುವ ಕನ್ನಡ ಸಾಹಿತ್ಯ ಪರಿಷತ್ತು ಈ ದಿಸೆಯಲ್ಲಿ ಹಾಕಿಕೊಂಡಿರುವ ಹೊಸ ಯೋಜನೆಗಳು ತುಂಬ ಆಶಾದಾಯಕವಾಗಿವೆ. ಎಂಟೂ ಸಂಪುಟಗಳ ಪರಿಷ್ಕರಣ ಯೋಜನೆಯನ್ನು ಪರಿಷತ್ತು ಈಗ ಕೈಗೆತ್ತಿಕೊಂಡಿದ್ದು, ಇಂಗ್ಲೀಷ್ ಸಂವಾದಿ ಪದಗಳನ್ನು ಕೊಡುವ ಮೂಲಕ ಕನ್ನಡ–ಇಂಗ್ಲೀಷ್ ನಿಘಂಟುವಾಗಿಯೂ ಇದರ ವ್ಯಾಪ್ತಿ ವಿಸ್ತಾರಗೊಳ್ಳಲಿದೆ. ಇದರೊಂದಿಗೆ 'ೞ' ಶಬ್ದಕೋಶ ಹಾಗೂ ಶಕಟರೇಫ ಶಬ್ದಕೋಶಗಳೆರಡೂ ಪ್ರತ್ಯೇಕವಾಗಿ ಸಿದ್ಧಗೊಂಡಿದ್ದು ಹಳಗನ್ನಡದ ಅಭ್ಯಾಸಕ್ಕೆ ಇವು ತುಂಬ ಪ್ರಯೋಜನಕಾರಿಯಾಗಿವೆ.

ವಿಮರ್ಶೆ ಸೃಜನಶೀಲವಾಗಿರುವುದು ಸಾಧ್ಯವಾಗಿರುವಂತೆಯೇ ಸಂಶೋಧನೆಯೂ ಸೃಜನಾತ್ಮಕವಾಗಬಲ್ಲದು. ಸಾಹಿತ್ಯ ಮತ್ತು ವಿಮರ್ಶೆಗಿರುವ ಪ್ರಾಶಸ್ತ್ಯವನ್ನು ಸಂಶೋಧನೆಗೂ ನೀಡಬೇಕಾದುದು ಅಗತ್ಯವಾಗಿರುವ ಈ ಸಂದರ್ಭದಲ್ಲಿ ಸಂಶೋಧನೆಯ ಬಗ್ಗೆ ಯುವಕರಲ್ಲಿ ಆಸ್ಥೆಯನ್ನು ಹುಟ್ಟಿಸಲು ಕರ್ನಾಟಕ ಇತಿಹಾಸ ಅಕಾಡೆಮಿ ಕೈಕೊಂಡ ಕಾರ್ಯ ಪ್ರಶಂಸನೀಯ.

ಹತ್ತು ಬಗೆಯ ವಸ್ತು, ವಿಷಯಗಳ ನೆಲೆಯಲ್ಲಿ ಗುಣ ಗಾತ್ರಗಳೆರಡರಲ್ಲೂ 'ಗೋವಿಂದ ಪೈ ಅವರ ಸಮಗ್ರ ಸಂಶೋಧನ' ಸಂಪುಟ ಗೊಮ್ಮಟನಂತೆ ಕನ್ನಡ ಗ್ರಂಥ ಲೋಕದ ಬೃಹತ್ ಸ್ಮಾರಕವೆನಿಸಿದೆ. ಸಂಶೋಧಕನ ಸಾಂಸ್ಕೃತಿಕ ಜವಾಬ್ದಾರಿಯನ್ನು ಎತ್ತಿ ತೋರಿಸುವ ಇಂಥ ಮೌಲಿಕ ಗ್ರಂಥವನ್ನು ಪ್ರಕಟಿಸಿ ರಾಷ್ಟ್ರ ಕವಿ ಗೋವಿಂದ ಪೈ ಸಂಶೋಧನಾ ಕೇಂದ್ರ ಕನ್ನಡಕ್ಕೆ ಬಹು ದೊಡ್ಡ ಸೇವೆಯನ್ನು ಸಲ್ಲಿಸಿದೆ.

ಇಂಥದೇ ಇನ್ನೊಂದು ಮಹತ್ಕಾರ್ಯವನ್ನು ಮಂಗಳೂರು ವಿಶ್ವವಿದ್ಯಾಲಯದ ಪ್ರಸಾರಾಂಗ ಪೂರೈಸಿ ಕೊಟ್ಟಿದೆ. ಸಂಪಾದಕಿ ಬಿ. ಮಾಲಿನಿ ಮಲ್ಯ ಅವರಿಂದ ರೂಪುಗೊಂಡ ಶಿವರಾಮ ಕಾರಂತರ ಬಿಡಿ ಬರಹಗಳ ಈ ಎಂಟು ಸಂಪುಟಗಳ ಪ್ರಕಟಣೆಗೆ ಐತಿಹಾಸಿಕ ಹಾಗೂ ಸಾಂಸ್ಕೃತಿಕ ಕಾರಣಗಳಿಂದಾಗಿ ಕನ್ನಡ ಸಾರಸ್ವತ ಪ್ರಪಂಚದಲ್ಲಿ ಮಹತ್ವದ ಸ್ಥಾನವಿದೆ.

ಖಾಸಗಿ ಪ್ರಕಾಶನ ಸಂಸ್ಥೆಯೊಂದು ಇಂಥದೇ ಒಂದು ಮಹತ್ವದ ಕಾರ್ಯಕ್ಕೆ ಕೈ ಹಾಕಿರುವುದು ಈ ಸಂದರ್ಭದಲ್ಲಿ ಉಲ್ಲೇಖನೀಯ. ಅಂಕೋಲಾ (ಅಂಬಾರ ಕೊಡ್ಲ) ರಾಘವೇಂದ್ರ ಪ್ರಕಾಶನ, ಗೌರೀಶ ಕಾಯ್ಕಿಣಿಯವರ ಸಮಗ್ರ ಸಾಹಿತ್ಯವನ್ನು ಹತ್ತು

ಸಂಪುಟಗಳಲ್ಲಿ ಪ್ರಕಟಿಸುವ ಸಾಹಸಕ್ಕೆ ಕೈ ಹಾಕಿದ್ದು ಐದು ಸಂಪುಟಗಳು ಈಗಾಗಲೇ ಹೊರ ಬಂದಿವೆ. ಕನ್ನಡದಲ್ಲಿ ವೈಚಾರಿಕ ಕ್ಷೇತ್ರವನ್ನು ಶ್ರೀಮಂತಗೊಳಿಸಿದವರಲ್ಲಿ ವಿಚಾರ ವಾದಿಗಳಾದ ಗೌರೀಶ ಕೈಕಿಣಿ ಅಗ್ರಗಣ್ಯರು. ಅವರ ಬರವಣಿಗೆ ಒಂದು ನಿರಂತರ ಚೈತನ್ಯ ಪ್ರವಾಹ. ಅವರ ಸಂವೇದನೆ ಇಂದಿಗೂ ಅಷ್ಟೇ ಸೂಕ್ಷ್ಮ, ಲೇಖನಿ ಅಷ್ಟೇ ಹರಿತ, ಚಿಂತನೆ ಅಷ್ಟೇ ಪ್ರಖರ, ಜ್ಞಾಪಕ ಶಕ್ತಿ ಅಷ್ಟೇ ಅದ್ಭುತ. ಮನುಷ್ಯನ ಬುದ್ಧಿಶಕ್ತಿ ಯಾವ ಯಾವ ಸಂದರ್ಭದಲ್ಲಿ ಯಾವ ಯಾವ ದಿಸೆಯಲ್ಲಿ ಜೀವನದ ಮೂಲಭೂತವಾದ ಆಧಾರಗಳನ್ನು, ಆಶಯಗಳನ್ನು ಆಕಾಂಕ್ಷೆಗಳನ್ನು ಒಳಗೊಂಡು ವಿಶ್ಲೇಷಣೆಗೆ ತೊಡಗಬಹುದು ಎಂಬುದನ್ನು ಗೌರೀಶರು ತೋರಿಸಿ ಕೊಟ್ಟಿದ್ದಾರೆ.

ಸಾಹಿತ್ಯ ಸಂಶೋಧನ ಹಾಗೂ ಪ್ರಕಾಶನ ಕ್ಷೇತ್ರದಲ್ಲಿ ನಮ್ಮ ನಾಡಿನ ಕೆಲವು ಮಠಗಳು ಸಲ್ಲಿಸುತ್ತಿರುವ ಸೇವೆ ಅನುಪಮವಾದದ್ದು. ಗದಗಿನ ತೋಂಟದಾರ್ಯ ಮಠದ ವೀರಶೈವ ಅಧ್ಯಯನ ಸಂಸ್ಥೆ, ಬೆಳಗಾವಿಯ ನಾಗನೂರು ರುದ್ರಾಕ್ಷಿ ಮಠದ ವೀರಶೈವ ಅಧ್ಯಯನ ಅಕಾಡೆಮಿ, ಮೈಸೂರಿನ ಸುತ್ತೂರು ಮಠದ ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ ಮುಂತಾದವನ್ನು ಇಲ್ಲಿ ಎತ್ತಿ ಹೇಳಬಹುದು. ಅಪ್ರಕಟಿತ ಕಾವ್ಯ, ವಚನ, ಸ್ವರವಚನ ಇತ್ಯಾದಿಗಳನ್ನು ವ್ಯವಸ್ಥಿತ ಕ್ರಮದಲ್ಲಿ ಹೊರ ತರುತ್ತಿರುವುದಲ್ಲದೆ ಮಹತ್ವದ ಪಿಎಚ್.ಡಿ. ಪ್ರಬಂಧಗಳ ಪ್ರಕಟಣೆಗೂ ಅವು ಮುಂದಾಗಿರುವುದನ್ನು ಕಂಡು ವಿಶ್ವವಿದ್ಯಾಲಯಗಳೂ ಕಣ್ ಕಣ್ ಬಿಡುವಂತಾಗಿದೆ.

ಪ್ರಾಚೀನ ಗ್ರಂಥಗಳನ್ನು ಪರಿಷ್ಕರಿಸಿ ಹಲವಾರು ಹಸ್ತಪ್ರತಿಗಳ ಸಹಾಯದಿಂದ ಶುದ್ಧ ಪಾಠಗಳನ್ನು ನಿರ್ಣಯಿಸುವುದು ಗ್ರಂಥ ಸಂಪಾದನೆಯಲ್ಲಿ ಮುಖ್ಯ ಅಂಶವಾಗಿದೆ. ಇದಕ್ಕೆ ಹೊರತಾದ ಯಾವುದೇ ಬದಲಾವಣೆಯನ್ನು ಮೂಲಕೃತಿಯಲ್ಲಿ ಮಾಡುವ ಹಕ್ಕು ಸಂಪಾದಕನಿಗಿರುವುದಿಲ್ಲ. ಇದು ವಿಶೇಷ ಪರಿಶ್ರಮ ಹಾಗೂ ವಿದ್ವತ್ತನ್ನು ಅಪೇಕ್ಷಿಸುವ ಶಾಸ್ತ್ರವೆಂಬುದಕ್ಕೆ ಉದಾಹರಣೆಯಾಗಿ ಕನ್ನಡದಲ್ಲಿ ಈವರೆಗೆ ಅನೇಕ ಸಂಪಾದಿತ ಗ್ರಂಥಗಳು ಪ್ರಕಟವಾಗಿರುವುದುಂಟು. ವಚನ ಸಾಹಿತ್ಯವೂ ಇದಕ್ಕೆ ಹೊರತಾಗಿಲ್ಲ. ಆದರೆ ಈಚೆಗೆ ಮಾತೆ ಮಹಾದೇವಿಯವರು ('ಬಸವಾತ್ಮಜೆ') ಸಂಪಾದಿಸಿರುವ 'ಬಸವ ವಚನ ದೀಪ್ತಿ' ಯಲ್ಲಿ ಬಸವಣ್ಣನ ವಚನಗಳ ಅಂಕಿತವಾದ 'ಕೂಡಲ ಸಂಗವದೇವಾ' ಕ್ಕೆ ಬದಲಾಗಿ 'ಲಿಂಗದೇವ' ಎಂಬ ಕಲ್ಪಿತ ಅಂಕಿತವನ್ನು ಹಾಕಿರುವುದು 'ಅಸಾಧು', 'ಉದ್ಧಟತನ' ಎಂಬುದು ಅವರಿಗೂ ಗೊತ್ತಿಲ್ಲದೆಯಿಲ್ಲ. 'ಕೂಡಲ ಸಂಗಮ' ಪದದಲ್ಲಿಯ ಔಚಿತ್ಯಪೂರ್ಣವಾದ ಕಾವ್ಯ ಪ್ರತಿಮೆಯನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಲಾರದ ಇವರು ಬಸವಣ್ಣನ ಕ್ಷಮೆ ಕೋರಿ ಹೀಗೆ ಮಾಡಿರುವುದಾಗಿ ಹೇಳಿಕೊಂಡಿರುವುದಂತೂ ಅತ್ಯಂತ ಬಾಲಿಶ ಹಾಗೂ ಹಾಸ್ಯಾಸ್ಪದ. ಇಂಥ ಅನುಚಿತ ಕಾರ್ಯಕ್ಕಾಗಿ ಅವರು ಕ್ಷಮೆ ಕೋರಿ ಈ ಗ್ರಂಥವನ್ನು ಕೂಡಲೆ ಹಿಂತೆಗೆದುಕೊಳ್ಳುತ್ತಾರೆಂದು ನಾನು ಆಶಿಸುತ್ತೇನೆ.

ಬೆಲೆಯುಳ್ಳ ನೂರು ಪ್ರಕಟನೆಗಳ ಗಡಿ ದಾಟಿ ಸಾವಿರದ ಕವನಗಳ ಸಂಪುಟದ ಯೋಜನೆಯಲ್ಲಿ ತೊಡಗಿರುವ ಕ್ರೈಸ್ತ ಕಾಲೇಜಿನ ಕನ್ನಡ ಸಂಘದ

ಮಹತ್ಕಾರ್ಯದೊಂದಿಗೆ ಹುಬ್ಬಳ್ಳಿಯ 'ಮಹಿಳಾ ಸಾಹಿತ್ಯಿಕಾ', ಹೆಗ್ಗೋಡಿನ 'ಅಕ್ಷರ ಚಿಂತನ ಮಾಲೆ' ಹಾಗೂ ಪುತ್ತೂರಿನ ಕರ್ನಾಟಕ ಸಂಘದಂತಹ ಖಾಸಗಿ ಸಂಸ್ಥೆಗಳ ಸದಭಿರುಚಿಯ ಸಾಹಿತ್ಯ ಸೇವೆಯನ್ನು ಈ ಸಂದರ್ಭದಲ್ಲಿ ನೆನೆಯುವುದು ಅಗತ್ಯ.

ಧಾರವಾಡದ ಸುವಿರೇಕ ಪ್ರಕಾಶನ ಈಚೆಗೆ ಕನ್ನಡ ಪತ್ತೇದಾರಿ ಸಾಹಿತ್ಯದ ಶತಮಾನೋತ್ಸವವನ್ನು ಆಚರಿಸಿ, ಪತ್ತೇದಾರಿ ಸಾಹಿತ್ಯವೂ ಸಾಹಿತ್ಯದ ಒಂದು ಅಂಗ ಎಂಬುದರ ಕಡೆಗೆ ವಿಮರ್ಶಕರ ಗಮನ ಹರಿಯುವಂತೆ ಮಾಡಿದೆ. ನಾಡಿನ ಒಳಗೂ ಹೊರಗೂ ಅನೇಕ ಕಡೆಗಳಲ್ಲಿ ಸಾಹಿತ್ಯಿಕ–ವೈಚಾರಿಕ ವೇದಿಕೆಗಳೂ, ಚಿಕ್ಕ ಚಿಕ್ಕ ಪತ್ರಿಕೆಗಳೂ ಅಲ್ಲಲ್ಲಿಯ ಸಾಹಿತ್ಯಿಕ ವಾತಾವರಣವನ್ನು ಜೀವಂತವಾಗಿಡಲು ನೆರವಾಗುತ್ತಿವೆ. ಹಿಂದೆ 'ಗ್ರಂಥ ಲೋಕ' ಇಟ್ಟುಕೊಂಡಿದ್ದ ಉದ್ದೇಶವನ್ನು ಇನ್ನಿಷ್ಟು ವ್ಯಾಪಕವಾಗಿ ಹಾಗೂ ಸಮರ್ಥವಾಗಿ ನಿರ್ವಹಿಸುತ್ತಿರುವ 'ಪುಸ್ತಕ ಮಾಹಿತಿ' (ಹಂಪಿ ಕನ್ನಡ ವಿಶ್ವವಿದ್ಯಾಲಯ) ಹಾಗೂ 'ವಿಜ್ಞಾನ ಸಂಗಾತಿ' ನಿಯತಕಾಲಿಕೆಗಳು ಉಪಯುಕ್ತ ಕಾರ್ಯಗೈಯುತ್ತಿವೆ. ಸೃಜನಶೀಲ ಕಲೆಗಳ ದ್ವೈಮಾಸಿಕ 'ಸಂಕುಲ'ಕ್ಕೆ ಇನ್ನೂ ಹೆಚ್ಚಿನ ಪ್ರೋತ್ಸಾಹ ದೊರೆಯುವುದು ಅಗತ್ಯವಾಗಿದೆ. ೪೫ ವರ್ಷಗಳಿಂದ ನಿರಂತರವಾಗಿ ಪ್ರಕಟವಾಗುತ್ತ, ಹಾಸ್ಯದ ಹಿತಕರ ವಾತಾವರಣವನ್ನು ನಿರ್ಮಿಸಿಕೊಂಡು ಬಂದಿರುವ 'ವಿನೋದ' ಚಿನ್ನದ ಹಬ್ಬವನ್ನು ಆಚರಿಸಿ ಮುನ್ನಡೆಯುವಂತೆ ಕನ್ನಡಿಗರು ನೋಡಿಕೊಳ್ಳಬೇಕು. ಪ್ರಾಥಮಿಕ ಶಿಕ್ಷಣ ಇಲಾಖೆಯ 'ಕಲಿ–ನಲಿ' ದ್ವೈಮಾಸಿಕ, ಶಿಕ್ಷಣ ವಿಧಾನ ಹಾಗೂ ಶಿಕ್ಷಕರ ಮನೋಭಾವದಲ್ಲಿ ಬದಲಾವಣೆಯನ್ನು ತರಬಹುದಾದ ಒಂದು ಒಳ್ಳೆಯ ಪ್ರಯತ್ನವಾಗಿದೆ.

ಇಷ್ಟೆಲ್ಲ ಕೆಲಸ ನಡೆದಿರುವಾಗ ಒಳ್ಳೆಯ ಪುಸ್ತಕಗಳು ಓದುಗರ ಕೈಗೆ ವಿಲಂಬವಿಲ್ಲದೆ ದೊರೆಯುವ ವ್ಯವಸ್ಥೆ ಇನ್ನೂ ಸರಿಯಾಗಿ ಆಗುತ್ತಿಲ್ಲ. ಕನ್ನಡ ಪುಸ್ತಕ ಪ್ರಾಧಿಕಾರ ಇದನ್ನೇ ತನ್ನ ಆದ್ಯ ಕರ್ತವ್ಯವೆಂದು ಪರಿಗಣಿಸಿ ಇನ್ನಿಷ್ಟು ವೇಗವಾಗಿ ಕಾರ್ಯ ಪ್ರವೃತ್ತವಾದರೆ ಇದಕ್ಕೊಂದು ಚಾಲನೆ ದೊರೆತಂತಾಗುತ್ತದೆ. ಹಾಗೆಯೇ ಪ್ರಾಧಿಕಾರ ಪ್ರತಿ ತಿಂಗಳು 'ಸಂಕ್ಷಿಪ್ತ ಕೃತಿ ವಿವರಣ ಸೂಚಿ'ಯೊಂದನ್ನು ಪ್ರಕಟಿಸುವುದಾದರೆ ಪುಸ್ತಕಗಳ ಬಳಕೆದಾರರಿಗೆಲ್ಲ ಹೆಚ್ಚಿನ ಅನುಕೂಲವನ್ನು ಒದಗಿಸಿ ಕೊಟ್ಟಂತಾಗುತ್ತದೆ. ತಾಂತ್ರಿಕ ಹಾಗೂ ಇಲೆಕ್ಟ್ರಾನಿಕ್ ಕ್ಷೇತ್ರದಲ್ಲಿನ ಕ್ರಾಂತಿಯ ಧಾವಂತದಲ್ಲಿ ಪುಸ್ತಕ ಸಂಸ್ಕೃತಿ ಮರೆಯಾಗದಂತೆ ನೋಡಿಕೊಳ್ಳುವುದು ಸಾಹಿತ್ಯ ಪ್ರೇಮಿಗಳ ಹಾಗೂ ಜ್ಞಾನ ಪಿಪಾಸುಗಳ ಕರ್ತವ್ಯವಾಗಿದೆ.

೬

ಕನ್ನಡವನ್ನು ಕಟ್ಟುವ ಕೆಲಸವಂತೂ ಸದಾ ನಮ್ಮ ಕಣ್ಣಮುಂದೆ ಇರಬೇಕಾದದ್ದು. 'ಕನ್ನಡ ನಾಡು ಕಟ್ಟುವುದೆಂದರೆ ಬರಿ ರಾಜಕೀಯ–ಭೌಗೋಳಿಕ ಸೀಮಾರೇಖೆಯಲ್ಲ; ಅದು ಜೀವಂತ, ಚಿಂತನಶೀಲ, ಸೃಜನಶೀಲ ಜನಪದ ಸೃಷ್ಟಿ'. ಕನ್ನಡದ ಸರ್ವತೋಮುಖ ಪ್ರಗತಿಗೆ ಕೈಕೊಳ್ಳಬೇಕಾದ ಕರ್ತವ್ಯಗಳ ಬಗ್ಗೆ ಕಾಲ

ಕಾಲಕ್ಕೆ ಹಿರಿಯರು, ವಿಚಾರಶೀಲರು ಪ್ರಸ್ತಾಪಿಸುತ್ತ, ಮಾರ್ಗದರ್ಶನ ಮಾಡುತ್ತ ಅವಶ್ಯ ಬಿದ್ದಾಗ ಹೋರಾಟದ ಕಣಕ್ಕಿಳಿದು ಕ್ರಿಯಾಶೀಲರಾಗಿ ಕೆಲಸ ಮಾಡುತ್ತ ಬಂದಿದ್ದಾರೆ. ನಾನು ಮತ್ತೆ ಅವನ್ನಿಲ್ಲಿ ಪುನರುಕ್ತಿಗೊಳಿಸಬಯಸುವುದಿಲ್ಲ. ಕನ್ನಡದ ಕೆಲಸಗಳನ್ನು ಆಡದೆ ಮಾಡಿ, ರೂಢಿಯಲ್ಲಿ ಉತ್ತಮವೆನಿಸಿಕೊಳ್ಳುವಂಥ ಸರಕಾರ ಇನ್ನೂ ಕನಸಾಗಿಯೇ ಉಳಿದಿದೆ. ಕಳೆದ ದಶಕಗಳಲ್ಲಿ ರಾಜ್ಯ ಸರಕಾರಗಳು ಬದಲಾದರೂ ಕನ್ನಡದ ಅಭಿವೃದ್ಧಿ ಮತ್ತು ಕನ್ನಡದ ಸ್ಥಿತಿಯಲ್ಲಿ ಹೇಳಿಕೊಳ್ಳುವಂಥ ಯಾವ ಬದಲಾವಣೆಗಳೂ ಆಗಿಲ್ಲ. ಕನ್ನಡ ಚಳವಳಿಗೆ ಗೌರವ ಮತ್ತು ವಿಶ್ವಾಸಾರ್ಹತೆಯನ್ನು ತಂದು ಕೊಟ್ಟ ವ್ಯಕ್ತಿಗಳನ್ನು, ಸಂಘ ಸಂಸ್ಥೆಗಳನ್ನು ಸರಕಾರ ಗೌರವದಿಂದ ಕಾಣಬೇಕಲ್ಲದೆ ಕನ್ನಡದ ಹೊಣೆಗಾರಿಕೆಯ ಮಹತ್ವದ ಕೆಲಸಗಳನ್ನು ಅವರಿಗೆ ವಹಿಸಬೇಕು. ಕನ್ನಡ ಶಕ್ತಿ ಕೇಂದ್ರ (ಬೆಂಗಳೂರು), ಅ. ಕ. ಕೇಂದ್ರ ಕನ್ನಡ ಕ್ರಿಯಾ ಸಮಿತಿ (ಧಾರವಾಡ), ಉತ್ತರ ಕರ್ನಾಟಕ ಅಭಿವೃದ್ಧಿಪರ ಹೋರಾಟ ವೇದಿಕೆ (ಹುಬ್ಬಳ್ಳಿ), ಕನ್ನಡ ಸಂಘರ್ಷ ಸಮಿತಿ (ಬೆಂಗಳೂರು) ಮೊದಲಾದ ಇನ್ನೂ ಕೆಲವು ಕನ್ನಡ ಪರ ಸಂಘ ಸಂಸ್ಥೆಗಳು ಕನ್ನಡದ ಜಾಗ್ರತಿಯನ್ನು ನಿರಂತರವಾಗಿ ಮುನ್ನಡೆಸಿವೆ. ನಾಡಿನ ಹಿತ ರಕ್ಷಣೆಯ ಪ್ರಶ್ನೆ ಬಂದಾಗ ಈ ಬಗೆಯ ಎಲ್ಲ ಸಂಘಟನೆಗಳ ಧ್ವನಿ ಒಂದೇ ಆಗಿ ಮೊಳಗಬೇಕು.

ಕರ್ನಾಟಕದ ಎಷ್ಟೋ ಭಾಗಗಳು ಇಂದಿಗೂ ಅಭಿವೃದ್ಧಿಯಿಂದ ವಂಚಿತವಾಗಿ ಪ್ರಾದೇಶಿಕ ಅಸಮತೋಲನದಿಂದ ನರಳುವಂತಾಗಿವೆ. ಕನ್ನಡದ ಹಾಗೂ ಕರ್ನಾಟಕದ ಎಲ್ಲ ತೊಂದರೆಗಳಿಗೆ ಬೆಂಗಳೂರು ರಾಜಧಾನಿಯಾಗಿರುವುದೇ ಕಾರಣವೆಂಬುದು ಇಂದು ಕಣ್ಣಿಗೆ ಹೊಡೆದು ಕಾಣುತ್ತಿದೆ. ವೈದ್ಯಕೀಯ ವಿಶ್ವವಿದ್ಯಾಲಯಕ್ಕೆ ದಾವಣಗೆರೆ ಅಥವಾ ಬೆಳಗಾವಿ ಯೋಗ್ಯ ಸ್ಥಳವಾಗಿರಲಿಲ್ಲವೆ ? ರೇಲ್ವೆ ನೈಋತ್ಯ ವಲಯದ ಸ್ಥಾಪನೆಗೆ ಸರ್ವಾನುಕೂಲವಾದ ಹುಬ್ಬಳ್ಳಿಯನ್ನು ಕಡೆಗಣಿಸುವುದು ಯಾವ ನ್ಯಾಯ ? ಹೈಕೋರ್ಟ್ ಪೀಠವನ್ನು ಉತ್ತರ ಕರ್ನಾಟಕದಲ್ಲಿ ಪ್ರಾರಂಭಿಸಲು ಏಕೆ ಪ್ರಾಮಾಣಿಕವಾದ ಪ್ರಯತ್ನ ನಡೆಯುತ್ತಿಲ್ಲ ? ಎಲ್ಲ ಅಕಾಡೆಮಿಗಳನ್ನು ಒಳಗೊಳ್ಳುವ ಕಟ್ಟಡ ಸಮುಚ್ಚಯವನ್ನು ಬೆಂಗಳೂರಲ್ಲಿ ಕಟ್ಟುವ ಬದಲು ಕೆಲವು ಅಕಾಡೆಮಿಗಳನ್ನಾದರೂ ಧಾರವಾಡ–ಹುಬ್ಬಳ್ಳಿ ನಡುವೆ ಸ್ಥಾಪಿಸುವುದು ಅವಶ್ಯವಾಗಿದೆ. ಭೋಪಾಲದ ಭಾರತ ಭವನದ ಮಾದರಿಯಲ್ಲಿ ಅಥವಾ ಅದಕ್ಕೂ ಉತ್ತಮವಾದ ರೀತಿಯಲ್ಲಿ ಅಂಥ ಒಂದು ಭವನದ ನಿರ್ಮಾಣ ಈ ಭಾಗದಲ್ಲಿ ಆಗುವುದು ಅಪೇಕ್ಷಣೀಯ.

ಕನ್ನಡಿ ಹರಳನ್ನು ಎಸೆದ ಮೇಲೆ ಬೆಸೆದರೂ ಅದು ಕೂಡಲಾರದೆನ್ನುವ ಸತ್ಯವನ್ನು ನಮ್ಮ ರಾಜಕಾರಣಿಗಳು ಬೇಗ ಮನವರಿಕೆ ಮಾಡಿಕೊಂಡು ನಾಡಿನ ಏಕತೆಯ ದೃಷ್ಟಿಯಿಂದ ಆಗಬಹುದಾದ ಅನಾಹುತವನ್ನು ತಪ್ಪಿಸುವ ಮುತ್ಸದ್ದಿತನವನ್ನು ತೋರಿಸುತ್ತಾರೆಂದು ಆಶಿಸೋಣ.

ಕರ್ನಾಟಕದಲ್ಲಿ ಭಾಷಾ ಅಲ್ಪಸಂಖ್ಯಾತರಿಗೆ ಕೊಡುತ್ತಿರುವ ಸೌಲಭ್ಯಗಳು ಬೇರೆ ಯಾವ ರಾಜ್ಯದಲ್ಲಿಯೂ ಕಂಡು ಬರುವುದಿಲ್ಲವೆನ್ನುವುದನ್ನು ಭಾಷಾ ಆಯೋಗ

ಒಪ್ಪಿಕೊಂಡಿದೆ. ಧಾರವಾಡ, ಕಲಬುರ್ಗಿ ಆಕಾಶವಾಣಿ ನಿಲಯಗಳು ನಿಷ್ಠೆಯಿಂದ ಮರಾಠಿ ಕಾರ್ಯಕ್ರಮಗಳನ್ನು ಬಿತ್ತರಿಸುವುದಷ್ಟೇ ಅಲ್ಲದೆ ವಂದನಾ ಗೀತಗಳಲ್ಲಿ ನೆರೆಹೊರೆಯ ಭಾಷಾ ಗೀತಗಳಿಗೆ ಧಾರಾಳವಾಗಿ ಎಡೆಗೊಡಲಾಗುತ್ತಿದೆ. ನೆರೆಹೊರೆಯ ರಾಜ್ಯಗಳೂ ಈ ನೀತಿಯನ್ನು ಅನುಸರಿಸಿದರೆ ಪರಸ್ಪರ ಬಾಂಧವ್ಯ ಬೆಳೆಯಲು ಸಾಧ್ಯ. ಪುಣೆ, ಸಾಂಗಲಿ, ಸೊಲ್ಲಾಪೂರ ಆಕಾಶವಾಣಿ ನಿಲಯಗಳಲ್ಲಿ ಕನ್ನಡದ ಗಾಳಿ ಕೂಡ ಸುಳಿಯುವುದಿಲ್ಲ. ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಕರ್ನಾಟಕ ಸರಕಾರ ಕೂಡಿಯೇ ಈ ದಿಸೆಯಲ್ಲಿ ಸೂಕ್ತ ಕ್ರಮ ಕೈಕೊಳ್ಳಲು ಮುಂದಾಗಬೇಕು. ಪುಣೆಯ ಮರಾಠಿ–ಕನ್ನಡ ಸ್ನೇಹವರ್ಧನ ಕೇಂದ್ರದ ಚಟುವಟಿಕೆಗಳು ಈ ದಿಸೆಯಲ್ಲಿ ಹೆಚ್ಚಿನ ಪ್ರೋತ್ಸಾಹಕ್ಕೆ ಅರ್ಹವಾಗಿವೆ.

ಕರ್ನಾಟಕದ ಗಡಿಭಾಗದ ಊರುಗಳಲ್ಲಿ ಕನ್ನಡ ಶಿಕ್ಷಣ ಕುಗ್ಗುತ್ತ ನಡೆದಿದೆ. ಅಲ್ಲಿ ಕನ್ನಡ ಶಾಲೆಗಳನ್ನು ತೆರೆದು, ಇತರ ಶಾಲೆಗಳಿಗಿಂತ ಅವು ಬಲಗೊಳ್ಳುವಂತೆ ನೋಡಿಕೊಂಡು ಸಾಂಸ್ಕೃತಿಕ ಚಟುವಟಿಕೆಗಳು ನಿರಂತರವಾಗಿ ನಡೆಯುವುದಾದರೆ ಅಲ್ಲಿ ಕನ್ನಡದ ವಾತಾವರಣ ಉಳಿದೀತು. ಪಾಟೀಲ ಪುಟ್ಟಪ್ಪನವರು ಅಧ್ಯಕ್ಷರಾಗಿದ್ದ ಕನ್ನಡ ಕಾವಲು ಸಮಿತಿ ಈ ದಿಸೆಯಲ್ಲಿ ಸಾಕಷ್ಟು ಕಾರ್ಯಗೈದದ್ದನ್ನು ಮರೆಯುವಂತಿಲ್ಲ. ಕನ್ನಡ ಅಭಿವೃದ್ಧಿ ಪ್ರಾಧಿಕಾರ ನೂತನ ಅಧ್ಯಕ್ಷರ ಸಾರಥ್ಯದಲ್ಲಿ ಶಾಸನಬದ್ಧ ಅಧಿಕಾರವನ್ನು ಪಡೆದು ಹಿಂದೆ ನಡೆದ ಕಾರ್ಯಕಲಾಪಗಳ ಅನುಭವದ ಹಿನ್ನೆಲೆಯಲ್ಲಿ ತನ್ನ ಕ್ರಿಯಾಶೀಲತೆಯನ್ನು ಹೆಚ್ಚಿಸಿಕೊಂಡು ಕನ್ನಡದ ಕೆಲಸಗಳಿಗೆ ತೀವ್ರ ಚಾಲನೆಯನ್ನು ಒದಗಿಸುವುದೆಂದು ಆಶಿಸಲಾಗಿದೆ. ದೂರದರ್ಶನದಲ್ಲಿ ಕನ್ನಡಕ್ಕಾಗಿ ಪ್ರತ್ಯೇಕ ಚಾನೆಲ್ ಪ್ರಾರಂಭಿಸುವಂತೆ ಕೇಂದ್ರವನ್ನು ಒತ್ತಾಯಿಸುವುದು ಹಾಗು ಕರ್ನಾಟಕ ಲೋಕ ಸೇವಾ ಆಯೋಗದ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಕನ್ನಡ ಪತ್ರಿಕೆಯನ್ನು ಕಡ್ಡಾಯವಾಗಿಸುವದು ಅತ್ಯಂತ ಅಗತ್ಯವಾಗಿದೆ.

ಕರ್ನಾಟಕದಿಂದ ಹೊರಗುಳಿದ ಗಡಿನಾಡ ಕನ್ನಡಿಗರ ಸಾಂಸ್ಕೃತಿಕ ಉನ್ನತಿಗೆ ಸ್ಪಷ್ಟವಾದ ಮತ್ತು ಬಲವಾದ ಸಾಂಸ್ಕೃತಿಕ ನೀತಿಯೊಂದನ್ನು (Cultural Policy) ಕರ್ನಾಟಕ ಸರಕಾರ ಕೂಡಲೇ ರೂಪಿಸಬೇಕು. ಗಡಿನಾಡ ಕನ್ನಡಿಗರನ್ನು ಹಾಗೂ ಹೊರನಾಡ ಕನ್ನಡಿಗರನ್ನು ಒಂದೇ ಮಾನದಂಡದಿಂದ ಆಳೆಯುವ ಧೋರಣೆ ತಪ್ಪು. ಗಡಿನಾಡ ಕನ್ನಡಿಗರು ಮುಂದೆ ಹಲವಾರು ತಲೆಮಾರುಗಳ ತನಕ ಕನ್ನಡ ಸಂಸ್ಕೃತಿಯನ್ನು ಉಳಿಸಿಕೊಂಡು ಬರಲು ಕರಾರುವಾಕ್ಕಾದ ಮತ್ತು ಯೋಜನಾ ಬದ್ಧವಾದ ಕಾರ್ಯಕ್ರಮವನ್ನು ಹಾಕಿಕೊಳ್ಳುವುದು ಹೇಗೆ ಅದರ ಕರ್ತವ್ಯವೋ ಅಂತೆಯೇ ಅದಕ್ಕೆ ಅನುವು ಮಾಡಿಕೊಡುವುದು ಮತ್ತು ಸೂಕ್ತ ನೀತಿಗಳ ಆಧಾರದಲ್ಲಿ ಅದನ್ನು ಬೆಂಬಲಿಸುವುದು ಕರ್ನಾಟಕ ಸರಕಾರದ ಹೊಣೆಗಾರಿಕೆಯೂ ಹೌದು. ೧೯೫೬ರಲ್ಲಿ ಬೇಜವಾಬ್ದಾರಿತನ ಹಾಗೂ ಇಚ್ಛಾಶಕ್ತಿಯ ಕೊರತೆಯಿಂದ ಕರ್ನಾಟಕ ಕಳೆದುಕೊಂಡ ಹಲವು ಕನ್ನಡ ಪ್ರದೇಶಗಳ ಕುರಿತು ಇಷ್ಟನ್ನಾದರೂ ಈಗ ಮಾಡಬೇಕಿದೆ. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ರೀತಿಯಲ್ಲಿ ಗಡಿನಾಡು ಕನ್ನಡ ಪ್ರದೇಶಗಳ ಅಭಿವೃದ್ಧಿ

ಪ್ರಾಧಿಕಾರವೊಂದನ್ನು ಸ್ಥಾಪಿಸಿ ಈ ನಿಟ್ಟಿನಲ್ಲಿ ಪ್ರಯತ್ನಿಸುವುದು ಸೂಕ್ತ. ಇಲ್ಲವಾದಲ್ಲಿ ಆಗಾಗ ಅಷ್ಟಿಷ್ಟು ಮೊತ್ತವನ್ನು ದೇಣಿಗೆ ನೀಡಿ ಕೈ ತೊಳೆದುಕೊಂಡರೆ ಏನನ್ನೂ ಮಾಡಿದಂತಾಗುವುದಿಲ್ಲ.

ಕನ್ನಡಿಗರು ಹೊಸದನ್ನು ಗಳಿಸುವುದಿರಲಿ, ಇದ್ದುದನ್ನು ಕಳೆದುಕೊಳ್ಳದ ಹಾಗಾದರೂ ನೋಡಿಕೊಳ್ಳಬೇಕಲ್ಲವೆ ? ಹಾಗಾದರೆ ವ್ಯವಹಾರದಲ್ಲಿ ಕನ್ನಡ ಅಂಕಿಗಳಿಗೂ ಪ್ರಾಧಾನ್ಯ ನೀಡಬೇಕು. ಕನ್ನಡ ಮಾಧ್ಯಮದ ತರಗತಿಗಳಲ್ಲಿ ಗಣಿತವನ್ನು ಕನ್ನಡ ಅಂಕಿಗಳಲ್ಲಿಯೇ ಕಲಿಸಬೇಕು. ಈಗ ಮಹಾರಾಷ್ಟ್ರದಲ್ಲಿ ೧ರಿಂದ ೪ನೇ ವರ್ಗದವರೆಗೆ ಕನ್ನಡ ಮಾಧ್ಯಮದ ಮಕ್ಕಳಿಗೆ ಕನ್ನಡ ಅಂಕಿಗಳಲ್ಲಿಯೇ ಗಣಿತವನ್ನು ಕಲಿಸುವ ಕ್ರಮವಿದೆ. ಸಮೂಹ ಮಾಧ್ಯಮಗಳು, ಕನ್ನಡ ಪತ್ರಿಕೆ, ದೂರದರ್ಶನ ಮೊದಲಾದವುಗಳಲ್ಲಿ ಕನ್ನಡ ಅಂಕಿಗಳನ್ನೇ ಬಳಸಬೇಕು. ರಾಜ್ಯದಲ್ಲಿ ನೋಂದಣಿಯಾದ ವಾಹನಗಳ ಮೇಲೆ ಕನ್ನಡದಲ್ಲಿ ಪ್ರಧಾನವಾಗಿ ನೋಂದಣಿ ಫಲಕಗಳಿರಬೇಕು. ಇದನ್ನು ಬೆಂಗಳೂರು ನಗರ ಸಾರಿಗೆ, ಧಾರವಾಡ–ಹುಬ್ಬಳ್ಳಿ ನಗರ ಸಾರಿಗೆ, ಧಾರವಾಡ ಜಿಲ್ಲೆಯ ವಾಹನಗಳು ಬಳಕೆಗೆ ತಂದಿರುವುದು ಸ್ವಾಗತಾರ್ಹ. ಕನ್ನಡ ಅಂಕಿಗಳ ಬಳಕೆಯನ್ನು ಹಳೆಯ ಮೈಸೂರು, ಅದರಲ್ಲೂ ಬೆಂಗಳೂರು ತರುವ ಪ್ರತಿರೋಧ ಖಂಡನಾರ್ಹ. ಮಹಾರಾಷ್ಟ್ರದವರು ಅಂತಾರಾಷ್ಟ್ರೀಯ ನಗರ 'ಬಾಂಬೆ' ಯನ್ನು 'ಮುಂಬಯಿ', 'ಆಮಚಿ ಮುಂಬಯಿ' ಎಂದು ಆಗಿಸಿಕೊಂಡಿರುವುದು ಸಾಧ್ಯವಾದರೆ ಕರ್ನಾಟಕದ ರಾಜಧಾನಿ ಕನ್ನಡದ ಸಂಸ್ಕೃತಿಯ ಪ್ರತೀಕವಾಗಿರಬಾರದೆ ? ಮುಂಬಯಿಯನ್ನು ಒಳಗೊಂಡು ಮಹಾರಾಷ್ಟ್ರ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸುಗಳ ತಿಕೀಟುಗಳಲ್ಲಿ ಇಂಗ್ಲಿಷ್ ಅಂಕಿಗಳೇ ಇಲ್ಲದಿರುವುದನ್ನು ಕನ್ನಡಿಗರು ಕಣ್ತೆರೆದು ನೋಡಬೇಕು.

ಕನ್ನಡ ಕರ್ನಾಟಕ ಉಸಿರಾಗಬೇಕಾದರೆ ಶಾಲಾ ಹಂತದಿಂದಲೇ ಕನ್ನಡ ಭಾಷಾ ಬೋಧನ ಕ್ರಮದಲ್ಲಿ ಸುಧಾರಣೆಗಳನ್ನು ಕೈಕೊಳ್ಳುವುದು ಅವಶ್ಯವಿದೆ. ಇಂಗ್ಲೀಷ್, ಹಿಂದಿ ಮುಂತಾದ ಭಾಷೆಗಳನ್ನು ಪೂರ್ವ ಪ್ರಾಥಮಿಕ, ಪ್ರಾಥಮಿಕ ಪ್ರೌಢ, ಪದವಿ ಪೂರ್ವ, ಪದವಿ ಮಟ್ಟ ಮತ್ತು ಸ್ನಾತಕೋತ್ತರ ಹಂತಗಳಲ್ಲಿ ಹೇಗೆ ಬೋಧಿಸಬೇಕು ಎಂಬ ಬಗ್ಗೆ ತಿಳಿವಳಿಕೆ ನೀಡುವ ಅನೇಕ ಸಂಸ್ಥೆಗಳಿವೆ. ಕೇಂದ್ರೀಯ ಮತ್ತು ಪ್ರಾದೇಶಿಕ ಭಾಷಾ ಬೋಧನ ಸಂಸ್ಥೆಗಳನ್ನು ಇಂಗ್ಲೀಷ್ ಮತ್ತು ಹಿಂದೀ ಭಾಷೆಗಳು ಹೊಂದಿವೆ. ಕಳೆದ ನಾಲ್ಕು ದಶಕಗಳಿಂದ ಈ ಸಂಸ್ಥೆಗಳಲ್ಲಿ ಇಂಗ್ಲೀಷ್, ಹಿಂದಿ ಭಾಷಾ ಬೋಧನೆಯ ಬಗೆಗೆ ಅಧ್ಯಯನ, ಸಂಶೋಧನೆ ಮತ್ತು ತರಬೇತಿಗಳು ಅವ್ಯಾಹತವಾಗಿ ಕೇಂದ್ರ ಮತ್ತು ರಾಜ್ಯ ಸರಕಾರಗಳ ಪುರಸ್ಕಾರದಿಂದ ಜರುಗುತ್ತಿವೆ. ದಕ್ಷಿಣ ಭಾರತದ ಹಿಂದೀ ಪ್ರಚಾರ ಸಭಾದಂಥ ಸಂಸ್ಥೆಗಳಿಗೆ ವಿಶ್ವವಿದ್ಯಾಲಯದ ಸ್ಥಾನಮಾನಗಳಿದ್ದು ಸರಕಾರಗಳ ಅನುದಾನದಿಂದ ಹಿಂದೀ ಅಧ್ಯಯನದ ಬಗೆಗೆ ಈ ಸಂಸ್ಥೆ ಗಣನೀಯ ಕಾರ್ಯ ಮಾಡುತ್ತಿದೆ. ಕರ್ನಾಟಕ ರಾಜ್ಯ ಸರಕಾರವೇ ಆರು ಇಂಗ್ಲೀಷ್ ಭಾಷಾ ಬೋಧನಾ ತರಬೇತಿ ಸಂಸ್ಥೆಗಳನ್ನು ನಡೆಸುತ್ತಿದೆ. ಆಧುನಿಕ ಕಲಿಯುವ ಪದ್ಧತಿಗಳಿಗನುಗುಣವಾಗಿ, ಶಾಸ್ತ್ರೀಯವಾಗಿ ಶಿಕ್ಷಣ ತಂತ್ರಜ್ಞಾನವನ್ನು

ಅಳವಡಿಸಿ ಕನ್ನಡವನ್ನು ವಿವಿಧ ಶಾಲಾ ಹಂತಗಳಲ್ಲಿ ಹೇಗೆ ಬೋಧಿಸಬೇಕು ? ಎಂಬ ಬಗೆಗೆ ತಿಳಿವಳಿಕೆ ನೀಡುವ ಒಂದಾದರೂ ಸ್ವತಂತ್ರ ಸಂಸ್ಥೆ ನಮ್ಮಲ್ಲಿಲ್ಲ. ವಿಶ್ವವಿದ್ಯಾಲಯಗಳ ಕನ್ನಡ ಅಧ್ಯಯನ ಸಂಸ್ಥೆಗಳು ಭಾಷೆ, ಸಾಹಿತ್ಯ, ಸಂಶೋಧನೆಗಳತ್ತ ವಿಶೇಷ ಗಮನ ಹರಿಸಿರುವುದು ಸಹಜವೇ ಆದರೂ ಕನ್ನಡ ಭಾಷಾ ಬೋಧನೆಯ ವಿಧಿ ವಿಧಾನಗಳನ್ನು ಕುರಿತು ಯಾವ ಕೆಲಸವನ್ನೂ ಮಾಡಿಲ್ಲ. ಬಿ.ಇಡಿ. ಮತ್ತು ಟಿ.ಸಿ.ಎಚ್. ಶಿಕ್ಷಕ ತರಬೇತಿಗಳಲ್ಲಿಯ ಕನ್ನಡ ಭಾಷಾ ಬೋಧನೆ ಪರಿಮಿತ ಅವಧಿಗಳಿಂದಾಗಿ, ವರ್ಗ ಪಾಠಗಳಿಗೆ ಅಲ್ಲಿ ನೀಡುವ ಒತ್ತಡಗಳಿಂದಾಗಿ ಅದು ಸಮಗ್ರವಾಗಿ ಹಾಗೂ ವೈಜ್ಞಾನಿಕವಾಗಿ ಸಾಗುತ್ತಿಲ್ಲ.

ಮಾನಸಿಕ ಬೆಳವಣಿಗೆ, ಸುಸಂಗತ ಚಿಂತನೆ ಮತ್ತು ಅಭಿವ್ಯಕ್ತಿ ಸಾಮರ್ಥ್ಯಗಳ ವಿಕಾಸದ ತಳಹದಿಯೇ ಮಾತೃಭಾಷಾ ಬೋಧನೆಯಲ್ಲಿ ಅಡಕವಾಗಿದೆ. ಕನ್ನಡಿಗರಲ್ಲಿ ಸ್ವತಂತ್ರ ವ್ಯಕ್ತಿತ್ವ ಮತ್ತು ಕನ್ನಡ ಸಾಹಿತ್ಯಾಭಿರುಚಿ ಬೆಳೆಯಬೇಕಾದರೆ ಶಾಲಾ ಹಂತಗಳಲ್ಲಿ ಕನ್ನಡ ಭಾಷಾ ಬೋಧನೆಯ ಆಳ, ಅಗಲಗಳು ವಿಸ್ತಾರಗೊಳ್ಳಬೇಕು. ಸಮಗ್ರ ಕರ್ನಾಟಕದ ಚಿಂತನ ಕ್ರಮದ ಬೀಜ ಕನ್ನಡ ಭಾಷಾ ಬೋಧನ ಕ್ರಮದಲ್ಲಿ ಸುಪ್ತವಾಗಿ ಅಂತರ್ಗತವಾಗಿದೆ. ಕಾರಣ ಕನ್ನಡ ಭಾಷಾ ಬೋಧನ, ಅಧ್ಯಯನ, ಸಂಶೋಧನ ಮತ್ತು ತರಬೇತಿ ಸಂಸ್ಥೆಯೊಂದನ್ನು ಶೀಘ್ರವೇ ಸ್ಥಾಪಿಸುವ ಅವಶ್ಯಕತೆಯಿದೆ. ಕೇಂದ್ರ ಸರಕಾರದ ಭಾಷಾ ನೀತಿ ಕೂಡ ಇಂತಹ ಪ್ರಾದೇಶಿಕ ಭಾಷಾ ಅಭಿವೃದ್ಧಿಯ ಕಾರ್ಯಕ್ರಮಗಳನ್ನು ಪುರಸ್ಕರಿಸುತ್ತದೆ. ಕರ್ನಾಟಕ ಸರಕಾರ ಈ ದಿಸೆಯಲ್ಲಿ ಕೂಡಲೆ ಕಾರ್ಯ ಪ್ರವೃತ್ತವಾಗಬೇಕು. ಧಾರವಾಡದಲ್ಲಿರುವ ಸರಕಾರಿ ಶಿಕ್ಷಕರ ಕೇಂದ್ರ ಕಾರಣಾಂತರಗಳಿಂದ ಕಳೆದ ಎರಡು–ಮೂರು ವರ್ಷಗಳಿಂದ ಸ್ಥಗಿತಗೊಂಡಿದ್ದು, ಈ ಸಂಸ್ಥೆಯನ್ನೇ ಕನ್ನಡ ಭಾಷಾ ಬೋಧನ, ಅಧ್ಯಯನ, ಸಂಶೋಧನ ಮತ್ತು ತರಬೇತಿ ಸಂಸ್ಥೆಯನ್ನಾಗಿ ಮಾರ್ಪಡಿಸುವುದರಿಂದ ಸರಕಾರಕ್ಕೆ ಹೆಚ್ಚಿನ ವೆಚ್ಚವಿಲ್ಲದೆ ಒಂದು ಹೊಸ ಮಹತ್ವದ ಸಂಸ್ಥೆಯೊಂದನ್ನು ಹುಟ್ಟು ಹಾಕಿದಂತಾಗುತ್ತದೆ.

ಈ ವರ್ಷದ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಕನ್ನಡ ಮಾಧ್ಯಮದ ವಿದ್ಯಾರ್ಥಿಗಳಿಗೆ ಪ್ರತ್ಯೇಕವಾಗಿ ಶ್ರೇಯಾಂಕ ನೀಡುವ ಪರಿಪಾಠ ಪ್ರಾರಂಭಿಸಿರುವುದರಿಂದ ಕನ್ನಡ ಶಾಲೆಗಳಿಗೆ ವಿಶೇಷ ಪ್ರೋತ್ಸಾಹ ನೀಡಿದಂತಾಗಿದೆಯಲ್ಲದೆ ಕನ್ನಡ ಮಾಧ್ಯಮದಲ್ಲಿ ಕಲಿಯುವ ನಗರ ಹಾಗೂ ಗ್ರಾಮೀಣ ವಿದ್ಯಾರ್ಥಿಗಳ ಆತ್ಮವಿಶ್ವಾಸವನ್ನು ಹೆಚ್ಚಿಸಿದಂತಾಗಿದೆ. ಇದು ನಿಜಕ್ಕೂ ಸ್ತುತ್ಯ ಉಪಕ್ರಮ.

ಕರ್ನಾಟಕದಲ್ಲಿ ಭಾಷಾ ನೀತಿಯನ್ನು ಕುರಿತು ಯಾವುದೇ ನಿರ್ಣಯ ತೆಗೆದುಕೊಳ್ಳುವ ಮೊದಲು ನಮ್ಮ ಮಂತ್ರಿ ಮಹೋದಯರು ತಜ್ಞರೊಂದಿಗೆ ಸಮಾಲೋಚಿಸುವುದು ಅತ್ಯಂತ ಅಗತ್ಯವಾದದ್ದು. ತಮಿಳು ಮಾಧ್ಯಮದಲ್ಲಿ ಟಿ.ಸಿ.ಎಚ್. ತರಗತಿಗಳನ್ನು ಆರಂಭಿಸುವುದಾಗಿ ಈಚೆಗೆ ನಮ್ಮ ಮುಖ್ಯ ಮಂತ್ರಿಗಳು ತಮಿಳು ನಾಡಿನ ಮುಖ್ಯ ಮಂತ್ರಿಗಳಿಗೆ ಆಶ್ವಾಸನೆ ಕೊಟ್ಟಿದ್ದಾರೆ. ಹಿಂದಿ ಮಾಧ್ಯಮದ ವೈದ್ಯಕೀಯ ಕಾಲೇಜನ್ನು ಕರ್ನಾಟಕದಲ್ಲಿ ಸ್ಥಾಪಿಸಲಾಗುತ್ತದೆಂದು ಹಿಂದೀ ಸಂಸ್ಥೆಯೊಂದು

ಹೇಳಿದೆ. ಹಿಂದಿ ಮಾತನಾಡುವ ಪ್ರದೇಶದಲ್ಲಿ ಇಂಥ ಒಂದಲ್ಲ ಹತ್ತು ಕಾಲೇಜುಗಳನ್ನು ಸ್ಥಾಪಿಸಿಕೊಳ್ಳಲಿ. ಆದರೆ ಕರ್ನಾಟಕದಲ್ಲಿ ಅದರ ಅಗತ್ಯವೇನಿದೆ ? ಗೋಕಾಕ ಚಳುವಳಿಯ ಮುಖ್ಯ ಆಶಯವನ್ನು ಕನ್ನಡಿಗರು ಎಂದಿಗೂ ಮರೆಯಕೂಡದು.

ಮಾಸ್ತಿಯವರು ಪರಿಷತ್ತಿನ ಉಪಾಧ್ಯಕ್ಷರಾಗಿದ್ದಾಗ ಕನ್ನಡದ ಕೆಲಸವನ್ನು ಕುರಿತು ಮಾತನಾಡುತ್ತ ಒಮ್ಮೆ ಹೀಗೆ ಅಂದಿದ್ದರಂತೆ : 'ನನಗೆ ಒಂದು ನೂರು ಜನ ಒಳ್ಳೇ ಕಾರ್ಯಕರ್ತರನ್ನು ಕೊಡಿ. ಕನ್ನಡದಲ್ಲಿ ಒಂದು ಕ್ರಾಂತಿಯನ್ನೇ ಮಾಡಿ ತೋರಿಸುತ್ತೇನೆ'. ಕನ್ನಡದ ಬಗ್ಗೆ ನಿಜವಾದ ಕಳಕಳಿಯುಳ್ಳ ಅಂಥ ಕಾರ್ಯಕರ್ತರ ಒಂದು ಪಡೆಯನ್ನೇ ನಿರ್ಮಿಸಿಕೊಂಡು ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡಪರ ಸಂಘ ಸಂಸ್ಥೆಗಳು ಒಟ್ಟಾಗಿ ಕಾರ್ಯೋನ್ಮುಖವಾಗುವ ಅಗತ್ಯ ಎಂದಿಗಿಂತಲೂ ಇಂದು ಹೆಚ್ಚಾಗಿದೆ.

೭

ಭಾರತ ಇಂದು ಮಹತ್ತರವಾದ ಸೈದ್ಧಾಂತಿಕ, ಸಾಂಸ್ಕೃತಿಕ, ರಾಜಕೀಯ ಹಾಗೂ ಆರ್ಥಿಕ ಗೊಂದಲಗಳಿಂದ ತತ್ತರಿಸಿದೆ.

ಬ್ರಿಟಿಶ್ ವಸಾಹತು ಶಾಹಿಯಿಂದ ಬಿಡುಗಡೆ ಪಡೆದ ಮೇಲೆ ಪ್ರತಿಯೊಬ್ಬ ಬಡ ಭಾರತೀಯನ ಕಣ್ಣೀರನ್ನು ತೊಡೆದು ಹಾಕುವ ಧ್ಯೇಯ ಸಾಧನೆಯ ಆಶೆಗಳಿದ್ದರೂ ಆರ್ಥಿಕ ನಿರ್ವಹಣೆ ಮಾತ್ರ ತೀವ್ರ ಅಸಮತೆಗೆ ಒಳಗಾಗಿರುವುದನ್ನು ನಾವು ಕಾಣುತ್ತಿದ್ದೇವೆ. ಹಳೆಯ ಮಹಾರಾಜರು ಹೋದರು; ಹಾಗೆಯೇ ಬಹಳ ಮಟ್ಟಿಗೆ ದುರುಳ ಜಮೀನುದಾರರು ಕೂಡ. ಆದರೆ ಸಮಾಜವಾದ, ಗರೀಬಿ ಹಟಾವೋ ಮೊದಲಾದ ಘೋಷಣೆಗಳ ನಡುವೆಯೂ ಆರ್ಥಿಕ ಶಕ್ತಿಯನ್ನು ತಮ್ಮ ಮುಷ್ಟಿಯಲ್ಲಿಟ್ಟುಕೊಂಡ ದೊಡ್ಡ ದೊಡ್ಡ ಉದ್ಯಮಿಗಳ ಗುಂಪುಗಳು ಅವರ ಜಾಗದಲ್ಲಿ ತಲೆ ಎತ್ತುತ್ತಿವೆ. ೧೯೮೪–೮೫ರಲ್ಲಿ ಭಾರತದಲ್ಲಿ ಅಗ್ರಸ್ಥಾನದಲ್ಲಿದ್ದ ನೂರು ಕಂಪನಿಗಳು ೬೬,೦೦೦ ಕೋಟಿಗಿಂತಲೂ ಹೆಚ್ಚಿನ ಆಸ್ತಿಯಯನ್ನು ಹೊಂದಿದ್ದುವಲ್ಲದೆ ಅವುಗಳ ಲಾಭದ ಮೊತ್ತವೇ ೧೦,೬೪೦ ಕೋಟಿ ರೂ. ಗಳಷ್ಟಾಗಿದ್ದಿತು. ನಮ್ಮ ದೇಶದ ಎಷ್ಟೋ ಜನಕ್ಕೆ ಈ ಕೋಟಿಗಟ್ಟಲೆ ಹಣದ ಅಂಕಿಗಳಲ್ಲಿಯ ಸೊನ್ನೆಗಳನ್ನು ಸರಿಯಾಗಿ ಎಣಿಸಲಿಕ್ಕೂ ಬರಲಾರದೇನೊ. ನಗರದ ಹಾಗೂ ಗ್ರಾಮೀಣ ಪ್ರದೇಶದ ಮಧ್ಯಮ ವರ್ಗದ ಕೆಲವು ಗುಂಪಿನ ಜನಕ್ಕೆ ಈ ಸಂಪತ್ತಿನ ಸ್ವಲ್ಪ ಭಾಗ ದೊರಕಿರಬಹುದಾದರೂ ಅಲ್ಲಿಯೇ ವಾಸಿಸುತ್ತಿರುವ ಬಹು ಸಂಖ್ಯಾತ ಜನರ ಜೀವನ ನಿರುದ್ಯೋಗ ಹಾಗೂ ರೋಗರುಜಿನಗಳಿಗೆ ಈಡಾಗಿ ದಿನ ದಿನಕ್ಕೂ ಕುಸಿದು ಹೋಗುತ್ತಿದೆ.

ರಾಜಕೀಯವಾಗಿ ನೋಡಿದಾಗಲೂ ಜನತೆ ತಮ್ಮಷ್ಟಕ್ಕೆ ಅತ್ಯಂತ ಶಕ್ತಿ ಹೀನರಾಗಿ ಹೋಗಿದ್ದಾರೆ. ಪ್ರಜಾಪ್ರಭುತ್ವವೆಂದರೆ ಜನಶಕ್ತಿ. ಆದರೆ ನಮ್ಮ ಪ್ರಜಾಸತ್ತೆ ಓಟು ನೀಡುವುದಕ್ಕೆ ಮಾತ್ರ ಸೀಮಿತವಾಗಿ ಹೆಚ್ಚಿನದೇನನ್ನೂ ಸಾಧಿಸಿಲ್ಲ. ಒಮ್ಮೆ ಆರಿಸಿ ಬಂದರೊ, ನಮ್ಮ ಪ್ರತಿನಿಧಿ ಮಹಾಶಯರು ಆಮೇಲೆ ಜನರಿಗೆ ಮುಖ ಕೂಡ ತೋರಿಸದೆ ಹೋಗುತ್ತಾರೆ. ಚುನಾವಣೆಯ ಕಾಲಕ್ಕೆ ಕೊಟ್ಟ ಆಶ್ವಾಸನೆಗಳನ್ನು

ಈಡೇರಿಸುವ ಮಾತಂತೂ ದೂರವೇ ಉಳಿಯಿತು. ಇಂಥ ಪ್ರತಿನಿಧಿಗಳ ಮೇಲೆ ನಾಗರಿಕರ ನಿಯಂತ್ರಣವೇನಾದರೂ ಇದೆಯೇ ಎಂದರೆ ಅದೂ ಇಲ್ಲ. ಅಧಿಕಾರವೆಲ್ಲ ರಾಜಕೀಯ ಪಕ್ಷಗಳಲ್ಲಿ, ಮಂತ್ರಿ ಮಂಡಲದಲ್ಲಿ, ಅಧಿಕಾರ ವರ್ಗಗಳಲ್ಲಿ ಕೇಂದ್ರೀಕೃತವಾಗಿ ಬಿಟ್ಟಿದೆ. ಎಷ್ಟೇ ಪ್ರಾಮಾಣಿಕವಾಗಿ ಜೀವನ ಸಾಗಿಸಬೇಕೆಂದು ನಾಗರಿಕ ಪ್ರಯತ್ನ ಪಡುತ್ತಾನಾದರೂ ಅವನು ಇವರನ್ನು ಸಂತೋಷಪಡಿಸಬೇಕು, ಇವರಿಗೆ ಲಂಚ ನೀಡಬೇಕು, ಇಲ್ಲವೆ ಯಾವಾಗಲೂ ಅವರ ಅಂಜಿಕೆಯಲ್ಲಿಯೇ ಇರಬೇಕು.

ರಾಜಕಾರಣದ ಅಪರಾಧೀಕರಣ (Criminalisation) ತನ್ನ ತುತ್ತ ತುದಿಯನ್ನು ತಲುಪಿದೆ. ಪಾತಕೀಕರಣ ಕೆಲವು ಪ್ರಸಿದ್ಧ ಅಪರಾಧಸ್ಥರು ಅಥವಾ ಸಮಾಜ ಕಂಟಕರೊಂದಿಗೆ ಸಂಬಂಧವಿಟ್ಟುಕೊಂಡ, ಆಡಳಿತವರ್ಗದ ಜನಕ್ಕೆ ಸಂಬಂಧಿಸಿದ್ದಷ್ಟೆ ಆಗಿರದೆ ಅಧಿಕಾರಕ್ಕೆ ಬರಲು ಇಲ್ಲವೆ ಅಧಿಕಾರ ಉಳಿಸಿಕೊಳ್ಳಲು ಯಾವುದೇ ಬಗೆಯ ಪಾತಕೀ ಸಾಧನವನ್ನು ಉಪಯೋಗಿಸಲು ತಯಾರಾಗಿರುವ ಮುಖ್ಯ ರಾಜಕೀಯ ಪಕ್ಷಗಳಿಗೂ ಸಂಬಂಧಿಸಿದೆ.

ಧರ್ಮ, ಜಾತಿ, ನದೀನೀರು, ಗಡಿವಿವಾದ ಇತ್ಯಾದಿಗಳ ನೆಪದಲ್ಲಿ ಕಳೆದ ಐದಾರು ವರ್ಷಗಳಲ್ಲಿ ಭಾರತದ ಎಲ್ಲ ಕಡೆಗಳಲ್ಲಿಯೂ ಮುಗ್ಧ ನಾಗರಿಕರ ಮೇಲೆ ನಡೆದ ಭಯಾನಕ ಹಿಂಸೆ ಮೊದಲಾದವು, ಅಧಿಕಾರಕ್ಕೆ ಹಪಾಹಪಿಸುತ್ತಿರುವ ಪಕ್ಷಗಳಿಂದಲೇ ನಡೆದಿರುವುದು ಸತ್ಯಕ್ಕೆ ದೂರವಾದ ಮಾತೇನೂ ಅಲ್ಲ. ಇಂಥ ಕ್ರೌರ್ಯ ಹಾಗೂ ಅನಿಶ್ಚಿತತೆಯ ಎದುರು ನಾಗರಿಕರು ತೀರ ನಿರ್ವೀರ್ಯರಾಗಿ ಹೋಗಿದ್ದಾರೆ.

ದೇಶದ ಅನೇಕ ಭಾಗಗಳಲ್ಲಿ ಜನತೆ ತಮ್ಮ ದೈನ್ಯಾವಸ್ಥೆಯ ಬಗ್ಗೆ ಅತೃಪ್ತರಾಗಿದ್ದಾರೆ. ದಿಲ್ಲಿಯ ನಿಯಂತ್ರಣವಿರದಿದ್ದರೆ ಅವರು ಬಹುಶಃ ಇದಕ್ಕೂ ಉತ್ತಮ ಸ್ಥಿತಿ ಪಡೆಯಬಹುದೆಂಬ ಸಲಹೆಗಳೂ ಈಚೆಗೆ ಕೇಳಿ ಬರುತ್ತಿವೆ. ಭಾರತದ ಒಕ್ಕೂಟದ ಬಗ್ಗೆ ಪುನರಾಲೋಚನೆ ಮಾಡಬೇಕು ಎಂಬ ಅಭಿಪ್ರಾಯಗಳನ್ನು ಉಗ್ರ ಹಿಂಸಾಚಾರದಿಂದ ಹತ್ತಿಕ್ಕಲಾಗುತ್ತಿದೆ. ಈ ಪ್ರದೇಶಗಳ ಜನ, ಸರಕಾರದ ವ್ಯೂಹ ಹಾಗೂ ಉಗ್ರಗಾಮಿಗಳು, ಈ ಎರಡು ಕಡೆಗಳಿಂದ ದಾಳಿಗೆ ಒಳಗಾಗಿ ಸಂಪೂರ್ಣ ಹತಾಶರಾಗಿರುವುದು ಕಂಡು ಬರುತ್ತಿದೆ.

ವಿಚಾರವಂತನಾದ ಭಾರತೀಯ ಪ್ರಜೆ ಇಂದು ತೀವ್ರವಾಗಿ ಎದುರಿಸುತ್ತಿರುವ ಪ್ರಶ್ನೆ : 'ಭಾರತ ಎತ್ತ ಸಾಗಿದೆ ?' ಈ ಪ್ರಶ್ನೆಯನ್ನು ೧೯ನೆಯ ಶತಮಾನದ ಮಧ್ಯ ಕಾಲದಿಂದಲೇ ಮತ್ತೆ ಮತ್ತೆ ಕೇಳುತ್ತ ಬರಲಾಗಿದೆ. ಭಾರತದ ತಳಹದಿಯನ್ನೇ ಅಲುಗಾಡಿಸಿದ ವಸಾಹತುಶಾಹಿಯ ಆಘಾತದೊಡನೆ ಭಾರತೀಯ ಮನಸ್ಸು ನಿತ್ಯವೂ ಹೋರಾಡಬೇಕಾಯಿತು. ರಾಷ್ಟ್ರೀಯ ಆಂದೋಲನಕ್ಕೆ ರಾಜಕೀಯ ದೃಷ್ಟಿಯೊಂದೇ ಅಲ್ಲದೆ ಭಾರತೀಯ ವ್ಯಕ್ತಿತ್ವದ ಗಾಢ ಶೋಧದ ಬೌದ್ಧಿಕ ಮುಖವೂ ಇದ್ದಿತು. ರಾಷ್ಟ್ರ ಕಟ್ಟುವ ಕಾರ್ಯಕ್ಕೆ ನಾವು ಅಣಿಯಾಗಿದ್ದರೆ ಅಥವಾ ಅದಕ್ಕಾಗಿ ಹೋರಾಡುತ್ತಿದ್ದರೆ, ಭಾರತದ ಎಲ್ಲ ವಿಶೇಷ ಗುಣಧರ್ಮಗಳನ್ನೂ ವೈಶಿಷ್ಟ್ಯಗಳನ್ನೂ ಒಳಗೊಂಡ ಸ್ಪಷ್ಟ ನೋಟ ನಮಗೆ ಅತ್ಯವಶ್ಯ. ರಾಷ್ಟ್ರದ ನವೀಕರಣಕ್ಕೆ ಬೇಕಾಗುವ ದೃಷ್ಟಿಯನ್ನು

ನಿಚ್ಚಳಗೊಳಿಸುವಾಗ ಅದರ ಸಂಪ್ರದಾಯದಲ್ಲಿರುವ ಕಾಲ ವಿರೋಧಿ ಅಥವಾ ದುಷ್ಕೃತ್ಯಕಾರಿ ಅಂಶಗಳನ್ನು ವಿಸರ್ಜಿಸಬೇಕಾಗುತ್ತದೆ. ಹಾಗೆಯೇ ಪ್ರಜಾಪ್ರಭುತ್ವಕ್ಕೆ ಸಲ್ಲುವ ದಯಾಪರ ಮೌಲ್ಯ ಪದ್ಧತಿಗಳನ್ನು (Value System), ನ್ಯಾಯಬದ್ಧವಾದ ಹಾಗೂ ಆರೋಗ್ಯಕರ ಅಂಶಗಳನ್ನು ಉಳಿಸಿಕೊಳ್ಳಬೇಕಾಗುತ್ತದೆ. ಅದೇ ಕಾಲಕ್ಕೆ, ವಿದೇಶೀ ಮೂಲದ ವಿಚಾರಗಳು, ತೀರ ಆಧುನಿಕವಾಗಿದ್ದು ಅಪೇಕ್ಷಣೀಯವೆನಿಸಿದರೆ ಅವುಗಳನ್ನು ಭಾರತೀಯ ಮನೋಭಾವದೊಂದಿಗೆ ಸಂಯೋಜಿಸಿಕೊಳ್ಳಲು ನಾವು ಕಲಿಯಬೇಕು. ಆದರೆ ತಿರುಳು ಮುಖ್ಯ; ಕೇವಲ ಹೊಸತನಕ್ಕಾಗಿ ಅವುಗಳನ್ನು ಕಿತ್ತು ತಂದು ಇಲ್ಲಿ ಊರಬೇಕಾಗಿಲ್ಲ. ಯಾವುದು ಭಾರತ ? ಯಾವುದು ಭಾರತೀಯ ? ಭಾರತೀಯತೆ ಎಂದರೆ ಏನು ? ಇವು ಅಪ್ರಯೋಜಕವಾದ ಬೌದ್ಧಿಕ ಪ್ರಶ್ನೆಗಳಲ್ಲ; ಇವೆಲ್ಲ ರಾಷ್ಟ್ರದ ವರ್ಧಿಷ್ಣು ವಿದ್ಯಾವಂತ ವರ್ಗ ಮನಸ್ಸುಗೊಟ್ಟು ವಿವೇಚಿಸಬೇಕಾದ ಸಂಗತಿಗಳು.

ರಾಜಾ ರಾಮಮೋಹನ್‌ರಾಯ್, ವಿವೇಕಾನಂದ, ಅರವಿಂದ ಘೋಷ್, ಟಾಗೋರ, ಮಹಾತ್ಮಾ ಗಾಂಧಿ, ನೆಹರು, ಜಯಪ್ರಕಾಶ ನಾರಾಯಣ, ರಾಮ ಮನೋಹರ ಲೋಹಿಯಾ, ಅಂಬೇಡಕರ ಮುಂತಾಗಿ ಇನ್ನೂ ಅನೇಕರು ತಮ್ಮ ತಮ್ಮ ರೀತಿಯಲ್ಲಿ ಇದಕ್ಕೆ ಉತ್ತರ ನೀಡಲು ಪ್ರಯತ್ನಿಸಿದ್ದಾರೆ. ಸಮಾಜವಾದಿ ಹಾಗೂ ಸಮತಾವಾದಿ ಆಂದೋಲನಗಳ ವಿವಿಧ ಮುಖಂಡರು ಹಾಗೂ ಅವರಿಂದ ಸ್ಫೂರ್ತಿ ಪಡೆದ ಲೇಖಕರು ಕೂಡ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಈ ಶತಮಾನದ ಕನ್ನಡ ಸಾಹಿತ್ಯವೂ ಕೂಡ ನಮ್ಮ ಸೃಜನಶೀಲ ಸಾಹಿತಿಗಳ ಮನಸ್ಸಿನಲ್ಲಿ ಪ್ರತಿಬಿಂಬಿಸಿದಂತೆ ಭಾರತೀಯ ಸತ್ಯವನ್ನು ಅಭಿವ್ಯಕ್ತಿಸಿದೆ. ಭಾರತ ಶೋಧದ ಈ ಸಮಸ್ಯೆಯನ್ನು ಬಿ. ಎಂ. ಶ್ರೀ. ಕಾಲದಿಂದ ಇಂದಿನ ತನಕ ನಾವು ನಮ್ಮದೇ ಆದ ರೀತಿಯಲ್ಲಿ ಬಿಡಿಸಲು ಪ್ರಯತ್ನಿಸಿಲ್ಲವೆ ? ವಿದೇಶಿ ಮೂಲದ ಹಾಗೂ ಭಾರತದ ಒಳಗಿನ ವಿವಿಧ ಪ್ರಭಾವಗಳಿಗೆ ನಾವು ಈಡಾಗಿದ್ದು ಪ್ರತಿಯೊಬ್ಬ ಲೇಖಕನೂ ಅವುಗಳನ್ನು ಅಂತಸ್ಥಗೊಳಿಸಲು ಹೆಣಗಾಡಿದ್ದುಂಟು. ಇಡೀ ಚಳವಳಿ ಅವುಗಳನ್ನು ನೈಜಗೊಳಿಸಲು ಹೋರಾಡಿದೆ. ಆಧುನಿಕ ಕನ್ನಡ ಸಾಹಿತ್ಯದ ಎಲ್ಲ ಘಟ್ಟಗಳ ಹಾಗೂ ಒಲವುಗಳ ಅತ್ಯುತ್ತಮ ರಚನೆಗಳು ಈ ಹೋರಾಟದ ಫಲಗಳೇ ಆಗಿವೆ. ಇದು ಒಂದು ರೀತಿಯಲ್ಲಿ ಭಾರತ ಶೋಧನೆಯ ಮೂಲಕ ನಮ್ಮನ್ನು ನಾವೇ ಕಂಡುಕೊಳ್ಳುವುದಾಗಿದೆ.

ಇದು ಇಂದಿಗೂ ಮುಂದುವರಿಯುತ್ತಿರುವ ಪ್ರಕ್ರಿಯೆಯಾಗಿದ್ದರೆ ಅದನ್ನು ಮತ್ತೆ ಎತ್ತಿ ಆಡುವ ಅವಶ್ಯಕತೆ ಇರುತ್ತಿರಲಿಲ್ಲ. ಸ್ವತಂತ್ರ ಭಾರತದಲ್ಲಿಯ ಜನತೆಯ ಈಡೇರದ ಆಶೆಗಳು ಮತ್ತು ಅವನತಿ ಹೊಂದುತ್ತಿರುವ ರಾಜಕೀಯ, ಆರ್ಥಿಕ ಹಾಗೂ ಸಾಂಸ್ಕೃತಿಕ ಬಿಕ್ಕಟ್ಟು ಲೇಖಕರಾದ ನಮ್ಮಿಂದ ಒಂದು ನಿರ್ಣಾಯಕ ಪ್ರಯತ್ನವನ್ನು ಬಯಸುತ್ತಿದೆ. ಅದಾವುದೆಂದರೆ ಭಾರತದ ಹಾಗೂ ನಮ್ಮೆಲ್ಲರ ಪ್ರಜ್ಞಾಪೂರ್ವಕವಾದ ಆತ್ಮಶೋಧ. ರಾಜಕೀಯ ಕ್ರಿಯೆ ನಮ್ಮ ಸಮಾಜದಲ್ಲಿ

ಬದಲಾವಣೆಗಳನ್ನು ತರಬಹುದಾದರೆ ಸಾಹಿತ್ಯ ಮತ್ತು ಸಮಾಜದ ಕಾಳಜಿ ಅಂಥ ರಾಜಕೀಯ ಕ್ರಿಯೆಗೆ ಸ್ಫೂರ್ತಿಯನ್ನೊದಗಿಸಿ ಯೋಗ್ಯ ಮಾರ್ಗದರ್ಶನ ಮಾಡಬಲ್ಲದು. ಇಂಥ ರಾಜಕೀಯ ಕ್ರಿಯೆಯ ಅಗತ್ಯವನ್ನು ನಿರಾಕರಿಸದೆ ಲೇಖಕ ಬಂಧುಗಳಲ್ಲಿ ನಾನು ಅರಿಕೆ ಮಾಡಿಕೊಳ್ಳುವುದೇನೆಂದರೆ, ಭಾರತೀಯ ದೃಷ್ಟಿಯನ್ನು ಬೆಳೆಸುವಲ್ಲಿ ಲೇಖಕರಾದ ನಾವು ಗಂಭೀರವಾಗಿ ಪಾಲ್ಗೊಳ್ಳಬೇಕು. ರಾಜಕೀಯದಲ್ಲಿ ಕಾರ್ಯ ಪ್ರವೃತ್ತರಾದ ಲೇಖಕರು ನಮ್ಮಲ್ಲಿದ್ದರೆ ಅಂಥವರೂ ಈ ಆಂದೋಲನದಲ್ಲಿ ಭಾಗವಹಿಸಿ ಬದಲಾವಣೆಗಾಗಿ ಹೋರಾಡಲಿ. ಆದರೆ ಅಂಥ ಸಂದರ್ಭದಲ್ಲಿ ನಾವು ಪೂರ್ಣ ರಾಜಕೀಯ ಕಾರ್ಯಕರ್ತರಂತೆ ವರ್ತಿಸಬೇಕಾಗುತ್ತದೆ. ಭಾರತ ತನ್ನನ್ನು ತಾನು ಸ್ಪಷ್ಟಗೊಳಿಸಿಕೊಳ್ಳಬೇಕಾದ ಅವಶ್ಯಕತೆಯನ್ನು ಮೊದಲು ತಿಳಿದುಕೊಂಡು ಲೇಖಕರಾದ ನಾವು ನಮ್ಮ ಸೃಜನಾತ್ಮಕ ಬರವಣಿಗೆ ಹಾಗೂ ವಿಮರ್ಶೆಯ ಮೂಲಕ ಅದಕ್ಕೆ ದಾರಿ ಮಾಡಿಕೊಡೋಣ. ಸಂಧಿಕಾಲದಲ್ಲಿರುವ ರಾಷ್ಟ್ರದ ಕಾರ್ಯ ಸೂಚಿಯನ್ನು ಖಚಿತಗೊಳಿಸಲು ನಾವು ಸಲ್ಲಿಸುವ ಕಾಣಿಕೆಯೆಂದರೆ ಇದೇ.

ಇಂದು ಅಸಂಖ್ಯ ಪ್ರಮಾಣದ ಅಮಾನುಷ ತೆರೆಗಳೆದ್ದು ಜಗತ್ತನ್ನು ಹೊಯ್ದಾಡಿಸುತ್ತಿವೆ. ಇದರ ಪರಿಣಾಮ ಭಾರತದ ಮೇಲೂ ಆಗಿರುವುದನ್ನು ನಾವು ಕಾಣುತ್ತಿದ್ದೇವೆ. ಅವುಗಳಲ್ಲಿ ಅಪಾಯಕಾರಿಯಾದದ್ದೆಂದರೆ ಪ್ರತಿಬಂಧಕವಿಲ್ಲದ ವ್ಯಕ್ತಿವಾದ ಮತ್ತು ಬೇರುಗಳಚಿದ ವಿಶ್ವವಾದ. ಬೇರೆ ಬೇರೆ ರಾಷ್ಟ್ರಗಳಲ್ಲಿಯ ಜನತೆಯ ಸಂಸ್ಕೃತಿಯನ್ನು, ಮೌಲ್ಯ ಪದ್ಧತಿಗಳನ್ನು ಪ್ರಾಂತೀಯವೆಂದೂ, ಸಂಕುಚಿತ ಮನೋಭಾವವೆಂದೂ ಅಷ್ಟೇ ಅಲ್ಲ, ಪ್ರಗತಿ ವಿರೋಧಿ ಮತ್ತು ಮೂಲಭೂತ ವಾದಿಯೆಂದು ಹತ್ತಿಕ್ಕಿ ಬೇರುಗಳಿಲ್ಲದ ಸಂಸ್ಕೃತಿಯೊಂದನ್ನು ವಿಶ್ವವ್ಯಾಪಕತ್ವದ ಸೋಗಿನಲ್ಲಿ ಇದು ಮುಂಚಾಚುತ್ತಿದೆ. ಈ ಬಗೆಯ ವಿಶ್ವವಾದದ ಮತ್ತೊಂದು ಮುಖವೆಂದರೆ ಸ್ಥಳೀಯ ಸಂಸ್ಕೃತಿಗಳನ್ನು, ಮೌಲ್ಯ ಪದ್ಧತಿಗಳನ್ನು ವಸ್ತುಸಂಗ್ರಹಾಲಯಕ್ಕೆ ಸೇರಿಸಿ ಅವುಗಳನ್ನು ನೋಡಿ, ಅಚ್ಚರಿಗೊಂಡು ಮಾನವಶಾಸ್ತ್ರದ ದೃಷ್ಟಿಯಿಂದ ಅದರ ಅಭ್ಯಾಸಕ್ಕೆ ಅನುವು ಮಾಡಿಕೊಟ್ಟು ಅನುಗ್ರಹ ತೋರಿಸಿದಂತೆ ಮಾಡುವುದು. ಇದಕ್ಕೆ ಬಲಿ ಬೀಳುವ ಭಾರತೀಯನು ನಮ್ಮ ಜನರ ನಿಜವಾದ ಸಮಸ್ಯೆಗಳನ್ನರಿಯಲು ಪ್ರವರ್ತಿಸದೆ ಸಮಾಜೋ–ಆರ್ಥಿಕ ಮಾದರಿಗಳ ನಿರ್ಮಾಣದಲ್ಲಿ ತೊಡಗುತ್ತಾನೆ.

ವೆಸ್ಟ ಮಿನಿಸ್ಟರ ಮಾದರಿಯ ಮೇಲೆ ನಿಂತಿರುವ ನಮ್ಮ ಪಾರ್ಲಿಯಾಮೆಂಟರಿ ಪದ್ಧತಿ ಹಾಗೂ ಇಂದು ಅದು ಪಡೆದ ವಿಕೃತ ರೂಪ ಇಂಥ ಬೇರು ರಹಿತ ಅನುಕರಣೆಯ ಅಪಾಯಕಾರಿ ನಿದರ್ಶನವಾಗಿದೆ.

ಇದೇ ರೀತಿ ಎಲ್ಲ ರಾಷ್ಟ್ರಗಳ ಸಮಸ್ಯೆಗಳಿಗೆ ಸರ್ವ ರೋಗ ಪರಿಹಾರಕವೆಂಬಂತೆ ದಲ್ಲಾಳಿ ಹಿಡಿದ ಮುಕ್ತ ಮಾರುಕಟ್ಟೆಯ ಅರ್ಥ ವ್ಯವಸ್ಥೆ ಮತ್ತು ಉದಾರೀಕರಣದ ತತ್ವ ಸೂತ್ರಗಳು ಈ 'ವಿಶ್ವವಾದ' ದ ಮತ್ತೊಂದು ಉದಾಹರಣೆ.

'ಪ್ರತಿಯೊಬ್ಬ ವ್ಯಕ್ತಿ ತನ್ನ ರಕ್ಷಣೆಯನ್ನು ತಾನೇ ಮಾಡಿಕೊಳ್ಳಬೇಕು' 'ಯೋಗ್ಯತೆಯುಳ್ಳವನು ಬದುಕುತ್ತಾನೆ' ವ್ಯಕ್ತಿಯ ಆರೋಗ್ಯ, ಶಿಕ್ಷಣ, ಯೋಗ ಕ್ಷೇಮ,

ಪ್ರತಿಭಾ ವಿಕಾಸಕ್ಕೆ ಅವಕಾಶ ಇತ್ಯಾದಿ ಇತ್ಯಾದಿಗಳ ಬಗ್ಗೆ ಸಮಾಜದ ಕರ್ತವ್ಯವೇನೂ ಇಲ್ಲ–ಇವು ಉದಾರೀಕರಣದ ತತ್ವ ಸೂತ್ರಗಳು. ವ್ಯಕ್ತಿ ಸಮಾಜದಲ್ಲಿ ಹುಟ್ಟಿದವನು, ಅದರಿಂದ ರೂಪುಗೊಂಡವನು ಮತ್ತು ಸಾಮಾಜಿಕ ಉತ್ಪಾದನೆಯ ಪ್ರಕ್ರಿಯೆಯ ಮೂಲಕವೇ, ತನ್ನ ಜೀವನ ಮಾಡುವನೇ ಹೊರತು ಪ್ರತ್ಯೇಕವಾಗಿ ಅಲ್ಲ ಎಂಬೀ ಅಂಶಗಳನ್ನು ಗಮನಿಸದಿರುವ ಈ ತತ್ವ ಸಮಾಜ ವಿರೋಧಿಯಾದದ್ದು. ಸಮಾಜವು ಅವನ ಶಿಕ್ಷಣ, ತರಬೇತಿ, ಪಾಲನೆ ಪೋಷಣೆಯ ಜವಾಬುದಾರಿಯನ್ನು ವಹಿಸಿಕೊಳ್ಳುವುದರಿಂದಲೇ ಅವನು ಸಮಾಜದ ಸೊತ್ತಾಗಬಲ್ಲನು. ಈ ಮಾನವ ಶಿಶು ಕಾರ್ಯ ರೂಪಕ್ಕೆ ಬರುವ ತನ್ನ ಸಾಮರ್ಥ್ಯವನ್ನು ನಿಜವಾಗಿ ಸಾಧಿಸುವಂತೆ ಮಾಡಲು ಸಮಾಜ ತನ್ನ ಈ ಅವಶ್ಯ ಕರ್ತವ್ಯಗಳನ್ನು ನಿರಾಕರಿಸಿದರೆ ಮತ್ತು ಉಳಿದವರೊಡನೆ ಸ್ಪರ್ಧೆಯಲ್ಲಿ ಅವನು ಬದುಕುಳಿಯಲು ಅಸಮರ್ಥನೆಂದು ನಿರ್ಧರಿಸಿದರೆ ಅದು ಜಂಗ್ಲೀ ಕಾಯದೆ (Jungle Law) ಗಿಂತ ಹೀನವಾದದ್ದು. ಯಾಕೆಂದರೆ ಪ್ರಾಣಿಗಳೂ ಸಹ ಎಷ್ಟೋ ಮಟ್ಟಿಗೆ ತಮ್ಮ ಮರಿಗಳಿಗೆ ಪಾಲನೆ ಪೋಷಣೆಯೊದಗಿಸಿ ತರಬೇತಿ ನೀಡುತ್ತವೆ. ಈಗ ನಡೆದಿರುವುದರ ಮೇಲಿಂದ ಅದರ ನಿಜವಾದ ಅರ್ಥ ಇಷ್ಟೆ. ಈಗಾಗಲೇ ಯಾರು ವಿಶೇಷ ಸವಲತ್ತು ಹೊಂದಿದ್ದಾರೊ ಅಥವಾ ವಿಶೇಷಾಧಿಕಾರ ಪಡೆದಿದ್ದಾರೊ ಅವರು ಆ ಸುಖ ಭೋಗದಲ್ಲಿ ಮುಂದುವರಿಯುವುದು, ಅದನ್ನೆಲ್ಲ ಕಳೆದುಕೊಂಡ ಉಳಿದ ನತದೃಷ್ಟ ಜನ ಆಳುವ ವರ್ಗದ ಗುಲಾಮರಾಗಿ ಬಾಳುವುದು.

ನಮ್ಮ ಸಂಸ್ಕೃತಿ ಇದನ್ನು ಒಪ್ಪುವುದಿಲ್ಲ. ಭಾರತೀಯ ಸಮಾಜ ಕುಟುಂಬ, ಬಣ, ಗ್ರಾಮ, ಜಾತಿ, ಜನಾಂಗತ್ವದಂಥ ಸಾಮಾಜಿಕ ಸಂಸ್ಥೆಗಳಿಂದ ತುಂಬಿಕೊಂಡಿದ್ದು, ಸಮುದಾಯ ವ್ಯಕ್ತಿಗೆ ಸಲ್ಲಿಸಬೇಕಾದ ಕೆಲವು ಕರ್ತವ್ಯಗಳನ್ನು ಅದು ಹೊಂದಿದೆ. ಉದಾಹರಣೆಗೆ ತನ್ನ ಸದಸ್ಯರ ಯೋಗ ಕ್ಷೇಮವನ್ನು ನೋಡಿಕೊಳ್ಳುವುದು ಅವರು ಪ್ರತಿಯಾಗಿ ತಮ್ಮ ವ್ಯಕ್ತಿತ್ವದ ಕೆಲವು ಅಂಶಗಳನ್ನು ಬಿಟ್ಟು ಕೊಡಲು ಬದ್ಧರಾಗಿರುವುದು, ಸಾಮುದಾಯಿಕ ಶಿಸ್ತು ಮತ್ತು ಕೆಲಸ ಕಾರ್ಯಗಳಿಗೆ ಒಳಗಾಗಿರುವುದು ಇತ್ಯಾದಿ. ಸಮಾಜವನ್ನು ಛಿದ್ರೀಕರಿಸುವ ಅನಿರ್ಬಂಧಿತವಾದ ವ್ಯಕ್ತಿ ಸ್ವಾತಂತ್ರ್ಯ ಹಾಗೂ ಜಂಗ್ಲೀ ಕಾಯದೆ ಭಾರತೀಯ ಸಂಸ್ಕೃತಿಗೆ ಪರಕೀಯವಾದದ್ದು. ಭಾರತೀಯ ಮೌಲ್ಯ ಪದ್ಧತಿಗಳ ತಿಳುವಳಿಕೆಯ ನೆಲೆಗಟ್ಟಿನಲ್ಲಿ ನಮ್ಮ ಸಮಾಜೋ–ಆರ್ಥಿಕ ವ್ಯವಸ್ಥೆ ಇರಬೇಕೆಂಬುದರ ಅರ್ಥ ಇದೇ ಆಗಿದೆ.

ಮನುಷ್ಯ ಸಂಬಂಧಗಳ ಸ್ವರೂಪ, ವ್ಯಕ್ತಿ ಮತ್ತು ಸಮುದಾಯಗಳ ನಡುವಿನ ದ್ವಂದ್ವಾತ್ಮಕ ಸಂಬಂಧ ಇವುಗಳ ಪರಿಶೋಧ ಕನ್ನಡ ಸಾಹಿತ್ಯದ ಅತ್ಯುತ್ತಮ ಕೃತಿಗಳಲ್ಲಿ ನಡೆದಿದೆ. ಈಗ ನಾವು ಮಾಡಬೇಕಾದುದೆಂದರೆ ಇಂಥ ಕೃತಿಗಳಿಂದ ಭಾರತೀಯತೆಯ ಸಾರವನ್ನು ಎತ್ತಿ ತೋರಿಸುವುದು, ಸಾಹಿತ್ಯಿಕ ವಾಸ್ತವತೆಯ ಉತ್ಕೃಷ್ಟ ಕೃತಿಗಳನ್ನು ಪ್ರಕಟಿಸುವುದು ಮತ್ತು ಸ್ವಲ್ಪ ಮಟ್ಟಿಗೆ ಸಿದ್ಧಾಂತಿಗಳಾಗುವುದು.

ವ್ಯಕ್ತಿಗತ ಆಸಕ್ತಿಗಳನ್ನು ಸಾಮುದಾಯಿಕ ಆಸಕ್ತಿಗಳೊಂದಿಗೆ ಹಾಗೂ ಒಟ್ಟಾಗಿ ಸಮಾಜದ ಆಸಕ್ತಿಗಳೊಂದಿಗೆ ಸಮರಸಗೊಳಿಸದ ಸಾಮಾಜಿಕ ಸಂರಚನೆ, ಸುಸಂಗತವಾದ ಬೆಳವಣಿಗೆಯನ್ನು ಸಾಧಿಸಲಾರದು. ಕೇವಲ ವ್ಯಕ್ತಿಗತ ಆಸಕ್ತಿಗಳಿಗೆ ಪ್ರಥಮ ಪ್ರಾಶಸ್ತ್ಯವೀಯುವುದಾಗಲಿ ಅಥವಾ ಸಾಮುದಾಯಿಕ ಆಸಕ್ತಿಗಳೇ ಮುಖ್ಯ ಎಂದು ಸಾಧಿಸುವ ಸಾಮಾಜಿಕ ಸ್ವರೂಪ ಅಪೇಕ್ಷಣೀಯವಾದದ್ದಲ್ಲ. ಕಾಲ ಗತಿಸಿದಂತೆ ಎರಡೂ ದಬ್ಬಾಳಿಕೆಯ ಸಮಾಜಗಳೇ ಆಗಿ ಪರಿಣಮಿಸುತ್ತವೆ. ಪಶ್ಚಿಮದ ಬಂಡವಾಳಶಾಹಿ ಸಮಾಜಗಳು ಹಾಗೂ ಕುಸಿದು ಬಿದ್ದ ಸೋವಿಯತ್ ಶೈಲಿಯ ಸಮತಾವಾದ ಇದನ್ನೇ ಸಿದ್ಧ ಮಾಡಿದೆ. ಸಾಮಾಜಿಕ ಕರ್ತವ್ಯಗಳನ್ನಿಟ್ಟುಕೊಂಡು ವ್ಯಕ್ತಿಸ್ವಾತಂತ್ರ್ಯವನ್ನು ಮಿತಿಗೊಳಿಸಿದ ಭಾರತೀಯ ದೃಷ್ಟಿ ಮಾತ್ರ ನಾವು ಶೋಧಿಸುತ್ತಿರುವ ಸಾಮರಸ್ಯವನ್ನು ಒದಗಿಸಬಲ್ಲ ಸಾಮರ್ಥ್ಯವನ್ನು ಪಡೆದಿದೆ.

ನಮ್ಮ ರಾಜ್ಯ ನೀತಿಯನ್ನು ರೂಪಿಸಿದ ಹಲವು ಪ್ರಭೃತಿಗಳು ನಮ್ಮ ರಾಜಕೀಯ ಮತ್ತು ಆರ್ಥಿಕ ಪದ್ಧತಿಯಲ್ಲಿ ಬ್ರಿಟಿಶ್, ಸೋವಿಯತ್, ಚೈನೀಸ್ ಮತ್ತು ಅಮೇರಿಕನ್ ಮಾದರಿಗಳ ಪರವಾಗಿ ವಾದಿಸಿದ್ದರಿಂದ ನಾವು ಸಾಕಷ್ಟು ಪಾಡು ಪಡಬೇಕಾಯಿತು. ಈ ಮಾದರಿಗಳು ಭಾರತೀಯ ಸಮಸ್ಯೆಗಳನ್ನು ಬಗೆಹರಿಸಲಾರವು. ಇಂದಿನ ಸಂದಿಗ್ಧ ಪರಿಸ್ಥಿತಿಯೇ ಅದಕ್ಕೆ ನಿದರ್ಶನವಾಗಿದೆ. ಭಾರತದ ನಿಜವಾದ ಸ್ಥಿತಿಯನ್ನು ತಿಳಿದುಕೊಂಡು, ಅದಕ್ಕೆ ಭಾರತೀಯ ಪರಿಹಾರಗಳನ್ನು ಕಂಡುಕೊಂಡು ಭಾರತೀಯರಾದ ನಾವೇ ನಮ್ಮ ಮಾದರಿಗಳಾಗಬೇಕಾಗಿದೆ.

ನಮ್ಮ ಮಾದರಿಯನ್ನು ನಿರ್ಮಿಸುವ ಈ ಪ್ರಯತ್ನಕ್ಕೆ ಭಾರತೀಯ ಚೈತನ್ಯ, ದರ್ಶನ, ಇತಿಹಾಸ ಮತ್ತು ಸಂಸ್ಕೃತಿಗಳ ಆಳವಾದ ಜ್ಞಾನ ಅಗತ್ಯ. ಈಗ ಪ್ರಚಲಿತವಿರುವ ಯುರೋ–ಕೇಂದ್ರಿತ ದೃಷ್ಟಿಯಿಂದಾಗಲಿ, ಭಾರತ ಶಾಸ್ತ್ರೀಯ ಇಲ್ಲವೆ ಪೌರಸ್ತ್ಯ ಪಂಡಿತನ ದೃಷ್ಟಿಯ ಮೂಲಕವಾಗಲಿ ಇದನ್ನು ರೂಪಿಸುವುದು ಸಾಧ್ಯವಿಲ್ಲ. ಸಾಹಿತಿಗಳು, ವಿಮರ್ಶಕರು ಮತ್ತು ಸಮಾಜ ಶಾಸ್ತ್ರಜ್ಞರು ಪಾತ್ರವಹಿಸಬೇಕಾದ ಸಮಯೋಜಿತ ಸಂದರ್ಭ ಇಲ್ಲಿದೆ.

ಬಾಬರಿ ಮಸೀದಿಯ ಪತನ ಹಾಗೂ ನಂತರ ನಡೆದ ಕೋಮು ಗಲಭೆಗಳಿಂದಾಗಿ ಜಾತ್ಯತೀತತೆಯ ಬಗ್ಗೆ ಬಹಳ ಜನರಲ್ಲಿ ಆಸ್ಥೆ ಕುದುರಿದೆ. ಆದಾಗ್ಯೂ ಈ ಬಗೆಗಿನ ಚರ್ಚೆ ಆಳಕ್ಕಿಳಿಯುತ್ತಿಲ್ಲ. ಉದಾಹರಣೆಗೆ, ಜಾತ್ಯತೀತತೆಯನ್ನು ಕಲಿಯಲು ನಾವು ೧೮ನೇ ಶತಮಾನದ ಫ್ರೆಂಚ್ ವಿಚಾರ ವಾದಕ್ಕೇಕೆ ಹೋಗಬೇಕು ? ನಮ್ಮ ಭಕ್ತರು, ಶರಣರು ಇಂಥ ಸಮಾಜಕ್ಕಾಗಿ ಹೋರಾಡಲಿಲ್ಲವೆ ? "ನನ್ನ ಮತ್ತು ನನ್ನ ದೇವರ ನಡುವಿನ ಸಂಬಂಧ ಎಷ್ಟೊಂದು ವೈಯಕ್ತಿಕವಾದದ್ದೆಂದರೆ (ಅವನು ನನ್ನ ಮಗ, ನನ್ನ ತಂದೆ, ನನ್ನ ತಾಯಿ, ನನ್ನ ಪತಿ, ನನ್ನ ಪ್ರಿಯತಮ ಇತ್ಯಾದಿ) ನನಗೆ ಯಾವ ಮಧ್ಯಸ್ಥರದೂ ಅಗತ್ಯವಿಲ್ಲ' ಎಂದಿದ್ದಾರೆ ಭಕ್ತರು. ಈ ನೆಲೆಯಿಂದ ಅವರು ಇನ್ನೂ ಮುಂದೆ ಹೋಗಿ ಹೇಳಿದರು : 'ದೇವರ ಸಂಬಂಧವಿರುವುದು ನನ್ನೊಂದಿಗೆ. ಸಾಮಾಜಿಕ ನಿಯಮಗಳಿಗೆ ಅವನು ಸಂಬಂಧಪಟ್ಟವನಲ್ಲ. ಎಲ್ಲ

ಸಾಮಾಜಿಕ ನೀತಿ ನಿಯಮಗಳು ಮನುಷ್ಯ ನಿರ್ಮಿತ. ಆದ್ದರಿಂದ ಅವು ಪ್ರಶ್ನಾತೀತವೇನೂ ಅಲ್ಲ. ಅವುಗಳನ್ನು ಬದಲು ಮಾಡಬಹುದು'. ಶೋಷಣೆಯಿಂದ ಕೂಡಿದ ಸಾಮಾಜಿಕ ನಿಬಂಧನೆಗಳಿಗೆ ತಳಕು ಹಾಕಿದ್ದ ದೈವೀಕರಣವನ್ನು ಈ ವಿಚಾರಧಾರೆ ತೆಗೆದು ಹಾಕಿತು. ೧೧ರಿಂದ ೧೭ನೇ ಶತಮಾನಗಳ ಕಾಲಾವಧಿಯಲ್ಲಿ ಭಾರತದ ತುಂಬೆಲ್ಲ ಜಾತಿ ಪದ್ಧತಿಯ ವಿರುದ್ಧ ನಡೆದ ದೊಡ್ಡ ಕಲ್ಲೋಲಕ್ಕೆ ಇದು ಕಾರಣವಾಯಿತು. ಭಾರತೀಯ ಜಾತ್ಯತೀತತೆಯ ಮೂಲ ಪುರುಷರೆಂದರೆ ಅವರೇ. ದುರ್ದೈವದಿಂದ ಅನೇಕರು ಯುರೋ–ಕೇಂದ್ರಿತ ದೃಷ್ಟಿಕೋನದಿಂದ ಅವರ ಬರೆಹಗಳ ಧಾರ್ಮಿಕ ಸ್ವರೂಪವನ್ನು ಮಾತ್ರ ನೋಡಿ, ದೈವಶಕ್ತಿಗೆ ಶರಣಾಗುವ ಆ ಚೈತನ್ಯವನ್ನು 'ಊಳಿಗ ಮಾನ್ಯ ಪದ್ಧತಿ'ಯ ಮೌಲ್ಯ ಪದ್ಧತಿಯೆಂದು ತಪ್ಪಾಗಿ ಭಾವಿಸಿದರು.

ಭಾರತೀಯ ಜಾತ್ಯತೀತತೆ ಎಂದರೆ ಎಲ್ಲ ಧರ್ಮಗಳಿಗೂ ಸರಕಾರಿ ಬೆಂಬಲವಲ್ಲ. ಧರ್ಮವನ್ನು ನಾಗರಿಕರ ಖಾಸಗಿ ಆಧಿಪತ್ಯಕ್ಕೆ ಬಿಟ್ಟು ದುಷ್ಟತನ ಮತ್ತು ಸಮಾಜೋ–ಆರ್ಥಿಕ ವಲಯದ ಅನ್ಯಾಯಗಳ ವಿರುದ್ಧ ಹೋರಾಡುವುದೇ ಅದರ ನಿಜವಾದ ಲಕ್ಷಣವಾಗಿದೆ.

ತುರ್ತಾಗಿ ಮತ್ತು ಅಗತ್ಯವಾಗಿ ನಡೆಯಬೇಕಾದ ಭಾರತದ ಪುನಶ್ಶೋಧನೆಯ ಬೌದ್ಧಿಕ ಕಾರ್ಯವನ್ನು ಹಿಂದುತ್ವದ ಬೆಂಬಲಿಗರು ತಮ್ಮ ಹಸಿ ಬಿಸಿ ಜಾತೀಯ ವಾದದಿಂದ ಬೇರೆಡೆಗೆ ಹೊರಳಿಸುತ್ತಿರುವುದು ದುರ್ದೈವದ ಸಂಗತಿಯಾಗಿದೆ. ಭಾರತೀಯತೆಯ ಪುನರ್ವ್ಯಾಖ್ಯಾನಕ್ಕೆ ಅಂಥವರಿಂದ ಯಾವ ಕಾಣಿಕೆಯೂ ಸಂದಿಲ್ಲ. ತಮ್ಮ ಅಭಿಪ್ರಾಯದ ಪ್ರಕಾರ ಹಿಂದು ಎನಿಸದವರ ವಿರುದ್ಧ ಕಿರಿಚಾಡುವುದೇ ಅಂಥವರ ಉದ್ಯೋಗವಾಗಿ ಬಿಟ್ಟಿದೆ. ಹೊರ ತೋರಿಕೆಗೆ ವಿಶ್ವವಾದವನ್ನು ತಿರಸ್ಕರಿಸುತ್ತ, ಒಳಗೊಳಗೆ ಪ್ರಗತಿ ವಿರೋಧದತ್ತ ಹಾಗೂ ಉಳಿದ ಭಾರತೀಯರನ್ನು ದ್ವೇಷಿಸುವತ್ತ ಅವರು ನಮ್ಮನ್ನು ಎಳೆಯಬಯಸುತ್ತಾರೆ. ತನ್ನ ಸ್ವಂತ ಅಂಗಾಂಗಗಳನ್ನೇ ದ್ವೇಷಿಸುವುದರ ಮೂಲಕ ಒಂದು ರಾಷ್ಟ್ರ ಹೇಗೆ ತನ್ನ ಪುನಶ್ಶೋಧ ಮಾಡಿಕೊಳ್ಳಬಲ್ಲದು ? ಅವರ ಸಮಾಜೋ–ಆರ್ಥಿಕ ಸಿದ್ಧಾಂತಗಳು ಪಶ್ಚಿಮದಿಂದ ಕಡ ತಂದ ಸ್ವತಂತ್ರ ಮಾರುಕಟ್ಟೆಯ ಸಿದ್ಧಾಂತಗಳಿಗಿಂತ ಯಾವ ರೀತಿಯಿಂದಲೂ ಭಿನ್ನವಾಗಿಲ್ಲ. ಸ್ವದೇಶಿ ಹೆಸರಿನಲ್ಲಿ ಭಾರತೀಯ ಬೃಹತ್ ಉದ್ಯಮಿಗಳ ರಕ್ಷಣೆಯೂ ಅದೇ ರೀತಿಯದಾಗಿದ್ದು, ಹಿಂದುತ್ವ ಇಂದು ವ್ಯಾಪಕವಾಗಿ ನಡೆಸಬೇಕಾದ ಚರ್ಚೆಯ ವ್ಯಂಗ್ಯಚಿತ್ರ ಮಾತ್ರ.

ಯಾವುದು ನಿಜವಾಗಿ ಭಾರತೀಯ ? ಎಂಬುದರ ಬಗ್ಗೆ ಗಾಢವಾದ ತಿಳಿವಳಿಕೆ ನಮಗಿದ್ದರೆ, ಅದರ ಮೂಲಕ ಎಂಥದು ಭಾರತೀಯವಾಗಿರತಕ್ಕದ್ದು ಎಂದು ಸ್ಪಷ್ಟಪಡಿಸಬಲ್ಲೆವಾದರೆ, ಸ್ಯಾಟ್‌ಲೈಟ್, ಟೆಲಿವಿಜನ್ ಮುಂತಾದವುಗಳ ಮೂಲಕ ನಡೆಸುವ ಸಾಂಸ್ಕೃತಿಕ ದಾಳಿಯ ಬಗ್ಗೆ ನಾವು ಚಿಂತಿಸಬೇಕಾಗಿಲ್ಲ. ಯಾಕೆಂದರೆ ಭಾರತೀಯತೆಯ ಈ ತಿಳಿವಳಿಕೆ ನಮ್ಮನ್ನು ಭದ್ರವಾದ ತಳಹದಿಯ ಮೇಲೆ ನಿಲ್ಲಿಸುತ್ತದೆ. ಆಗ ಭಾರತದ ಬಡತನ ಹಾಗೂ ಅನ್ಯಾಯದ ಸಮಸ್ಯೆಗಳನ್ನು ಭಾರತೀಯ ಮಾದರಿಯಲ್ಲಿ ಬಗೆಹರಿಸಲು ನಾವು ಕೊನೆಗೂ ಸಮರ್ಥರಾಗುತ್ತೇವೆ.

ನಮ್ಮ ದೇಶ, ನಮ್ಮ ಸಮಾಜ ಅತ್ಯಂತ ಸಂದಿಗ್ಧ ಪರಿಸ್ಥಿತಿಯಲ್ಲಿರುವಾಗ ಲೇಖಕನಾದವನು ಅದರಿಂದ ಪ್ರತ್ಯೇಕವಾಗಿ ಉಳಿಯಲಾರ. ನಮ್ಮ ದೇಶ ಇಂದು ಎದುರಿಸುತ್ತಿರುವ ಹಲವಾರು ಸಮಸ್ಯೆಗಳ ಬಗ್ಗೆ ರಾಜಕೀಯ ಕ್ರಿಯಾಸಕ್ತರು ವಿಚಾರ ಮಗ್ನರಾಗಿದ್ದಾರೆ. ಇಂಥ ಸಂದರ್ಭದಲ್ಲಿ ಲೇಖಕರಾಗಿ ನಾವೇನು ಮಾಡಬಲ್ಲೆವು ? ನಮ್ಮ ಎಲ್ಲ ಬಗೆಯ ಸೃಜನಾತ್ಮಕ ಬರವಣಿಗೆ ಹಾಗೂ ವಿಮರ್ಶೆಯ ಮೂಲಕ ಭಾರತದ ಪುನಶ್ಚೇತನ ಹಾಗೂ ಭಾರತೀಯತೆಯ ಪುನರ್ವ್ಯಾಖ್ಯಾನ ಅತ್ಯಂತ ಅಗತ್ಯವಾಗಿದೆಯೆಂದು ನಾನು ಭಾವಿಸಿದ್ದೇನೆ. ಭಾರತೀಯತೆಯ ಪುನರ್ವ್ಯಾಖ್ಯಾನವೆಂದರೆ ಈ ಮೊದಲೇ ಇದ್ದು ಸ್ಥಾವರವಾಗಿರುವುದರ ಗುಣ ವಿಶೇಷದ ವರ್ಣನೆ ಮಾಡುತ್ತ ಹೋಗುವುದಲ್ಲ. ಆದರೆ ಅದು ಹೇಗಿರತಕ್ಕದ್ದು ಎಂಬುದನ್ನು ಕ್ರಿಯಾತ್ಮಕವಾಗಿ ಸ್ಪಷ್ಟಗೊಳಿಸುವ ಪ್ರಕ್ರಿಯೆ ಕೂಡ ಆಗಿದೆ.

ಬಂಧುಗಳೇ,

ನೀವು ಪ್ರೀತಿಯಿಂದ, ಗೌರವದಿಂದ ಆಲಿಸುತ್ತಿದ್ದೀರೆಂದು ನಾನು ಒಂದಿಷ್ಟು ದೀರ್ಘವಾಗಿಯೇ ಮಾತನಾಡಿದೆ. ಬೇಸರವಾಗಿದ್ದರೆ ದಯವಿಟ್ಟು ಕ್ಷಮಿಸಬೇಕು.

ಕೊನೆಯದಾಗಿ ಆತ್ಮನಿವೇದನೆಯನ್ನೊಳಗೊಂಡ ನನ್ನ ಅಭಿವಂದನೆಯ ಕವಿತೆಯೊಂದಿಗೆ ಈ ಮಹಾಸಭೆಗೆ ಇನ್ನೊಮ್ಮೆ ಕೃತಜ್ಞತೆ ವ್ಯಕ್ತಪಡಿಸಿ ವಂದಿಸುತ್ತೇನೆ.

ನೀವೆಲ್ಲಿಯವರು, ನಾವಲ್ಲಿಯವರೆ ನಮ್ಮೂರು ದೂರವಿಲ್ಲ,
ಕನ್ನಡದ ತವರು ಕರೆದಾಗ ನಮಗೆ ಮೈನವಿರು, ಮಾತ್ರವಲ್ಲ-
ಗಂಗೋತ್ರಿಯಲ್ಲಿ ಮೂಡಿರುವ ಕನಸು ಮಾನಸದ ಹಂಸದಂತೆ
ಹಾಲು-ನೀರು ಬೇರ್ಪಡಿಸಿ ಮೇಲೆ ದಿಗ್ವಲಯಕೇರಿದಂತೆ.

ದೂರ-ಸನಿಹ ಆಧಾರ ಹಿಡಿದು ಹೊರಟಿಲ್ಲ ನಮ್ಮ ದಾರಿ;
ಸುತ್ತು ಬಳಸಿದರು ಹತ್ತು ಗಡಿಯ ಬತ್ತಿಗಳ ಕುಡಿಯ ಚಾಚಿ
ನೆಳಲು-ಬೆಳಕು ನಸುನಕ್ಕು ಮಿಕ್ಕ ಅಕ್ಕರತೆ ಬೆಂಬಲಾಗಿ
ತುಂಬು ನಂಬಿಗೆಯ ಬುತ್ತಿ ಬಿಚ್ಚುವೆವು ಸ್ವಸ್ಥಚಿತ್ತರಾಗಿ.

ಬದುಕು ಎಲ್ಲ ಹೊತ್ತಗೆಯಲಿಲ್ಲ, ಹುಗಿದಿಲ್ಲ ದುಡ್ಡಿನಂತೆ
ಮಾಡಿದಂತೆ ಅದರಾಟ ಮಾಟ, ಒಟ್ಟಿದರೆ ಗುಡ್ಡದಂತೆ;
ಕೈಗೆ ಸಿಕ್ಕು ಸಿಗದಂತೆ, ಬೂರಲದ ಅರಳಿ ಹೊರಳಿದಂತೆ
ಬಟ್ಟ ಬಯಲಿನಲಿ ಗುಟ್ಟನೊಡೆದು ಗಾಳಿಯಲಿ ಹರಡಿದಂತೆ.

ಸುತ್ತಮುತ್ತ ಒತ್ತಡದ ನಡುವೆ ಕಾರಂಜಿ ಪುಟಿವ ಜೀವ
ಮುತ್ತಿನಂತೆ ಮಾತೆತ್ತಿ ಹಿಡಿದು ಹೊಳೆಯಿಸುವ ಹಾವ-ಭಾವ
ಚಿತ್ತದಲ್ಲಿ ಮತ್ತಿಳಿದು ಮೇಲೆ ಪಲ್ಲವಿಸಿ ಹಿಗ್ಗುವರಳು
ಹುತ್ತದಿಂದ ಹೊರ ಬಂದ ಹಾಗೆ ಈ ಧ್ವನಿಗೆ ಇಂಥ ಕೊರಳು.

ಈ ಜನದ ಮಾತು ರೀತಿಯಲಿ ಹುದುಗಿ ಹದಗೊಂಡ ನೋವು-ಕಾವು–
ನೆಲದ ಜೊತೆಗೆ ಮಲಗೆದ್ದು ಹೊಲದ ಬದುವಿನಲಿ ಬಂದ ಮಾವು.
ಪ್ರೀತಿ, ಮುನಿಸು, ಮಾತ್ಸರ್ಯ ಆರ್ಯ-ದ್ರಾವಿಡರ ದ್ವಾರಬಂಧ
ದಾಟಿ ಹೊರಗೆ ನಿಜಗುಣಿಯು ಕಂಡ ಕನ್ನಡದ ನಾಟ್ಯಬಂಧ.

ಬರೆದುದೇನೊ ನಮಗರಿಯಲೆಂದೆ; ಅರಿತಾಗ ಬೇರೆ ಕೊರತೆ
ಮರೆತ ಮಾತು ನೂರೆಂಟು ಆದರೂ ಬೆರೆತ ಕುದಿಯು ಹೊರತೆ ?
ಹಳತು-ಹೊಸತು ಎಳೆದಾಡಿ ಹರಿದು ಹೊಸ ಬಟ್ಟೆ ಬೇಡುತಿಹವು-
ಅಳತೆ ಕೊಟ್ಟು ಹೊಲಿಸಿದರು ತೊಟ್ಟು ಮೈ ಕಟ್ಟು ಸಡಿಲು-ಬಿಗಿಯು.

ತಲೆಮಾರಿಗೊಂದು ಹೊಸ ಸುಗ್ಗಿ ಹಿಗ್ಗಿ ಬೆಳೆದಿಹುದು ತುಂಬಿ ಕಣಜ
ಸೋಮಾರಿಗೊಂದೆ ಬರಗಾಲ, ಸೃಷ್ಟಿ ಪರಮೇಷ್ಠಿ ಕಲೆಯ ತೇಜ.
ನೀರು-ಹಸಿರು, ಬಂಗಾರ-ಬಸಿರು ಒಳಗೊಳಗೆ ತಿರುಗಿ ಮಾಗಿ
ಹಗಲು-ಇರುಳು ಹಿಡಿದಿಹುದು ತೂಕ ನೆಲ-ಮುಗಿಲು ಪರಡೆಯಾಗಿ.

ಏಳುತಿಹುದು ಯೌವನವು ಕೊಡವಿ ಭಿಡೆ-ಭಾರ ತೂರಿ ಒಗೆದು
ಎಲ್ಲರೆದುರು ಮುಖವಾಡ ಕಿತ್ತು ನಿಜ ಬಣ್ಣ ಬಯಲಿಗೆಳೆದು.
ತುಳಿತ ಸಹಜ ನಡೆಯಲ್ಲ, ದಲಿತ ಹೆಸರಲ್ಲ ಮಾರಿಕೊಳಲು
ಹಂಡಬಂಡ ಜೀವನವ ಹಿಂಡಿ ಕುಡಿದಂತೆ ಕಳ್ಳಿ-ಹಾಲು.

ನೂರು ದಾರಗಳ ಗೋಜು ವ್ಯಕ್ತಿ ಅವ್ಯಕ್ತ ತಳಕು-ಮಳಕು;
ಒಳಗಿನೊರತೆ ತಿಳಿದಿಲ್ಲ, ಇಲ್ಲ ಔದಾರ್ಯದೊಂದು ಹಳಕು.
ಮೂಲೆ ಮೂಲ ಚಿಂತನೆಗೆ, ಬಯಲು ಆಗೀಗ ಎಷ್ಟೊ ಅಷ್ಟೆ
ಬೆಳೆವ ಬದುಕು ಕಂಡಲ್ಲೆ ಹಿಗ್ಗಿ ಉಳಿದೆಲ್ಲ ಮರೆತು ಬಿಟ್ಟೆ.

ಎದೆಯ ಕರೆಗೆ ಓಗೊಡುವುದೊಂದೆ ಒಡಗೂಡಿ ನಡೆವುದೊಂದೆ
ಹಿಡಿದ ದಾರಿ; ಅನುಮಾನಿಸಿದರು ಆಯಾಸವಿರದೆ ಬಂದೆ–
ಸ್ನೇಹ, ಪ್ರೀತಿ, ವಿಶ್ವಾಸ, ಹಾಸ ಮಧುಹಾಸ ತುಂಬಿದೊಸಗೆ
ವಧುವಿನಂತೆ ನಸುನಾಚಿ, ನಮಿಸಿ, ಈ ಜೀವ ಬಂತು ಹಸೆಗೆ.